ಮಾನಸಿ

ತಿಂಗಳ ಪತ್ರಿಕೆ. ಆಗಸ್ಟ ೧೯೮೯



ಮಾನಸ

ಸಂಪುಟ : ೨ ಸಂಚಿಕೆ : ೭

ಆಗಸ್ಟ್ ೧೯೮೯

ವಿಳಾಸ "ಮಾನಸ ತಿಂಗಳ ಪತ್ರಿಕೆ"

ಪಂಚಾಯಿತಿ ರಸ್ತೆ
ಕಾಡುಗೋಡಿ (ಪೊ.)
ಬೆಂಗಳೂರು—**560-067.**

ಬಿಡಿಪ್ರತಿ: 2 ರೂ.

ಸೂಚನೆ: ವಾರ್ಷಿಕ ಚಂದಾ :**20**ರೂ.
ಆಜೀವ ಚಂದಾ:**250**ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ ....

ಮುಖಪುಟ : **ಆರ್. ಎಂ. ಹಡಪದ್.**



ಸಂಪಾದಕೀಯ

ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಕೆಲವು ಮಹಿಳಾಸಂಸ್ಥೆಗಳು ಸ್ವಾತಂತ್ರ್ಯ ಕಾಲದಲ್ಲಿ ಹಾಗೂ ತದನಂತರ ಭಾರತದ ಸ್ವಾತಂತ್ರ್ಯಕ್ಕೋಸ್ಕರ ಹೋರಾಡುವ ಜೊತೆಗೇ ಮಹಿಳೆಯರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿರುವುದು ಈಗ ನಮಗೆ ಚಾರಿತ್ರಿಕ ಸಂಗತಿ.

೧೯೧೭ರಲ್ಲಿ ಪ್ರಾರಂಭವಾದ "ವಿಮೆನ್ ಇಂಡಿಯನ್ ಅಸೋಸಿಯೇಷನ್" ಮಹಿಳಾ ಓಟಿನ ಹಕ್ಕಿಗಾಗಿ ಹೋರಾಡಿದರೆ, ೧೯೨೭ರಲ್ಲಿ ಪ್ರಾರಂಭವಾದ "ಆಲ್ ಇಂಡಿಯ ವಿಮೆನ್ಸ್ ಕಾನ್ಫರೆನ್ಸ್" ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಗಮನಹರಿಸಿ ಹೋರಾಡಿತು. ಇಂಡಿಯಾಕ್ಕೆ ಸ್ವಾತಂತ್ರ್ಯ ಬೇಕೆನ್ನುವುದರ ಜೊತೆಗೆ ಮಹಿಳೆಯರಿಗೆ ವಿದ್ಯಾಭ್ಯಾಸದ ಸವಲತ್ತುಗಳು, ಬಾಲ್ಯವಿವಾಹ ನಿಷೇಧ, ವಿಧವಾ ವಿವಾಹ, ಓಟಿನ ಹಕ್ಕು, ಪರದಾ, ವರದಕ್ಷಿಣೆ ಇಂತಹ ಸಮಸ್ಯೆಗಳ ಸುತ್ತ ತಮ್ಮ ಬೇಡಿಕೆಗಳನ್ನಿತ್ತು ಇವರು ಹೋರಾಡತೊಡಗಿದ್ದರು. ಜೊತೆಗೆ ಮದುವೆ, ವಿಚ್ಛೇದನ ಹಾಗೂ ಆಸ್ತಿಯ ಹಕ್ಕುಗಳಿಗೆ ಸಂಬಂಧಿಸಿದ ಖಾಸಗಿ ಕಾನೂನುಗಳನ್ನು ತಿದ್ದುಪಡಿ ಮಾಡಬೇಕೆಂಬುದು ಸಹ ಇವರ ಬೇಡಿಕೆಯಾಗಿತ್ತು. ಈ ಸಂಸ್ಥೆಗಳು ಸಮಾಜದ ಸುಧಾರಣೆಯ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದ ವಿಚಾರವಾದಿ ಸಂಸ್ಥೆಗಳಾಗಿದ್ದವು.

ಸ್ವಾತಂತ್ರ್ಯದ ನಂತರ "ಆಲ್ ಇಂಡಿಯ ವಿಮೆನ್ಸ್ ಕಾನ್ಫರೆನ್ಸ್" ಮಹಿಳಾ ಹಕ್ಕುಗಳನ್ನು ಸಂರಕ್ಷಿಸುವ ಹೊಣೆಯಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮೇಲೆ ಸಾಕಷ್ಟು ಪ್ರಭಾವ ಬೀರಿತು. ಸಂಸತ್ತಿನಲ್ಲಿ "ಹಿಂದೂ ಕೋಡ್ ಬಿಲ್" ಅನ್ನು ತಯಾರಿಸುವಾಗ ಈ ಸಂಸ್ಥೆಯು ಮಹಿಳಾ ಹಕ್ಕುಗಳಿಗಾಗಿ "ಲಾಬಿ" ಮಾಡಿತು. ಈ ಪ್ರಯತ್ನದಿಂದಾಗಿ ೧೯೫೫–೫೬ರಲ್ಲಿ ವಿವಾಹ, ವಿಚ್ಛೇದನ, ದತ್ತು ಮುಂತಾದವುಗಳಿಗೆ ಸಂಬಂಧಪಟ್ಟಂತೆ ಕೆಲವು ಕಾನೂನುಗಳು ಜಾರಿಗೆ ಬಂದವು. ಸ್ವಾತಂತ್ರ್ಯ ನಂತರವೂ ಸಹ ಐದು ವರ್ಷಗಳ ಕಾಲ ಈ ಸಂಸ್ಥೆಯು ಕಾನೂನು ತಿದ್ದುಪಡಿಗಾಗಿ ಹೋರಾಡಿತು. ಈ ಸಂಸ್ಥೆಯ ಸ್ತ್ರೀಯರು ಕುಟುಂಬದಲ್ಲಿನ ತಮ್ಮ ಸಾಂಪ್ರದಾಯಿಕ ಪಾತ್ರವನ್ನು ಒಪ್ಪಿಕೊಂಡವರಾಗಿದ್ದರು. ತಮ್ಮ ಕುಟುಂಬದಲ್ಲಿನ ತಂದೆ, ಪತಿ, ಸಹೋದರರಿಗೆ ಪೂರಕವಾಗಿ, ಬೆಂಬಲಿಗರಾಗಿ ತಾವು ರಾಜಕೀಯದಲ್ಲಿ ಹೋರಾಡಬೇಕು ಎಂಬುದು ರಾಜಕೀಯದಲ್ಲಿ ಸ್ತ್ರೀಯರ ಪಾತ್ರದ ಬಗ್ಗೆಗಿನ ಇವರ ನಿಲುವಾಗಿತ್ತು. ಮನೆ ಹಾಗೂ ಕೌಟುಂಬಿಕ ಜವಾಬ್ದಾರಿಯಲ್ಲಿ ಮಹಿಳೆಯ ಪಾತ್ರ ಮಹತ್ತರವಾದದ್ದು ಎಂಬ ಸಾಂಪ್ರದಾಯಿಕ ನಿಲುವನ್ನು ಒಪ್ಪಿಕೊಂಡ ಇವರು ಲಿಂಗಾಧಾರಿತ ಸಂಬಂಧಗಳನ್ನು, ಅವುಗಳ ಸೂಕ್ಷ್ಮತೆಗಳನ್ನು ಒಂದು ಸಮಸ್ಯೆಯಾಗಿ ಪರಿಗಣಿಸಲೆ ಇಲ್ಲ. ರಾಷ್ಟ್ರವನ್ನು ಒಂದು ದೊಡ್ಡ ಕುಟುಂಬ ಎಂದು ಭಾವಿಸಿದ ಇವರೇ ತಾವು ಕುಟುಂಬದಲ್ಲಿ ವಹಿಸಿದ ಪಾತ್ರವನ್ನೇ ರಾಜಕೀಯದಲ್ಲೂ ವಹಿಸಬೇಕು ಎಂದು ಬಲವಾಗಿ ನಂಬಿದ್ದರು. ಇವರ ನಿಲುವುಗಳೇ ಮಹಿಳಾ ಹಕ್ಕುಗಳ ಬಗ್ಗೆಗಿನ ಇವರ ಆಶಯಗಳಲ್ಲಿ ಮಿತಿಯನ್ನೊಡ್ಡಿಸಿತು ಎಂಬ ಅಂಶವನ್ನೂ ನಾವು ಗುರುತಿಸಬಹುದಾಗಿದೆ.

ಮಹಿಳಾಸಾಹಿತ್ಯ ಮತ್ತು ಮಹಿಳಾಸಾಹಿತ್ಯ ಸಮ್ಮೇಳನ: ಕೆಲವು ವಿಚಾರಗಳು.

ಕನ್ನಡ ಸಾಹಿತ್ಯ ಪರಿಷತ್ತು ನಡೆಸುತ್ತ ಬಂದಿರುವ ಸಾಹಿತ್ಯ ಸಮ್ಮೇಳನಗಳ ಒಂದು ಭಾಗವಾಗಿ ಮಹಿಳಾಗೋಷ್ಠಿಗಳು ಪ್ರಾರಂಭವಾದವು. ಮಹಿಳಾಗೋಷ್ಠಿಗಳನ್ನು ಸಾಮಾನ್ಯವಾಗಿ ಅಂದಿನ ಮಹಿಳೆಯರು ಸ್ವಾಗತಿಸಿದರೆನ್ನಬಹುದು. ಈ ಗೋಷ್ಠಿಗಳಲ್ಲಾದರೂ ಮಹಿಳೆಯರು ಸ್ವಲ್ಪ ಸಂಕೋಚ ಬಿಟ್ಟು ಮಾತನಾಡಬಹುದು. ಮಹಿಳೆಯರಿಗೆ ಹೆಚ್ಚು ಅವಕಾಶ ಸಿಕ್ಕೀತು — ಎಂಬಿವೇ ಮೊದಲಾದ ಕಾರಣಗಳು ಮಹಿಳಾ ಗೋಷ್ಠಿಗಳ ಪ್ರಾರಂಭ ಮತ್ತು ಮುಂದುವರಿಕೆಗೆ ಕಾರಣವಾಗಿರಬಹುದು. ಈ ವೇಳೆಗೆ ಮಹಿಳಾಸಾಹಿತ್ಯದ ಅಗತ್ಯ ಮತ್ತು ವೈಶಿಷ್ಟ್ಯದ ಬಗ್ಗೆಯೂ ಜಿಜ್ಞಾಸೆ ಅಲ್ಲಲ್ಲಿ ಶುರುವಾಗಿತ್ತು. ಮಹಿಳೆಯರ ಬದುಕಿನ ಅಭಿವ್ಯಕ್ತಿಯೂ ಸಾಹಿತ್ಯದಲ್ಲಿ ಸೇರಬೇಕೆಂಬ ಅಭಿಪ್ರಾಯ ತಲೆದೋರಲಾರಂಭಿಸಿತ್ತು. ಆದರೆ ಮಹಿಳಾ ಸಾಹಿತ್ಯದ ಈ ವಿಶೇಷ ಗುಣದ ಜಿಜ್ಞಾಸೆಗಾಗಿಯೇ ಮಹಿಳಾಗೋಷ್ಠಿಗಳು ಮೀಸಲಾಗಿ ಉಳಿಯಲಿಲ್ಲ. ಬದಲಿಗೆ ಸಮಾಜದಲ್ಲಿ ಈಗಾಗಲೇ ಇದ್ದ ಲಿಂಗಾಧಾರಿತ ವರ್ಗೀಕರಣವನ್ನು ಸಾಹಿತ್ಯ ಕ್ಷೇತ್ರದಲ್ಲಿ ಮುಂದುವರೆಸುವ ಒಂದು ರೀತಿ ಇದಾಯಿತು. ಈ ಬಗೆಯ ವರ್ಗೀಕರಣದಿಂದಾಗಿ ಮಹಿಳಾವರ್ಗದ ಬಗ್ಗೆ ಹೊರಗಿನ ಸಮಾಜದಲ್ಲಿರುವ ಉಪೇಕ್ಷಾ ಲಘುಭಾವ ಅನಧಿಕೃತವಾಗಿ ಇಲ್ಲಿಯೂ ಮುಂದುವರೆಯಿತು. ೧೯೭೮ರಲ್ಲಿ ನಡೆದ ೫೦ನೆಯ ಸಾಹಿತ್ಯ ಸಮ್ಮೇಳನದ ಹೊತ್ತಿಗೇ ಕೆಲವಾದರೂ ಮಹಿಳೆಯರಿಗೆ ಇಂಥ ಮಹಿಳಾಗೋಷ್ಠಿಗಳ ಅಪಾಯ ಮನವರಿಕೆಯಾದಂತೆ ತೋರುತ್ತದೆ. ಈ ಸಂದರ್ಭದಲ್ಲಿ ಹೊರಬಂದ "ವೀರಮಾತೆ" ಪತ್ರಿಕೆಯ ಸಂಪಾದಕೀಯ ಇಂಥ ವಿರೋಧವನ್ನು ವ್ಯಕ್ತಪಡಿಸಿದೆ. ೧೯೭೪ರಲ್ಲಿ ಮಂಡ್ಯದಲ್ಲಿ ನಡೆದ ಮಹಿಳಾಗೋಷ್ಠಿಯ ಸ್ವರೂಪದ ಬಗ್ಗೆಯೂ ವಿರೋಧ ವ್ಯಕ್ತವಾಯಿತು. ಸಾಹಿತ್ಯ ಸಮ್ಮೇಳನಗಳ ಒಳಹೊರಗೆ ಬಂದ ವಿರೋಧವೂ ಕಾರಣವಾಗಿ ಇಂಥ ಮಹಿಳಾಗೋಷ್ಠಿಗಳು ಕಣ್ಮರೆಯಾದವು. ಆದರೆ ಮಹಿಳಾ ಸಮ್ಮೇಳನಗಳು ತಲೆಯೆತ್ತಿದವು.

ಕಳೆದ ಹತ್ತು ಹನ್ನೆರಡು ವರ್ಷಗಳಿಂದ ಕರ್ನಾಟಕದಲ್ಲಿ ಮಹಿಳಾಸಾಹಿತ್ಯಕ್ಕೆ ವಿಶೇಷ ಗಮನ ಸಲ್ಲುತ್ತಿದೆ. ಮಹಿಳಾಸಾಹಿತ್ಯ ಸಮ್ಮೇಳನಗಳು ನಡೆಯುತ್ತಿವೆ. ಲೇಖಕಿಯರ ಸಂಘ ಅಸ್ತಿತ್ವಕ್ಕೆ ಬಂದಿದೆ. ಆದರೆ ಮಹಿಳಾಸಾಹಿತ್ಯವೆಂಬುದರ ಬಗ್ಗೆ ಸಾಕಷ್ಟು ಅನುಮಾನಗಳೂ ಗೊಂದಲಗಳೂ ಇವೆ. ಮಹಿಳಾಸಾಹಿತ್ಯ ಪುರುಷ ಸಾಹಿತ್ಯಕ್ಕಿಂತ ಕಡಿಮೆ ದರ್ಜೆಯದು, ಇವರಿಗೂ ಒಂದಿಷ್ಟು ಪ್ರೋತ್ಸಾಹ ಕೊಡೋಣ ಎಂಬ ಒಂದು ಬಗೆಯ ರಕ್ಷಕ ಧೋರಣೆ ಒಂದು ಕಡೆ, ಮಹಿಳಾಸಾಹಿತ್ಯವನ್ನು ನೋಡಲು ಬೇಕಾದ ಒಂದು ವಿಶಿಷ್ಟದೃಷ್ಟಿಕೋನವಿಲ್ಲದೆ, ಚಾಲ್ತಿಯಲ್ಲಿದ್ದ ಸಾಹಿತ್ಯ ಸಮ್ಮೇಳನ (ಪುರುಷಸಾಹಿತ್ಯ) ವನ್ನು ಅನುಕರಿಸಿ ಒಂದಿಷ್ಟು ಅವಕಾಶವನ್ನು ಹೆಚ್ಚುಮಾಡಿಕೊಳ್ಳುವ ಹಂಬಲ ಮತ್ತೊಂದೆಡೆ. ಇವುಗಳ ನಡುವೆ ನಡೆಯುತ್ತ ಬಂದ ಮಹಿಳಾಸಾಹಿತ್ಯ ಸಮ್ಮೇಳನಗಳೂ ಕೆಲವು ರಚನಾತ್ಮಕ ಪರಿಣಾಮಗಳನ್ನು ಉಂಟುಮಾಡಿವೆ. ಮುಖ್ಯವಾಗಿ ಮಹಿಳಾಸಾಹಿತ್ಯದ ಬಗ್ಗೆ ಅನೇಕ ಪ್ರಶ್ನೆಗಳನ್ನು ಎತ್ತುವಂತೆ ಮಾಡಿವೆ ಎಂಬುದು ಗಮನಿಸಬೇಕಾದ ಸಂಗತಿ. ಆದರೆ ಈ ಸಮ್ಮೇಳನಗಳ ಅಸ್ತಿತ್ವಕ್ಕೆ ಕಾರಣವಾಗುವ ಅಂಶಗಳ ಬಗ್ಗೆ ಮಂಥನ ನಡೆದು ಒಂದಿಷ್ಟು ಆಳವಾದ, ದೂರದೃಷ್ಟಿಯೊಂದಿಗೆ ಈ ಸಮ್ಮೇಳನಗಳು ಪ್ರಾರಂಭವಾಗಿದ್ದರೆ ಇನ್ನೂ ಸಾರ್ಥಕವಾದ ಹಾದಿಯಲ್ಲಿ ಸಾಗಬಹುದಿತ್ತೇನೋ ಎನಿಸುತ್ತದೆ. ಮಹಿಳೆಯರ ಸಾಹಿತ್ಯದ ವಿಶಿಷ್ಟಾಂಶಗಳನ್ನು ಅದು ಹುಟ್ಟಿಬಂದ ಸಂದರ್ಭ, ಪರಂಪರೆಯ ಹಿನ್ನೆಲೆಯಲ್ಲಿ ಸ್ತ್ರೀವಾದಿ ದೃಷ್ಟಿಕೋನದಿಂದ ನೋಡುವುದಾದಲ್ಲಿ ಮಹಿಳಾಸಾಹಿತ್ಯವನ್ನು ಪ್ರತ್ಯೇಕವಾಗಿಯೂ ನೋಡುವುದಕ್ಕೆ ಅವಕಾಶವಿದೆಯೇ ವಿನಾ ಸಾಹಿತ್ಯವನ್ನು ಅದರ ಸಾಂಸ್ಕೃತಿಕ, ಸಮಕಾಲೀನ ಬದುಕಿನ ಬೇರಿನೊಂದಿಗೆ ಪರಿಗಣಿಸಲು ಇಚ್ಛಿಸದ ಒಂದು ಬಗೆಯ "ನಿರ್ಗುಣ" ಸಾಹಿತ್ಯ ವಿಮರ್ಶೆಯ ಮಾನದಂಡದಿಂದಲೇ ನೋಡುವುದಾದರೆ ಈ ವಿಭಜನೆ ಸಮರ್ಥನೀಯವೆಂದು ತೋರುವುದಿಲ್ಲ. ತಮ್ಮ ಪ್ರತ್ಯೇಕತೆಯ ನೆಲೆಯ ಸ್ವರೂಪವನ್ನು ಮನದ

ಟ್ಟು ಮಾಡಿಕೊಳ್ಳದಿದ್ದರೆ ಮಹಿಳಾಸಾಹಿತ್ಯ ಸಮ್ಮೇಳನಗಳು ಅರ್ಥಹೀನವಾಗುತ್ತವೆ.

ಮಹಿಳಾಸಾಹಿತ್ಯ (ಮಸಾ) ಎಂಬುದಿರಬೇಕಾದರೆ ಮಹಿಳಾ ಸಂವೇದನೆ ಎಂಬುದೊಂದು ಇರಬೇಕು ಅಥವಾ ಮಹಿಳೆಯರ ಸಂವೇದನೆ ಕೆಲವಾದರೂ ವಿಶಿಷ್ಟಾಂಶಗಳನ್ನು ಸೇರಿಸುವಂಥ ಜೈವಿಕ ಹಾಗೂ ಜೀವನ ಸಂದರ್ಭ, ಪರಂಪರೆ, ದೃಷ್ಟಿಕೋನ ಸ್ತ್ರೀಯರಿಗಿದೆಯೆ ಎಂಬುದು ಮಸಾ.ದ ಪ್ರತ್ಯೇಕ ನೆಲೆಯೊಂದರ ಬಗ್ಗೆ ಚಿಂತಿಸುವಾಗ ಎದುರಾಗುವ ಪ್ರಶ್ನೆ ಅಥವಾ ಪ್ರಶ್ನಮಾಲೆ. ಮಹಿಳೆ ದೈಹಿಕವಾಗಿ, ಕೆಲವು ಮನಶ್ಶಾಸ್ತ್ರಜ್ಞರು ಹೇಳುವ ಹಾಗೆ ಮಾನಸಿಕವಾಗಿಯೂ ಪುರುಷರಿಗಿಂತ ಭಿನ್ನ. ಈ ವಿಭಿನ್ನತೆಯನ್ನೇ ಗುಣಹೀನತೆ, ಅವಗುಣತೆಯೆಂದು ಸಮಾಜದ ಶ್ರೇಣಿಯ ನೆಲೆಗಳನ್ನು ನಿರ್ಣಯಿಸುವ ಶಕ್ತಿಯನ್ನು ಹೊಂದಿದ್ದ ಪುರುಷಪ್ರಧಾನ ಸಂಸ್ಕೃತಿ ತಿಳಿದ

ಮಹಿಳೆಯರ ಸಾಹಿತ್ಯದ ವಿಶಿಷ್ಟಾಂಶಗಳನ್ನು ಅದು ಹುಟ್ಟಿ ಬಂದ ಸಂದರ್ಭ, ಪರಂಪರೆಯ ಹಿನ್ನೆಲೆಯಲ್ಲಿ ಸ್ತ್ರೀವಾದಿ ದೃಷ್ಟಿಕೋನದಿಂದ ನೋಡುವುದಾದಲ್ಲಿ ಮಹಿಳಾಸಾಹಿತ್ಯವನ್ನು ಪ್ರತ್ಯೇಕವಾಗಿಯೂ ನೋಡುವುದಕ್ಕೆ ಅವಕಾಶವಿದೆಯೇ ವಿನಾ ಸಾಹಿತ್ಯವನ್ನು ಅದರ ಸಾಂಸ್ಕೃತಿಕ, ಸಮಕಾಲೀನ ಬದುಕಿನ ಬೇರಿನೊಂದಿಗೆ ಪರಿಗಣಿಸಲು ಇಚ್ಛಿಸಿದ ಒಂದು ಬಗೆಯ 'ನಿರ್ಗುಣ' ಸಾಹಿತ್ಯ ವಿಮರ್ಶೆಯ ಮಾನದಂಡದಿಂದಲೇ ನೋಡುವುದಾದರೆ ಈ ವಿಭಜನೆ ಸಮರ್ಥನೀಯವೆಂದು ತೋರುವುದಿಲ್ಲ. ತಮ್ಮ ಪ್ರತ್ಯೇಕತೆಯ ನೆಲೆಯ ಸ್ವರೂಪವನ್ನು ಮನದಟ್ಟು ಮಾಡಿಕೊಳ್ಳದಿದ್ದರೆ ಮಹಿಳಾ ಸಾಹಿತ್ಯ ಸಮ್ಮೇಳನಗಳು ಅರ್ಥಹೀನವಾಗುತ್ತವೆ.

ದ್ದುಂಟು, ಸ್ತ್ರೀ ಸಮೂಹ ಅದನ್ನು ನಂಬಿದ್ದುಂಟು. ನೈಸರ್ಗಿಕ ಭಿನ್ನತೆ, ಭಿನ್ನತೆಯನ್ನು ಅರ್ಥೈಸಿದ ದೃಷ್ಟಿಕೋನದಿಂದ ಅವಳ ಬದುಕಿನ ಸ್ವರೂಪ ಬೇರೆಯಾಯಿತು. ಆ ಸ್ವರೂಪವನ್ನು ಬೇರೆ ಮಾಡುವ ರೀತಿಯಲ್ಲಿ ಕೌಟುಂಬಿಕ, ಸಾಮಾಜಿಕ, ರಾಜಕೀಯ ಆರ್ಥಿಕ ರಚನೆಯಿತ್ತು. ಇವೆಲ್ಲ ಅವಳ ಇತಿಹಾಸಕ್ಕೆ ಬೇರೆಯೇ ತಿರುವನ್ನು ಕೊಟ್ಟವು. ಶತಶತಮಾನಗಳಿಂದ ಗಂಡು ಹೆಣ್ಣು ಕೂಡಿ ಬದುಕಿದವು. ಆದರೆ ಅವರಿಬ್ಬರಿಗೂ ಪರಿಚಿತವಾದ ಒಂದು ಸಾಮಾನ್ಯ ಪ್ರಪಂಚವಿದ್ದಂತೆ ಹೆಣ್ಣಿಗೆ ಅವಳದೇ ಆದ ಭೌತಿಕ, ಮಾನಸಿಕ ಪ್ರಪಂಚ

ಉಳಿಯಿತು. ಈ ಹಿನ್ನೆಲೆಯಲ್ಲಿ ಮಹಿಳೆಯ ಸ್ಪಂದನದ, ಗ್ರಹಿಕೆಯ, ಸ್ವೀಕಾರದ ಲಯ, ಗತಿ, ತೀವ್ರತೆಗಳು ಭಿನ್ನವಾದವು. ಈ ಭಿನ್ನತೆ ಬದುಕನ್ನು ನೋಡುವ ಅವಳ ದೃಷ್ಟಿಕೋನಕ್ಕೂ ಒಂದು ವಿಶಿಷ್ಟತೆಯನ್ನು ತಂದು

ಎಲ್ಲ ಬಗೆಯ ಸಾಹಿತ್ಯವೂ ವಿಶೇಷಣಗಳಿಲ್ಲದ ಸಾಹಿತ್ಯವೇ ಆದರೂ ಸ್ಪಷ್ಟತೆ ಮತ್ತು ಅಧ್ಯಯನದ ಉಪಯುಕ್ತತೆಗಾಗಿ ಹೆಣ್ಣಿನ ದೃಷ್ಟಿಕೋನದಿಂದ ಬದುಕನ್ನು ಹಿಡಿಯುವ, ಹೆಣ್ಣಿನ ಮನಸ್ಸು ಬಾಹ್ಯದೊಂದಿಗೆ ಪ್ರತಿಕ್ರಿಯಿಸುವ ರೀತಿಯನ್ನು ಒರಗೆ ಹಚ್ಚುವ, ಹೆಣ್ಣಿನೊಳಗನ್ನು ತೋಡಿ ತೋರುವ ಸಾಹಿತ್ಯವನ್ನು ಮಹಿಳಾ ಎಂಬ ವಿಶೇಷಣದೊಂದಿಗೆ ಗುರುತಿಸಬಹುದೆಂದು ತೋರುತ್ತದೆ.

ಕೊಟ್ಟಿದೆ. ಪುರುಷರದಕ್ಕಿಂತ ಭಿನ್ನವಾದ ಎಷ್ಟೋ ನಿರೀಕ್ಷೆ, ಸುಖ, ದುಃಖ, ಹತಾಶೆ, ಕನಸುಗಳು ಅವಳವಾಗಿವೆ. ಸಾಹಿತ್ಯ ಬದುಕಿನ ವೈಯಕ್ತಿಕ ಗ್ರಹಿಕೆಯನ್ನು ಆಧರಿಸಿದೆ, ಬರಹಗಾರನದೇ ಆದ ಅನುಭವ ಅವನನ್ನು ಸಿಕ್ಕಿಸುವ ಭಾವವಲಯಗಳಲ್ಲಿ ಸಾಹಿತ್ಯ ಸೃಷ್ಟಿಯಾಗುತ್ತದೆ ಎಂಬುದನ್ನು ನಾವು ಒಪ್ಪುವುದಾದರೆ ಲೇಖಕಿಯ ಬರಹದ ಹಿಂದೆ ಇರುವ ಈ ವೈಯಕ್ತಿಕತೆಯಲ್ಲಿ ಹೆಣ್ಣಾಗಿ ಅವಳು ಬದುಕನ್ನು ಕಂಡುದುದರ ಪಾತ್ರವಿಲ್ಲವೆ? ಕೊನೆಯಲ್ಲಿ ಎಲ್ಲ ಬಗೆಯ ಸಾಹಿತ್ಯವೂ ವಿಶೇಷಣಗಳಿಲ್ಲದ ಸಾಹಿತ್ಯವೇ ಆದರೂ ಸ್ಪಷ್ಟತೆ ಮತ್ತು ಅಧ್ಯಯನದ ಉಪಯುಕ್ತತೆಗಾಗಿ ಹೆಣ್ಣಿನ ದೃಷ್ಟಿಕೋನದಿಂದ ಬದುಕನ್ನು ಹಿಡಿಯುವ, ಹೆಣ್ಣಿನ ಮನಸ್ಸು ಬಾಹ್ಯದೊಂದಿಗೆ ಪ್ರತಿಕ್ರಿಯಿಸುವ ರೀತಿಯನ್ನು ಒರೆಗೆ ಹಚ್ಚುವ, ಹೆಣ್ಣಿನೊಳಗನ್ನು ತೋಡಿ ತೋರುವ ಸಾಹಿತ್ಯವನ್ನು ಮಹಿಳಾ ಎಂಬ ವಿಶೇಷಣ

ಸಾಹಿತ್ಯವನ್ನು 'ಶುದ್ಧ ಸಾಹಿತ್ಯಕ' ದೃಷ್ಟಿಯಿಂದ ನೋಡಿ ಅದರ ತಂತ್ರ ರಚನಾದಿಗಳನ್ನು ವಿವರಿಸುವ, ವಿಶ್ಲೇಷಿಸುವ ಕೆಲಸ ಸಾಹಿತ್ಯವಿಮರ್ಶೆಗೆ ಸೇರಿದ್ದು. ಆದರೆ ಆ ಚೌಕಟ್ಟಿನೊಳಗೆ ಮಾತ್ರ, ವಿಮರ್ಶೆ ವಿಹರಿಸಬೇಕು, ಸಾಹಿತ್ಯದ ಅನುಭವ ದ್ರವ್ಯ, ದೃಷ್ಟಿಕೋನ ಹಾಗೂ ಅವು ಪ್ರಭಾವಿಸುವ ನಿರ್ವಹಣೆ ಮೊದಲಾದವುಗಳು ಯಾವ ಸಂದರ್ಭಗಳಿಂದ ಮೂಡಿಬಂದಿದೆಯೋ ಆ ಸಂದರ್ಭಗಳ ಹಿನ್ನೆಲೆ, ಒಳರಚನೆ, ವಿನ್ಯಾಸಗಳನ್ನು ಗಮನದಲ್ಲಿಟ್ಟುಕೊಂಡ ಸಾಹಿತ್ಯದ ವಿಶ್ಲೇಷಣೆ, ಮೌಲ್ಯಮಾಪನ ನಿಷಿದ್ಧವೆನ್ನುವುದು ನನಗೆ ಸಮ್ಮತವಲ್ಲದ ಸಂಗತಿ.

ದೊಂದಿಗೆ ಗುರುತಿಸಬಹುದೆಂದು ತೋರುತ್ತದೆ.

ಮ. ಸ ದ ಅಥವಾ ಅಂಥದೊಂದು ವೇದಿಕೆಯ

ಸಮರ್ಥನೆ ಮೇಲೆ ಪ್ರಸ್ತಾಪಿಸಿದಂಥ ಮಸಾ.ವನ್ನು ಹಾಗೂ ಒಟ್ಟು ಸಾಹಿತ್ಯವನ್ನು ಒಂದು ಸ್ತ್ರೀಪರ ಅಥವಾ ಸ್ತ್ರೀವಾದಿ ದೃಷ್ಟಿಕೋನದಿಂದ ನೋಡುವುದರಲ್ಲಿಯೂ ಇದೆ ಎಂದುಕೊಳ್ಳುತ್ತೇನೆ. ಸ್ತ್ರೀವಾದಿ ದೃಷ್ಟಿಕೋನ ಇಂದು ಜಾಗತಿಕ ನೆಲೆಯಲ್ಲಿ ಅಪಾರ ಚರ್ಚೆಗೆ ಒಳಗಾಗಿರುವ, ಬಿರುಸಿನಿಂದ ಬೆಳೆಯುತ್ತಿರುವ ಒಂದು ಸಾಹಿತ್ಯ ವಿಮರ್ಶೆಯ ನೆಲೆ, ಕನ್ನಡದಲ್ಲಿ ಅಡಿಯಿಡುತ್ತಿರುವ ಈ ಬಗೆಯ ವಿಮರ್ಶೆಯ ಬಗ್ಗೆ ಕೆಲವು ಅನುಮಾನ, ಆಕ್ಷೇಪಣೆಗಳೂ ಅಡಿಯಿಡುತ್ತಿವೆ. ಇದರ ವಿವರವಾದ ಚರ್ಚೆಗೆ ಇದು ಸ್ಥಳವಲ್ಲವಾದರೂ ಸಂಕ್ಷಿಪ್ತವಾಗಿ ಈ ಬಗೆಗಿನ ನನ್ನ ನಂಬಿಕೆಯನ್ನು ಹೀಗಿಡಬಹುದು: ಸಾಹಿತ್ಯವನ್ನು "ಶುದ್ಧ ಸಾಹಿತ್ಯಕ" ದೃಷ್ಟಿಯಿಂದ ನೋಡಿ ಅದರ ತಂತ್ರ, ರಚನಾದಿಗಳನ್ನು ವಿವರಿಸುವ, ವಿಶ್ಲೇಶಿಸುವ ಕೆಲಸ ಸಾಹಿತ್ಯವಿಮರ್ಶೆಗೆ ಸೇರಿದ್ದು. ಅದರೆ ಆ ಚೌಕಟ್ಟಿನೊಳಗೆ ಮಾತ್ರ ವಿಮರ್ಶೆ ವಿಹರಿಸಬೇಕು, ಸಾಹಿತ್ಯದ ಅನುಭವ ದ್ರವ್ಯ, ದೃಷ್ಟಿಕೋನ ಹಾಗೂ ಅವು ಪ್ರಭಾವಿಸುವ ನಿರ್ವಹಣೆ ಮೊದಲಾದವುಗಳು ಯಾವ ಸಂದರ್ಭಗಳಿಂದ ಮೂಡಿಬಂದಿವೆಯೋ ಆ ಸಂದರ್ಭಗಳ ಹಿನ್ನೆಲೆ, ಒಳರಚನೆ, ವಿನ್ಯಾಸಗಳನ್ನು ಗಮನದಲ್ಲಿಟ್ಟುಕೊಂಡ ಸಾಹಿತ್ಯದ ವಿಶ್ಲೇಷಣೆ, ಮೌಲ್ಯಮಾಪನ ನಿಷಿದ್ಧವೆನ್ನುವುದು ವನಗೆ ಸಮ್ಮತವಲ್ಲದ ಸಂಗತಿ.

ಮಸಾ ಮತ್ತು ಸಾಹಿತ್ಯವನ್ನು ನೋಡುವ ಮಹಿಳಾದೃಷ್ಟಿ— ಇವು ಮಸಾ ಸಮ್ಮೇಳನಗಳೆಂಬ ಪ್ರತ್ಯೇಕ ಸಮ್ಮೇಳನಗಳ ಇರವಿಗೆ ಅರ್ಥ ತುಂಬಬೇಕಾಗಿದೆ. ಮಸಾ.ಕ್ಕೆ ಹೊರಗಿನ ಆಡಂಬರ, ಒಂದು ಒತ್ತಾಸೆ ಈ ಸಮ್ಮೇಳನಗಳಲ್ಲಿ ದೊರೆಯುತ್ತಿದೆ, ಆದರೆ ಅದು ಕೆಲವು ತೀವ್ರವಾದ ಆಂತರಿಕವಾದ ತೊಡರುಗಳನ್ನು ಎದುರಿಸುತ್ತಲೂ ಇದೆ. ಅಂಥ ಕೆಲವು ತೊಡರುಗಳನ್ನು ಇಲ್ಲಿ ಪ್ರಸ್ತಾಪಿಸಬಹುದು.

ಮಸಾ.ದ ಮುಂದಿರುವ ಸಾಧನೆಯ ಹಾದಿ ನಿಡಿದಾದದ್ದು, ಅದ್ಭುತವಾದದ್ದು. ಅದು ಸಾಧಿಸಬಹುದಾದ ಹಲವು ವಿಕ್ರಮಗಳಲ್ಲಿ ಒಂದು ಸ್ತ್ರೀ ಸ್ವಭಾವಕ್ಕೆ ಅದು ಹಿಡಿಯಬಹುದಾದ ಕನ್ನಡಿ, ಸ್ತ್ರೀಯರೆಲ್ಲರೂ "ಸ್ತ್ರೀ ಸ್ವಭಾವ" ಪ್ರಧಾನವಾಗಿರಲೇಬೇಕೆಂಬ ನಿಯಮವಿಲ್ಲ. ಆದರೆ ಬಹುಸಂಖ್ಯಾತ ಸ್ತ್ರೀಯರಲ್ಲಿ ಇದೆಯೆನ್ನಲಾದ ಸ್ತ್ರೀ ಸ್ವಭಾವವೆನಿಸಿಕೊಂಡ ಗುಣಗಳನ್ನು ಹೆಂಗಸರಲ್ಲಿ ಪೋಷಿಸಲು ಸಂಸ್ಕೃತಿ, ಸಮಾಜಗಳು ಯತ್ನಿಸಿವೆ, ಈ ಸ್ವಭಾವವನ್ನು ಸಮಾಜ ಅವರಿಂದ ನಿರೀಕ್ಷೆಮಾಡುತ್ತದೆ. ಈ ನಿರೀಕ್ಷೆಯನ್ನು ತಮ್ಮ ಸಹಜ ವ್ಯಕ್ತಿತ್ವದಿಂದಲೇ ತುಂಬಬಲ್ಲ ಲೇಖಕಿಯರು ಇರುವುದು ಸಹಜ. ಉಳಿದೆಷ್ಟೋ ಮನುಷ್ಯಗುಣಗಳಂತೆ ಇವೂ ಕೂಡ. ಈ ಸ್ವಭಾವವನ್ನ ತನ್ನ ಉದ್ದೇಶ ಈಡೇರಿಕೆಗಾಗಿ ಸ್ತ್ರೀಯರ ಮೇಲೆ ಪುರುಷಪ್ರಧಾನ ಸಮಾಜ ಹೇರುವುದರಲ್ಲಿ ತಪ್ಪಿದೆಯೇ ಹೊರತು ಈ ಗುಣಗಳು ತಮ್ಮಷ್ಟಕ್ಕೆ ತಾವೇ ಹೀನಾಯವಾದುವಲ್ಲ. ಸಮಾನತೆಯ ಹೋರಾಟ ಇಂಥ ಯಾವುದೇ ಸಹಜಗುಣದ ವಿರುದ್ಧವಾದ ಹೋರಾಟವಾದರೆ ಅದು ಮನುಷ್ಯ ಸ್ವಭಾವದ ವಿರುದ್ಧವಾದ ಹೋರಾಟವೆನ್ನಬೇಕಾಗುತ್ತದೆ. ಸ್ತ್ರೀತ್ವದ ಹೊಸ ಎಚ್ಚರ, ಮುಕ್ತತೆ, ನಿರ್ಭಯತೆಯು ಈ ಸ್ತ್ರೀ ಸ್ವಭಾವದ ಅನೇಕ ಕೋಮಲ, ಸಹ್ಯಾಸಹ್ಯ ಮುಖಗಳ ಅಪರಿಚಿತತೆ, ಅನೂಹ್ಯ ಕತ್ತಲೆಯನ್ನು ಹೋಗಲಾಡಿಸಬಹುದಾಗಿದೆ | ಬೇಕಾಗಿದೆ. ಮಸಾ.ದ ಶಕ್ತ ಬೆಳವಣಿಗೆಯು ತೆರೆಯುತ್ತಾ ಹೋಗಬಹುದಾದ ನಾಳಿನ ಸಾಹಿತ್ಯದ ಅಪೂರ್ವಪುಟಗಳಿವು ಎಂದು ತೋರುತ್ತದೆ.

ಮಹಿಳೆಯರು ತಮ್ಮ ಬದುಕಿನ ಸುಖ ದುಃಖಗಳನ್ನೂ ಒಳತೋಟಿಗಳನ್ನೂ ಘರ್ಷಣೆ, ದ್ವಂದ್ವ, ಖುಷಿಯೇ ಮೊದಲಾದವುಗಳನ್ನೂ ಹಿಡಿಯುವ ಪ್ರಯತ್ನಗಳು ನಡೆದಿವೆ, ನಡೆಯುತ್ತಲೇ ಇವೆ. ಆದರೆ ಸಮಗ್ರವಾಗಿ, ಶಕ್ತವಾಗಿ, ಸೂಕ್ಷ್ಮವಾಗಿ ಹಿಡಿಯುವ ಯಶಸ್ವಿ ಪ್ರಯತ್ನಗಳ ಅಗತ್ಯವಿನ್ನೂ ಇದೆ ಜಾಗತಿಕ ಸಾಹಿತ್ಯದಲ್ಲೇ ಈ ಕೊರೆ ಇದೆಯಾದರೂ ಅದನ್ನು ತುಂಬುವ ಯತ್ನಗಳು ಗಮನಾರ್ಹ ಪ್ರಮಾಣದಲ್ಲಿ ನಡೆಯುತ್ತಿವೆ. ಇಂಥ ಕೊರೆ ಕನ್ನಡದಂಥ ಭಾಷೆಯ ಸಂದರ್ಭದಲ್ಲಿ ಇನ್ನೂ ಎದ್ದು ಕಾಣುತ್ತದೆ. ಇಷ್ಟು ನಿಡಿದಾದ ಇತಿಹಾಸವಿರುವ ಕನ್ನಡಸಾಹಿತ್ಯದಲ್ಲಿ ಈ ಕೊರೆ ಹೇಗೆ ಉಳಿಯುತ್ತ ಬಂದಿತೆಂದು ಕೇಳಿಕೊಂಡರೆ ನಾವು ಮತ್ತೆ ನಮ್ಮ ಸಾಂಸ್ಕೃತಿಕ, ಸಾಮಾಜಿಕ, ಕೌಟುಂಬಿಕ ಹಿನ್ನೆಲೆಯಲ್ಲಿ ನಿರ್ಮಿತವಾದ ಮಹಿಳೆಯ ಅಭ್ಯಕ್ತಿಯ ಸ್ಥಿತಿ ಮತ್ತು ಗಂಡುಹೆಣ್ಣಿನ ನಡುವೆಯಿದ್ದ ತಿಳುವಳಿಕೆಯ ಕೊರತೆಗೆ ಒರುತ್ತೇವೆ. ಹಳಗನ್ನಡ. ನಡುಗನ್ನಡ ಕವಿಗಳು ಮಹಿಳೆಯರನ್ನು ಚಿತ್ರಿಸುವಾಗ ಮಾಡಿದ ಪರಕಾಯ ಪ್ರವೇಶದ ಬಗ್ಗೆ ಆಶ್ಚರ್ಯವಾಗುತ್ತದೆ. ಹಾಗೆ ಮಹಿಳೆಯರ ಮನಸ್ಸನ್ನು ನಮ್ಮ ಕವಿ

ಗಳು ಹೊಕ್ಕಿದ್ದರೆ ಕಾಮ, ಪುತ್ರದೋಹದ, ಪತಿಭಕ್ತಿ, ದೈವಭಕ್ತಿಗಳಿಂದಾಚೆಗಿನ ಅವರ ಬದುಕು ಕಾಣುತ್ತಿತ್ತು. ವಚನಯುಗ ಮಸಾ.ದ ದಿಕ್ಕಿನಲ್ಲಿ ಕೆಲವು ಪ್ರಥಮಗಳನ್ನು ಸ್ಥಾಪಿಸಿತಾದರೂ ಸ್ತ್ರೀತ್ವದ ಸಮಗ್ರ ಅಭಿವ್ಯಕ್ತಿಗೆ, ಆ ಕುರಿತಾದ ಚಿಂತನೆಗೆ ಒತ್ತು ಬೀಳಲಿಲ್ಲ. ಅದರ ಅಗತ್ಯ ಕಾಣುವ ಸಂದರ್ಭವೂ ಅದಲ್ಲ. ಜನಪದ ಸಾಹಿತ್ಯ ಇವುಗಳಿಗಿಂತ ಆಶಾದಾಯಕವಾಗಿದ್ದರೂ ಈ ಅಪ್ಯಾಯಮಾನವಾದ ಸಾಹಿತ್ಯದಲ್ಲಿ ಬೌದ್ಧಿಕವಾಗಿ, ದಾರ್ಶನಿಕವಾಗಿ ನಾವು ನಿರೀಕ್ಷಿಸಬಹುದಾದುದಕ್ಕೆ ಕೆಲವು ಬಲವಾದ ಮಿತಿಗಳಿವೆ.

ಆಧುನಿಕ ಪೂರ್ವದ ನಮ್ಮ ಲೇಖಕಿಯರ ಬರಹಗಳಲ್ಲಿ ಬಿಚ್ಚಿಕೊಂಡಿರುವುದಕ್ಕಿಂತ ಮುದುಡಿಕೊಂಡಿರುವುದೇ ಹೆಚ್ಚು. ಆಧುನಿಕ ಕಾಲದಲ್ಲಿ ಸ್ತ್ರೀ ಸಮಸ್ಯೆಗಳನ್ನು ಕುರಿತ ಕಳಕಳಿ, ಸ್ತ್ರೀಯರ ಬದುಕಿನ ಬಗೆಗೆ ಅನುಕಂಪ ವಿಶೇಷವಾಗಿ ಕಾಣತೊಡಗಿತು. ಮಹಿಳೆಯ ನಿಟ್ಟಿನಿಂದ ಬರಬೇಕಾದ ಸಾಹಿತ್ಯದ ಅಗತ್ಯವನ್ನು ಪ್ರತಿಪಾದಿಸುತ್ತಾ ೧೯೩೭ರಲ್ಲಿ ಶ್ಯಾಮಲಾದೇವಿ ಹೀಗೆ ಹೇಳಿದರು: "ವಾಕ್ ಸ್ವಾತಂತ್ರ್ಯವು ನಮ್ಮ ನಾರೀವರ್ಗಕ್ಕೆ ಇರಲೇಬೇಕು. ಪ್ರಪಂಚವನ್ನು ಸ್ತ್ರೀಯು ತನ್ನ ದೃಷ್ಟಿಯಿಂದ ನೋಡಿ ಅದರ ಬಗ್ಗೆ ಅವಳು ಅಭಿಪ್ರಾಯ ಪಡುವುದೇನು, ಅವಳ ಆಶೆ ಆಕಾಂಕ್ಷೆಗಳು ಯಾವ ರೀತಿಯವಾಗಿವೆ ಸಮಾಜ ಸುಧಾರಣೆಯ ವಿಷಯದಲ್ಲಿ ಅವಳ ವಿಚಾರಗಳೆಂತಿರುವುವು ಎಂಬುವನ್ನೆಲ್ಲಾ ಸಮಾಜವು ನೋಡುವುದವಶ್ಯ." ಸ್ತ್ರೀಯರ ದೃಷ್ಟಿಕೋನವು ಮೆಲ್ಲಮೆಲ್ಲನೆ ಕನ್ನಡ ಸಾಹಿತ್ಯದ ಮುಖ್ಯಪ್ರವಾಹವನ್ನು ಸೇರತೊಡಗಿತು. ನವೋದಯದ ಸುಧಾರಣಾ ಮನೋಭಾವದಲ್ಲಿ, ಪ್ರಗತಿಶೀಲರ ಸಾಮಾಜಿಕ ಬದಲಾವಣೆಗಳಲ್ಲಿ ಸ್ತ್ರೀ ಸಮಸ್ಯೆಗಳಿಗೆ ಆದ್ಯತೆ ದೊರೆಯಿತು. ಹಲವು ಸಾರಿ ಹೆಂಗಸರಿಗಿಂತ ಮೊದಲು ಮತ್ತು ಅವರಿಗಿಂತ ಹೆಚ್ಚು ಉದಾರವಾದಿಗಳಾಗಿ ಸ್ತ್ರೀಯರ ಬದುಕನ್ನು ಗಂಡಸರು ನೋಡಿದ್ದಾರೆ. ಹೊಸ ವಿಚಾರ, ವಿದ್ಯಾಭ್ಯಾಸಗಳಿಗೆ ಮೊದಲು ಒಡ್ಡಿಕೊಳ್ಳುವ ಅವಕಾಶ ಅವರಿಗೆ ದೊರಕಿತ್ತೆಂಬುದನ್ನೂ ಇಲ್ಲಿ ನೆನೆಯಬಹುದು.. ಆದರೂ ಗಂಡಸಿನ ನಿಟ್ಟಿನಿಂದ ಕಂಡಿರಿಸಲಾದ ಹೆಂಗಸಿನ ಈ ಚಿತ್ರ ಹಲವು ಸಾರಿ ಸಾಂಸ್ಕೃತಿಕವಾದ, ವೈಯಕ್ತಿಕವಾದ ಪೂರ್ವಗ್ರಹಗಳಿಂದ ತಪ್ಪಿಸಿಕೊಳ್ಳಲಾಗಿಲ್ಲ. ನಮ್ಮ ಈ ನಿರ್ಧಿಷ್ಟ ದೃಷ್ಟಿಕೋನದಿಂದ ಈ ಗ್ರಹಿಕೆಗಳ ಬಗೆಗೆ ನಮ್ಮ ಪ್ರತಿಕ್ರಿಯೆಗಳು ಹೇಗೆ ಇದ್ದರೂ ಗಂಡಿಗೆ ಮಾತ್ರ ಕಾಣಿಸಬಹುದಾದ ಹೆಣ್ಣಿನ ಈ ಮುಖವನ್ನು ಕಾಣಿಸಿಕೊಡುವ ಯತ್ನಗಳು ಇವಾಗಿವೆ, ಇಂಥ ಗ್ರಹಿಕೆಗಳ ಹಿಂದಿನ ಧೋರಣೆ ಪ್ರಗತಿಗಾಮಿಯೇ ಆಗಿರಲಿ ಪ್ರತಿಗಾಮಿಯೇ ಆಗಿರಲಿ ಸ್ತ್ರೀಯರನ್ನು ನಮ್ಮ ಸಾಹಿತ್ಯ ಪರಿಸರ ಗ್ರಹಿಸಿದ ಪರಿಯನ್ನು ಇವು ತಿಳಿಸುತ್ತವೆ. ತನ್ನ ಬದುಕಿಗೆ, ತನ್ನೊಳಕ್ಕೆ ಹೆಣ್ಣು ತಾನೇ ಕೊಟ್ಟುಕೊಳ್ಳುವ ಅಭಿವ್ಯಕ್ತಿ ಇದರ ಮತ್ತೊಂದು ಮುಖ. ಆದರೆ ಗಂಡಸು ಗಂಡಸಿನ ಬಗ್ಗೆ ಅಧಿಕಾರಯುತವಾಗಿ ಬರೆಯುವ, ಗಂಡು ತನ್ನನ್ನು ತಾನು ತೋಡಿಕೊಳ್ಳುವ ಪ್ರಕ್ರಿಯೆ ಕನ್ನಡಸಾಹಿತ್ಯದಲ್ಲಿ ಪರಿಚಿತವಾಗಿರುವಷ್ಟು ಹೆಣ್ಣು ತನ್ನನ್ನು ತಾನು ತೆರೆದಿಟ್ಟುಕೊಳ್ಳುವ ಯಶಸ್ವಿ ಪ್ರಯತ್ನಗಳು ಪರಿಚಿತವಾಗಿಲ್ಲ, ಇನ್ನೂ ಹೆಚ್ಚಿನ ಪುರುಷ ಲೇಖಕರ ಅಗತ್ಯ ನಮಗಿಲ್ಲ, ಪ್ರಾಮಾಣಿಕವಾದ ಸ್ತ್ರೀ ಅನುಭವದ ಅಗತ್ಯವಿದೆ. ಪುರುಷರ ಪೂರ್ವಗ್ರಹೀತಗಳು, ಭಾವನೆಗಳು, ಭಾವಾವೇಶಗಳು ಹಾಗೂ ರೂಢಿಗಳು ಸಾಕಷ್ಟು ಪ್ರಮಾಣದಲ್ಲಿ ನಿರೂಪಿತವಾಗಿದೆ ಹೆಂಗಸರಿಂದಲೂ ಅದೇ ಪೂರ್ಣತೆಯ ನಿರೂಪಣೆಯನ್ನು ಹೊಂದೋಣ" ಎಂದು ೧೮೫೦ರಷ್ಟು ಹಿಂದೆ ಜಿ. ಎಚ್. ಲೆವಿಸ್ ಇಂಗ್ಲಿಷ್ ಭಾಷೆಯ ಸಂದರ್ಭದಲ್ಲಿ ಹೇಳಿದ ಮಾತು ಮಸಾ.ಕ್ಕೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಈಗಲೂ ಪ್ರಸ್ತುತವಾಗಿದೆ. ಸಾಹಿತ್ಯವನ್ನು ಜೀವನದ ಪ್ರತಿಬಿಂಬ, ಗತಿಬಿಂಬವೆಂದು ವಿವರಿಸಿದರೂ ಇಲ್ಲಿ ಬಿಂಬಿಸಿದ್ದು ಜೀವನದ ಒಂದು ಭಾಗದ ಗತಿ, ಮತಿಗಳು ಮಾತ್ರ.

ಸ್ತ್ರೀತ್ವದ ಹೊಸ ಎಚ್ಚರ, ಮುಕ್ತತೆ, ನಿರ್ಭಯತೆಯು ಈ ಸ್ತ್ರೀ ಸ್ವಭಾವದ ಅನೇಕ ಕೋಮಲ, ಕ್ರೂರ, ಸಹ್ಯಾಸಹ್ಯ ಮುಖಗಳ ಅಪರಿಚಿತತೆ, ಅನೂಹ್ಯ ಕತ್ತಲೆಯನ್ನು ಹೋಗಲಾಡಿಸಬಹುದಾಗಿದೆ. | ಬೇಕಾಗಿದೆ. ಮಸಾದ ಶಕ್ತ ಬೆಳವಣಿಗೆಯು ತೆರೆಯುತ್ತಾ ಹೋಗಬಹುದಾದ ನಾಳಿನ ಸಾಹಿತ್ಯದ ಅಪೂರ್ವ ಪುಟಗಳಿವು ಎಂದು ತೋರುತ್ತದೆ.

ತನ್ನನ್ನು ತಾನು ಶಕ್ತವಾಗಿ ತೆರೆದುಕೊಳ್ಳುವಲ್ಲಿ ಮಸಾ. ಕೆಲವು ಆಳವಾದ ಸಮಸ್ಯೆಗಳನ್ನು ಎದುರಿಸುತ್ತಿರುವಂತೆ ತೋರುತ್ತದೆ. ಮಹಿಳೆಯ ಅಭಿವ್ಯಕ್ತಿಯು ನಿತ್ಯಜೀವನದಲ್ಲಿ ಪರಂಪರಾಗತವಾಗಿ ನಿರುತ್ತೇಜ

ನಕ್ಕೆ ಒಳಗಾಗಿ, ಹತ್ತಿಕ್ಕಲ್ಪಟ್ಟು ಅನಭಿ ವ್ಯಕ್ತಿಯನ್ನೇ ಅವಳ ಅಪ್ರಜ್ಞಾಪೂರ್ವಕ ಮನಸ್ಸು ಒಂದು ರಚನಾತ್ಮಕ ಮೌಲ್ಯವಾಗಿರಿಸಿಕೊಳ್ಳುವಂತಾಗಿದೆ. "ಅತ್ತೆಯ ಮನೆಯಲ್ಲಿ ಹತ್ತಾರು ಬೈಗುಳ. ಉತ್ತರ ಬೇಡ ನನ ಮಗಳೆ" ಎಂಬಂಥ ಗಾಯತ್ರಿಗಳಿಂದ ಕ್ರೋಧ, ಸಂತೋಷ, ಸಂಶಯ, ನಿರಾಶೆ ಯಾವುದಕ್ಕೂ ಬಾಯಿಲ್ಲದಿರುವಿಕೆಯನ್ನು ಎತ್ತಿಹಿಡಿಯಲಾಯಿತು. ಹೀಗಾಗಿಯೇ ನಮ್ಮ ಸಂಸಾರಗಳು ಸುಖಸಂಸಾರಗಳಾಗಿದ್ದಿರಬೇಕು. ಮೌನಗೌರಿ ನಮ್ಮ ಪ್ರತೀಕವಾದಳು. ಇಂಥ ತುಳಿತದಿಂದಲೇ ಸಮಯ ಸಿಕ್ಕಾಗ ಬಡಬಡಿಸತೊಡಗಿ ಬೈಗುಳಗಳಲ್ಲಿ ಮಹಿಳೆಯರು ಹೆಚ್ಚು ಕ್ರಿಯಾಶೀಲರಾಧರೋ ಏನೋ. ಅಭಿವ್ಯಕ್ತಿಯ ಮೇಲಿನ ನಿಷೇಧ ಕರಗತೊಡಗಿ ಈಗ ಬಾಯಿಗಳು ಬಿಚ್ಚುತ್ತಿವೆ. ಇಂಥ ಹಿನ್ನೆಲೆಯಿಂದ ಬಂದ ಮಹಿಳೆ ಒಮ್ಮೆಲೇ ಭಾಷೆಯಲ್ಲಿ ತನ್ನನ್ನು ತಾನು ಹಿಡಿಯುವುದು ಅತಿಪ್ರಯಾಸದ ಯತ್ನ. ಮಹಿಳೆಯರ ಕತೆ, ಕಾದಂಬರಿಗಳ ಗ್ರಹಿಕೆಗಳನ್ನೋ, ವಿಶ್ಲೇಷಣೆಗಳನ್ನೋ, ವರ್ಣನೆಗಳನ್ನೋ ಜೊತೆಯಲ್ಲಿ ಬರೆಯುತ್ತಿರುವ ಲೇಖಕರ ಬರಹಗಳೊಂದಿಗೆ ಹೋಲಿಸಿ ನೋಡಿದರೆ ಈ ಅಭಿವ್ಯಕ್ತಿಯ ತಡೆ ಸ್ಪಷ್ಟವಾದೀತು. ಒಳಗನ್ನು ಹೊರಗೆಳಯಲು ಸಹಾ

ನವೋದಯದ ಸುಧಾರಣಾ ಮನೋಭಾವದಲ್ಲಿ ಪ್ರಗತಿಶೀಲರ ಸಾಮಾಜಿಕ ಬದಲಾವಣೆಗಳಲ್ಲಿ ಸ್ತ್ರೀ ಸಮಸ್ಯೆಗಳಿಗೆ ಆದ್ಯತೆ ದೊರೆಯಿತು. ಹಲವು ಸಾರಿ ಹೆಂಗಸರಿಗಿಂತ ಮೊದಲು ಮತ್ತು ಅವರಿಗಿಂತ ಹೆಚ್ಚು ಉದಾರವಾದಿಗಳಾಗಿ ಸ್ತ್ರೀಯರ ಬದುಕನ್ನು ಗಂಡಸರು ನೋಡಿದ್ದಾರೆ. ಹೊಸ ವಿಚಾರ, ವಿದ್ಯಾಭ್ಯಾಸಗಳಿಗೆ ಮೊದಲು ಒಡ್ಡಿಕೊಳ್ಳುವ ಅವಕಾಶ ಅವರಿಗೆ ದೊರಕಿತ್ತೆಂಬುದನ್ನೂ ಇಲ್ಲಿ ನೆನೆಯಬಹುದು. ಆದರೂ ಗಂಡಸಿನ ನಿಟ್ಟಿನಿಂದ ಕಂಡಿರಿಸಲಾದ ಹೆಂಗಸಿನ ಈ ಚಿತ್ರ ಹಲವು ಸಾರಿ ಸಾಂಸ್ಕೃತಿಕವಾದ, ವೈಯಕ್ತಿಕವಾದ ಪೂರ್ವಗ್ರಹಗಳಿಂದ ತಪ್ಪಿಸಿಕೊಳ್ಳಲಾಗಿಲ್ಲ.

ಯಮಾಡದ ಯಾವುದೋ ಅನಾವಶ್ಯಕ ವಿವರಗಳ ಬಗ್ಗೆ ವಾಚಾಳಿಗಳಾಗುವ ಮಹಿಳೆಯರೂ ಒಳಗನ್ನು ತೆರೆದಿಡುವಾಗ ತಡವರಿಸುವಂತಾಗುತ್ತದೆ, ಕೆಲವು ವೇಳೆ ಮಾತು ನಿಲ್ಲುತ್ತದೆ. ವೀಣಾ ಅವರ "ಗಂಡಸರು" ಕಾದಂಬರಿಯ ಸಂಬುಧಗಳು ಮುರಿದು ಬೀಳುವ ಹಂತಗಳನ್ನು ಇದಕ್ಕೆ ನಿದರ್ಶನವಾಗಿ ಗಮನಿಸಬಹುದು. ಇಲ್ಲಿಯ ನಾಯಕಿಯ ಗಂಡಸರೊಂದಿಗಿನ ಸಂಬಂಧಗಳೇ ಕೃತಿಯ ಕೇಂದ್ರವಾಗಿದ್ದರೂ ಅವಳ ಸಂಬಂಧಗಳು ಮುರಿದು ಬೀಳುವ ಸಂದರ್ಭಗಳು ಅತ್ಯಂತ ನಿರ್ಣಾಯಕ ಸಂದರ್ಭಗಳಾಗಿದ್ದರೂ ಆ ಹೊತ್ತಿನ ನಾಯಕಿಯ ಮನಸ್ಥಿತಿಯನ್ನು ತೆರೆಯಲು ಲೆಖಕಿಯಿಂದಾಗುತ್ತಿಲ್ಲ. ಎಲ್ಲ ಸಂಬಂಧಗಳೂ ಮುರಿದು ಜಾನ್‌ನ ಸಂಬಂಧವೂ ಮುರಿದು ಬಿದ್ದಾಗ ನಡುರಾತ್ರಿ ಆಕೆಗೆ

'ಇನ್ನೂ ಹೆಚ್ಚಿನ ಪುರುಷ ಲೇಖಕರ ಅಗತ್ಯ ನಮಗಿಲ್ಲ, ಪ್ರಾಮಾಣಿಕವಾದ ಸ್ತ್ರೀ ಅನುಭವದ ಅಗತ್ಯವಿದೆ. ಪುರುಷರ ಪೂರ್ವಗ್ರಹೀತಗಳು, ಭಾವನೆಗಳು, ಭಾವಾವೇಶಗಳು ಹಾಗೂ ರೂಢಿಗಳು ಸಾಕಷ್ಟು ಪ್ರಮಾಣದಲ್ಲಿ ನಿರೂಪಿತವಾಗಿದೆ, ಹೆಂಗಸರಿಂದಲೂ ಅದೇ ಪೂರ್ಣತೆಯ ನಿರೂಪಣೆಯನ್ನು ಹೊಂದೋಣ'

ಒಮ್ಮೆಲೆ ಬಹಳ ವರ್ಷಗಳ ನಂತರ ಅಳು ಒಂತು ಭಯಂಕರ ಅಳು. ಮೈಯೆಲ್ಲ ಹಾಸಿಗೆಯಲ್ಲ ಮಂಚವೆಲ್ಲ ಕೋಣೆಯೆಲ್ಲ ಮನೆಯೆಲ್ಲ—ಇಡೀ ಮುಂಬೈಯೆಲ್ಲ ನಡುಗಿಸುವಂಥ ಅಳು. ತಡೆದುಕೊಳ್ಳಲು ಯತ್ನಿಸದೆ ಆಕೆ ನಿಧಾನವಾಗಿ ಗಟ್ಟಿಯಾಗಿ ಸಮಾಧಾನವಾಗುವಂತೆ ಅತ್ತಳು. ಇಷ್ಟಲ್ಲದೆ, ಅವಳೊಳಗಿನ ಅಳಲನ್ನು ಹಿಡಿಯಲಾಗಿಲ್ಲ.

ಒಳಗಿನ ಸತ್ಯವನ್ನು ಪಾರದರ್ಶಕವಾದ ಗದ್ಯದಲ್ಲಿ ಬಿಚ್ಚಿ ಬಯಲಿಗಿಡುವ ದಿಕ್ಕಿನಲ್ಲಿ ಮಹಿಳೆಯೊಳಗೆ ನಡೆ

ಒಳಗಿನ ಸತ್ಯವನ್ನು ಪಾರದರ್ಶಕವಾದ ಗದ್ಯದಲ್ಲಿ ಬಿಚ್ಚಿ ಬಯಲಿಗಿಡುವ ದಿಕ್ಕಿನಲ್ಲಿ ಮಹಿಳೆಯೊಳಗ ನಡೆಯುತ್ತಿರುವ | ನಡೆಯುವ ಹೋರಾಟ ತುಂಬ ಸಂಕೀರ್ಣವಾದ್ದು. ಯಾವುದನ್ನೂ ಯಾರನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಅನುಭವಕ್ಕೆ ಅಭಿಮುಖಿಯಾಗಿ ನಿಂತಾಗ ಮಹಿಳೆ ತನ್ನ ಅನೇಕ ಅಪರಿಚಿತ ಮುಖಗಳನ್ನು ಕಾಣಬೇಕಾಗುತ್ತದೆ.

ಯುತ್ತಿರುವ | ನಡೆಯುವ ಹೋರಾಟ ತುಂಬ ಸಂಕೀರ್ಣವಾದ್ದು. ಯಾವುದನ್ನೂ ಯಾರನ್ನೂ ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಅನುಭವಕ್ಕೆ ಅಭಿಮುಖವಾಗಿ ನಿಂತಾಗ ಮಹಿಳೆ ತನ್ನ ಅನೇಕ ಅಪರಿಚಿತ ಮುಖಗಳನ್ನು ಕಾಣಬೇಕಾಗುತ್ತದೆ. ಮೊದ ಮೊದಲು ಆ ವಿಚಾರವೇ ಅಂಜಿಕೆ ತರುವುದು. ೧೯೫೯ರಲ್ಲಿ ಬರೆದ ಶಾಂತಾದೇವಿ ಕಣವಿಯವರ "ಮಂಜು ಕರಗಿತು" ಎಂಬ ಕಥೆಯನ್ನು ಇಲ್ಲಿ ಗಮನಿಸಬಹುದು. ಕಥೆಯ ನಾಯಕಿ ಮಾಲು ಬಾಲ್ಯದಿಂದಲೂ ಸಾಂಸಾರಿಕ ಆಸಕ್ತಿಗಳ ಕಡೆಗೆ ಗಮನ ಕೊಡದೆ ಓದಿನ ಹುಚ್ಚು ಹಚ್ಚಿಕೊಂಡವಳು.

ಅದು ಎಂಥ ಓದು, ಆದರಿಂದ ಅವಳೇನು ಪಡೆದಳು, ಹೇಗೆ ಬೆಳೆದಳು ಎಂಬುದನ್ನೆಲ್ಲ ಕಥೆ ವರ್ಣಿಸುವುದಿಲ್ಲ. ಸಂಸಾರಸ್ಥಳಾದ ಮೇಲೆ ಎಲ್ಲ ಇದ್ದೂ ಏನೂ ಇಲ್ಲದ್ದರ ಅನುಭವವಾಗುತ್ತದೆ. "ತನ್ನ ಸಂಸಾರಕ್ಕೆ ಯಾವ ಕೊರತೆಯೂ ಇಲ್ಲ. ಮನೆಯಲ್ಲಿ ಯಾರೂ ಬಿರುನುಡಿಗಳನ್ನಾಡುವುದಿಲ್ಲ, ಆದರೂ ಒಂದೊಂದು ಸಲ ಅವಳ ಮನಸ್ಸಿಗೆ ತುಂಬಾ ವ್ಯಥೆಯಾಗುತ್ತದೆ. ಯಾಕೆ ಎಂದು ಯೋಚಿಸಿ ಯೋಚಿಸಿ ನಿರಾಶಳಾಗುತ್ತಾಳೆ. ಸಣ್ಣ ಸಣ್ಣ ಕಾರಣಗಳಿಗೂ ಮನಸ್ಸು ಮುದುಡಿ ಹೋಗುತ್ತದೆ" (ಪುಟ ೧೪, ೧೫). ಆದರೆ ಈ ವ್ಯಥೆ, ನಿರುತ್ಸಾಹದ ಹಿಂದೆ ಮತ್ತೇನಿದ್ದೀತು ? ಸಮಾಜದ ಯಾಂತ್ರಿಕವಾದ ನಿರೀಕ್ಷೆಯನ್ನು (ತಾಯಾಗುವ, ಮಡದಿಯಾಗುವ) ಹೆಣ್ಣು ಪೂರೈಸಿದರೂ ಅವಳ ಒಳಗು ಎಂಬುದೊಂದು ಇದೆಯಲ್ಲ, ಆ ಒಳಗಿಗೆ ಉತ್ತರ ಹೇಳುವುದು ಹೇಗೆ ? ತಾನು ಖಾಲಿಯೆಂಬ ಭಾವನೆ ಹೆಣ್ಣಿಗೆ ಯಾಕೆ ಬರುತ್ತಿದೆ ? — ಇಂಥ ಪ್ರಶ್ನೆಗಳ ಆಳಕ್ಕೆ ಕಥೆ ಇಳಿಯದಿದ್ದರೂ ಅವಳಿಗೆ "ವಿನಾಕಾರಣ" ವೆಂದು ತೋರಬಹುದಾದ "ಮಂಜುಗವಿತ" ವನ್ನು ಗುರುತಿಸುತ್ತದೆ. ಆದರೆ ಇತರರ ಸ್ಥಿತಿಯೊಂದಿಗೆ ಹೋಲಿಸಿಕೊಂಡು "ಈ ಉದಾಸೀನತೆ, ಈ ನಿಷ್ಕಾರಣ ಅಸಂತುಷ್ಟಿ ಎಲ್ಲಿಯವು ? ತಾನೇ ಸೃಷ್ಟಿಸಿಕೊಂಡುದಲ್ಲವೆ ?" ಎಂದುಕೊಳ್ಳುತ್ತಾಳೆ, ಕವಿದ ಮಂಜು ಸಲೀಸಾಗಿ ಕರಗುತ್ತದೆ. ಹೆಣ್ಣಿಗೆ ಗಂಡನ ಪ್ರೀತಿ, ಮುದ್ದಾದ ಮಕ್ಕಳು, ಒಳ್ಳೆಯ ಬಂಧುಗಳು, ಆರ್ಥಿಕ ಬಲ ಇದ್ದರೆ ಸಾಕಲ್ಲವೆ ಎಂಬಂತೆ ಹೇಳಿ ಅವೆಲ್ಲದರಾಚೆಗೂ ಇರಬಹುದಾದ ಒಳಕೊರಗನ್ನು ಕಥೆ ಮುಚ್ಚಿಹಾಕಿದೆ. ಅದರ ವಿಶ್ಲೇಷಣೆಗೆ ಇಳಿದರೆ ಸುತ್ತಲಿನ ವ್ಯವಸ್ಥೆಯೊಂದಿಗೆ ಸಂಘರ್ಷ ಅನಿವಾರ್ಯ. ಅಸಂತುಷ್ಟಿಯ ಬೇರಿಗಿಳಿದರೆ ವ್ಯವಸ್ಥೆಯನ್ನು ಇರುವಂತೆ ಸ್ವೀಕರಿಸುವುದು ಅಸಾಧ್ಯವಾಗುತ್ತದೆ. ಹೆಂಗಸಿನ ಈ ಎಚ್ಚರ ಶಾಂತವಾಗಿ ಕಾಣಬರುವಂತಾದ ಪರಿಸರವನ್ನೂ ಕಲಕಬಲ್ಲದು. ಈ ಕಲಕುವಿಕೆ ತನ್ನ "ಭದ್ರತೆ, ಸುಖ" ವನ್ನು ಅಲುಗಿಸಬಹುದೆಂಬ ಭಯ ಹೆಂಗಸಿನಲ್ಲೂ ಇರುವಂತಿದೆ. ಹೀಗೆ ಮುಕ್ತವಾದ ಎಚ್ಚರ ಮತ್ತು ಅದರ ಅಭಿವ್ಯಕ್ತಿ ಗೋಜಲಿನಲ್ಲಿ ಸಿಕ್ಕಿಕೊಂಡಿದೆ.

ಒಮ್ಮೊಮ್ಮೆ ಈ ಉಸುಕಿನಿಂದ ಮಹಿಳೆಯ ಲೇಖನಿ ಹೊರಬರತೊಡಗಿದರೂ ಹಾಗೆ ಬರುತ್ತಿರುವ ಅರಿವಾದೊಡನೆಯೇ ಒಳಗೆ ಸರಿಯುವ ಪ್ರವೃತ್ತಿಯೂ ಕಾಣುತ್ತದೆ. ರಾಜವಾಡೆಯವರ "ಆಹತ ಹೃದಯ" ಕಥೆಯ ನಾಯಕಿ ಮಠಾಧಿಪತಿಯ ಪ್ರೇಮದಿಂದ ವಂಚಿತಳಾಗಿ, ಮಠದ ಸುತ್ತಲೂ ರಹಸ್ಯ ಬಾಗಿಲಿನ ಅಂತಃಪು

"ಸ್ವಾತಂತ್ರ್ಯ ಹೋರಾಟಗಾರ್ತಿ"–ಲಕ್ಷ್ಮೀದೇವಮ್ಮ.

ನಾನು ಮದುವೆಯಾಗಿ ಬಂದ ೬ ತಿಂಗಳಲ್ಲೇ 'ಕ್ವಿಟ್ ಇಂಡಿಯಾ ಮೂವ್‌ಮೆಂಟ್' ಪ್ರಾರಂಭವಾಯಿತು. ಆಗ ನನಗೆ ೧೬ ವರ್ಷ. ನಮ್ಮ ಯಜಮಾನರು ಕಾಂಗ್ರೆಸ್‌ನಲ್ಲಿ ಇದ್ದರು. ಆಗ ನಾನು ಏನಾದರೂ ಕಾರ್ಯಕ್ರಮವಾಗುವಾಗ ಬಾವುಟ ಹಿಡಿದುಕೊಂಡು ಮೆರವಣಿಗೆಗೆ ಹೋಗುತ್ತಾ ಇದ್ದೆ. ಹೀಗೆ ಚಳುವಳಿ ಶುರುವಾದಾಗ ಮೊದಲು ನಮ್ಮ ಯಜಮಾನರನ್ನು ಅರೆಸ್ಟ್ ಮಾಡಿದರು. ಅನಂತರ ನನ್ನನ್ನು ಅರೆಸ್ಟ್ ಮಾಡಿ ಬೆಂಗಳೂರು ಜೈಲಿಗೆ ಕರೆದುಕೊಂಡು ಹೋದರು. ಅಲ್ಲಿ ನಮ್ಮ ಜೊತೆಗೆ, ನಾಲ್ಕೈದು ಜನ ಹೆಂಗಸರಿದ್ದರು. ಅಲ್ಲಿ ೧ ವರ್ಷ ಆದ ಮೇಲೆ ನನ್ನನ್ನು ಮತ್ತು ನಮ್ಮ ಯಜಮಾನರನ್ನೂ ಬಿಡುಗಡೆ ಮಾಡಿದರು. ಆಗ ಊರಿನಲ್ಲಿ ಸ್ವಲ್ಪ ಸಮಯವಿದ್ದು, ಮದ್ರಾಸ್ ಘಟಿಕಾಜಲ, ತಿರುವಣ್ಣಾಮಲೆಯಲ್ಲಿ ಇದ್ದೆವು. ನಮ್ಮ ಮನಸ್ಸಿಗೆ ನೆಮ್ಮದಿ ಎನ್ನುವುದು ಸಿಕ್ಕಿದ್ದು ಘಟಿಕಾಜಲ ಮತ್ತು ತಿರುವಣ್ಣಾಮಲೆ ರಮಣ ಭಗವಾನರ ಆಶ್ರಮದಲ್ಲಿ. ೩ ವರ್ಷದ ನಂತರ ತಿರುಗಿ ಭದ್ರಾವತಿಗೆ ಬಂದು ಸೇರಿದೆವು. ಹೋಗಬೇಕಾದ ರಾಜಕೀಯ ಸಂದರ್ಭಗಳಲ್ಲಿ ಹೋಗುತ್ತಿದ್ದೆವು.

ಈಗ ನಾನು ಒಬ್ಬಳೇ ಆದ ಮೇಲೆ ಯಾವ ರಾಜಕೀಯಕ್ಕೂ ಹೋಗುವುದಿಲ್ಲ. ಆದರೆ ಇವತ್ತಿನ ಪರಿಸ್ಥಿತಿಯನ್ನು ನೋಡುವಾಗ ಹೆಣ್ಣುಮಕ್ಕಳಿಗೆ ಯಾವ ತರಹದ ರಕ್ಷಣೆ ಕೊಡುತ್ತಾರೆ ? ಜನಗಳ, ಪರಿಸರದ ರೀತಿಯನ್ನು ನೋಡಿದರೆ ಇದು ನಮ್ಮ ಸ್ವತಂತ್ರ ಭಾರತದ ಕ್ರಮವೆ ಎಂದು ಯೋಚನೆಯಾಗುತ್ತದೆ. ಹೆಂಗಸರಿಗೆ ಯಾವ ರೀತಿಯ ರಕ್ಷಣೆಯೂ ಇಲ್ಲವಾಯ್ತು ಎಂದು ಮನಸ್ಸಿಗೆ ನೋವಾಗುತ್ತದೆ.

ಎಸ್. ಆರ್. ಲಕ್ಷ್ಮೀದೇವಮ್ಮ ಭದ್ರಾವತಿ.

ಅಧಿಪತಿಯನ್ನು ಕೊಲ್ಲುತ್ತಾಳೆ. ಆದರೆ ಕಥೆಯ ಕೊನೆಯ ಭಾಗದಲ್ಲಿ ಸಮಾಧಿಯಲ್ಲಿ ಮಠಾಧಿಪತಿಯ ಕ್ಷಮೆ ಕೋರಿ ಅವನಿಗೇ ಮತ್ತೆ ತನ್ನನ್ನು ಪ್ರೀತಿಯಿಂದ

ತನ್ನನ್ನು ತಾನು ತೆರೆದಿಟ್ಟುಕೊಳ್ಳುವಲ್ಲಿ ಇಂಥ ತೊಡರುಗಳನ್ನು ಎದುರಿಸುತ್ತಿರುವ ಮಹಿಳಾಸಾಹಿತ್ಯದ ಗಂಡಸಿನ ಪ್ರಪಂಚವನ್ನು ತನ್ನ ಲೇಖನಿಯೊಳಗೆ ತುಂಬಿಕೊಳ್ಳುವುದು ಇನ್ನೊಂದು ಗಂಭೀರವಾದ ಸವಾಲು. ಗಂಡಸು ಹೆಂಗಸನ್ನು ತಿಳಿಯಲು, ಚಿತ್ರಿಸಲು ಮಾಡಿರುವ ಪ್ರಯತ್ನದಲ್ಲಿ ಕೊರತೆಗಳೂ ಮಿತಿಗಳೂ ಕಾಣಬಹುದಾದರೂ ಅನೇಕ ಕಡೆಗಳಲ್ಲಿ ಅವರ ಪ್ರಯತ್ನ ಸಾಕಷ್ಟು ದೂರ ಹೋಗಿದೆ. ಹಂಗಸೇ ತನ್ನನ್ನು ಚಿತ್ರಿಸಿಕೊಂಡಿರುವುದಕ್ಕಿಂತಲೂ ಶಕ್ತವಾಗಿದೆ.

ಅರ್ಪಿಸಿಕೊಳ್ಳುವುದನ್ನು ಕಾಣುತ್ತೇವೆ.

ತನ್ನನ್ನು ತಾನು ತೆರೆದಿಟ್ಟುಕೊಳ್ಳುವಲ್ಲಿ ಇಂಥ ತೊಡರುಗಳನ್ನು ಎದುರಿಸುತ್ತಿರುವ ಮಸಾ. ಗಂಡಸಿನ ಪ್ರಪಂಚವನ್ನು ತನ್ನ ಲೇಖನಿಯೊಳಗೆ ತುಂಬಿಕೊಳ್ಳುವುದು ಇನ್ನೊಂದು ಗಂಭೀರವಾದ ಸವಾಲು. ಗಂಡಸು ಹೆಂಗಸನ್ನು ತಿಳಿಯಲು, ಚಿತ್ರಿಸಲು ಮಾಡಿರುವ ಪ್ರಯತ್ನದಲ್ಲಿ ಕೊರತೆಗಳೂ ಮಿತಿಗಳೂ ಕಾಣಬಹುದಾದರೂ ಅನೇಕ ಕಡೆಗಳಲ್ಲಿ ಅವರ ಪ್ರಯತ್ನ ಸಾಕಷ್ಟು ದೂರ ಹೋಗಿದೆ, ಹೆಂಗಸೇ ತನ್ನನ್ನು ಚಿತ್ರಿಸಿಕೊಂಡಿರುವುದಕ್ಕಿಂತಲೂ ಶಕ್ತವಾಗಿದೆ. ಅಭಿವ್ಯಕ್ತಿಯ ಲೋಕಕ್ಕೆ ಗಂಡಸು ಹಳಬನೆಂಬುದರ ಜೊತೆಗೆ

ಸ್ತ್ರೀಯರು ಬರವಣಿಗೆಗೆ ತೊಡಗುವಾಗ ಪುರುಷ ನಿರ್ಮಿತ ಸಾಹಿತ್ಯ ಅವರ ಕಣ್ಣೆದುರಿತ್ತು. ಇಂದಿಗೂ ಆ ಸಾಹಿತ್ಯದಿಂದಲೇ ಆದರ್ಶಗಳೂ ಮಾನದಂಡಗಳೂ ಬರುತ್ತಿವೆ. ಪುರುಷ ವಿಮರ್ಶಕರು ತಮ್ಮ ತಮ್ಮ ಪಾಲಿನ ಆದರ್ಶ ಪುರುಷ ಲೇಖಕರನ್ನು ತೋರಿಸಿ, ನಿವೇಕೆ ಅವರಂತೆ ಬರೆಯುತ್ತಿಲ್ಲ ಎಂದು ಲೇಖಕಿಯರನ್ನು ಕೆಳುವುದುಂಟು. ಪುರುಷಸಾಹಿತ್ಯದ ದೃಷ್ಟಿಕೋನವನ್ನು ಮಹಿಳಾಸಾಹಿತ್ಯ ಮುಕ್ಕಿಕಾಮುಕ್ಕಿ ಅನುಸರಿಸಬೇಕಿಲ್ಲ "ಒಂದು ವೇಳೆ ಗಂಡಸರಿರುವುದಕ್ಕಿಂತ ಬೇರೆಯಾದ ದೇಶದಲ್ಲಿ ಹೆಂಗಸು ಬದುಕಿದ್ದು, ಗಂಡಸರ ಸಾಹಿತ್ಯವನ್ನು ಯಾವತ್ತೂ ಓದಿಲ್ಲದಿದ್ದರೆ ಅವರದೇ ಆದ ಸಾಹಿತ್ಯವನ್ನು ಹೊಂದಿರಬಹುದಾಗಿತ್ತು" ಎಂಬ ಮಾತಿನ ಹಿಂದೆ ಮಹಿಳಾಸಾಹಿತ್ಯಕ್ಕಿರುವ ಒಂದು ಮುಖ್ಯ ತಡೆಯ ಸೂಚನೆಯಿದೆ.

ನಮ್ಮ ಶ್ರಮ ವಿಭಜನೆ, ಲಿಂಗಾಧಾರಿತ ನಿಗದಿತ ಪಾತ್ರಗಳು, ಹೆಣ್ಣಿನ ಮೇಲಿದ್ದ | ಇರುವ ನಿರ್ಬಂಧಗಳು – ಇವೆಲ್ಲವುಗಳಿಂದಾಗಿ ಹೆಣ್ಣಿಗೆ ಗಂಡನ್ನು ತಿಳಿದುಕೊಳ್ಳದಿರುವುದೂ ಇಂಥ ಪರಿಸ್ಥಿತಿಗೆ ಕಾರಣವಾಗಿದೆಯೆಂದು ತೋರುತ್ತದೆ.

ಇನ್ನು ಮಸಾ.ದ ಮೌಲಿಕತೆಯ ಅಂಶಕ್ಕೆ ಬಂದರೆ ಕೆಲವು ಸಮಸ್ಯೆಗಳಿವೆ. ಸ್ತ್ರೀಯರು ಒಪ್ಪಿರುವ ಮೌಲ್ಯಗಳು ಅವರವೆ? ಅವರ ಬದುಕಿನ ಮೌಲಿಕ ಚೌಕಟ್ಟು ಅವರು ರೂಪಿಸಿಕೊಂಡದ್ದೆ? ಅವರದಲ್ಲದ ಚೌಕಟ್ಟಿನಲ್ಲಿ ಅವರದೇ ದೃಷ್ಟಿಕೋನ ಬೆಳೆಯುವುದಾದರೂ ಹೇಗೆ? ಹಾಗಾದರೆ ಅವರ ಸಾಹಿತ್ಯ ಯಾರ ದೃಷ್ಟಿಕೋನವನ್ನು ಬಿಂಬಿಸುತ್ತಿದೆ? ಸ್ತ್ರೀಯರು ಬರವಣಿಗೆಗೆ ತೊಡಗುವಾಗ ಪುರುಷನಿರ್ಮಿತ ಸಾಹಿತ್ಯ ಅವರ ಕಣ್ಣೆದುರಿಗಿತ್ತು, ಇಂದಿಗೂ

ಮಹಿಳಾಸಾಹಿತ್ಯದ ವೈಶಿಷ್ಟ್ಯ ಒತ್ತುಗಳ ಸರಿಯಾದ ಗುರುತಿಸುವಿಕೆ, ವಿಶ್ಲೇಷಣೆ, ಮೌಲ್ಯಮಾಪನದ ಕೆಲಸ ಒಂದೆಡೆಯಿದ್ದರೆ ಮಹಿಳಾ ಬರಹದ ಪರಂಪರೆಯನ್ನು ಗುರುತಿಸಿಕೊಡಿಸುವ ಹಾಗೂ ಕನ್ನಡ ಸಾಹಿತ್ಯವನ್ನು ಸ್ತ್ರೀಪರನೋಟದಿಂದ ನೋಡುವ ಅಗತ್ಯವೂ ಮತ್ತೊಂದೆಡೆ ಇದೆ. ಮಹಿಳಾ ಸಾಹಿತ್ಯ ಸಮ್ಮೇಳನ ಅಥವಾ ಸಂಕಿರಣಗಳು ತಮ್ಮ ಪ್ರತ್ಯೇಕ ಅಸ್ತಿತ್ವದ ಅರ್ಥವನ್ನು ಈ ಅಗತ್ಯಗಳಲ್ಲಿಯೇ ಕಂಡುಕೊಳ್ಳಬೇಕಾಗಿದೆ ಹಾಗೂ ಅವು ಅಂತರ್ನಿರೀಕ್ಷಣೆ. ಮಿತಿ ಮತ್ತು ಸಾಧನೆಯ ವಾಸ್ತವ ಚಿತ್ರಕ್ಕೆ ಎದುರಾಗುವಿಕೆಯನ್ನು ಗಂಭೀರವಾಗಿ ಸ್ವಾಗತಿಸುತ್ತಾ ಅರ್ಥಕಳೆದುಕೊಂಡು ವಿಗಧಿಳಾಗುವುದರಿಂದ ತಪ್ಪಿಸಿಕೊಳ್ಳಬೇಕಾಗಿದೆ.

ಆ ಸಾಹಿತ್ಯದಿಂದಲೇ ಆದರ್ಶಗಳೂ ಮಾನದಂಡಗಳೂ ಬರುತ್ತಿವೆ. ಪುರುಷ ವಿಮರ್ಶಕರು ತಮ್ಮ ತಮ್ಮ ಪಾಲಿನ ಆದರ್ಶ ಪುರುಷ ಲೇಖಕರನ್ನು ತೋರಿಸಿ, ನೀವೇಕೆ ಅವರಂತೆ ಬರೆಯುತ್ತಿಲ್ಲ ಎಂದು ಲೇಖಕಿಯರನ್ನು ಕೇಳುವುದುಂಟು, ಪುರುಷ ಸಾಹಿತ್ಯದ ದೃಷ್ಟಿಕೋನವನ್ನು ಮಸಾ ಮುಕ್ಕಿಕಾಮುಕ್ಕಿ ಅನುಸರಿಸಬೇಕಿಲ್ಲ. "ಒಂದು ವೇಳೆ ಗಂಡಸರಿರುವುದಕ್ಕಿಂತ ಬೇರೆಯಾದ ದೇಶದಲ್ಲಿ ಹೆಂಗಸು ಬದುಕಿದ್ದು, ಗಂಡಸರ ಸಾಹಿತ್ಯವನ್ನು ಯಾವತ್ತೂ ಓದಿಲ್ಲದಿದ್ದರೆ ಅವರದೇ ಆದ ಸಾಹಿತ್ಯವನ್ನು ಹೊಂದಿರಬಹುದಾಗಿತ್ತು" ಎಂಬ ಮಾತಿನ ಹಿಂದೆ ಮಸಾ.ಕ್ಕಿರುವ ಒಂದು ಮುಖ್ಯ ತಡೆಯ ಸೂಚನೆಯಿದೆ. ಹೊರಗಿನ ಸಿದ್ಧ ಮಾದರಿಗಳ ಪ್ರಭಾವದಿಂದ ಮುಕ್ತವಾಗಿ ಮಹಿಳೆಯ ತುಡಿತಗಳಿಂದಲೇ ಅವಳ ಸಾಹಿತ್ಯ ಸ್ಪಷ್ಟವಾಗಿ ನಿರ್ದೇಶಿಸಲ್ಪಡುವ ದಿನಗಳು ಆರಂಭವಾಗಿವೆ. ಈ ವಿಶಿಷ್ಟ ಸ್ಪಂದನ, ದೃಷ್ಟಿಕೋನವುಳ್ಳ ಸಾಹಿತ್ಯದ ಸ್ವೀಕಾರವೂ ಕಾಲಾ

ಪೇಕ್ಷಿಯಾಗಿದೆ.

ಮಸಾ.ದ ವೈಶಿಷ್ಟ್ಯ, ಒತ್ತುಗಳ ಸರಿಯಾದ ಗುರುತಿಸುವಿಕೆ, ವಿಶ್ಲೇಷಣೆ, ಮೌಲ್ಯಮಾಪನದ ಕೆಲಸ ಒಂದೆಡೆಯಿದ್ದರೆ ಮಹಿಳಾ ಬರಹದ ಪರಂಪರೆಯನ್ನು ಗುರುತಿಸಿ ಕೂಡಿಸುವ ಹಾಗೂ ಕನ್ನಡ ಸಾಹಿತ್ಯವನ್ನು ಸ್ತ್ರೀಪರನೋಟದಿಂದ ನೋಡುವ ಅಗತ್ಯವೂ ಮತ್ತೊಂದೆಡೆ ಇದೆ. ಮಸಾ ಸಮ್ಮೇಳನ ಅಥವಾ ಸಂಕಿರಣಗಳು ತಮ್ಮ ಪ್ರತ್ಯೇಕ ಅಸ್ತಿತ್ವದ ಅರ್ಥವನ್ನು ಈ ಅಗತ್ಯಗಳಲ್ಲಿಯೇ ಕಂಡುಕೊಳ್ಳಬೇಕಾಗಿದೆ ಹಾಗೂ ಅವು ಅಂತರ್ನಿರೀಕ್ಷಣೆ, ಮಿತಿ ಮತ್ತು ಸಾಧನೆಯ ವಾಸ್ತವ ಚಿತ್ರಕ್ಕೆ ಎದುರಾಗುವಿಕೆಯನ್ನು ಗಂಭೀರವಾಗಿ ಸ್ವಾಗತಿಸುತ್ತಾ ಅರ್ಥಕಳೆದುಕೊಂಡು ವಿಗಧಿಳಾಗುವುದರಿಂದ ತಪ್ಪಿಸಿಕೊಳ್ಳಬೇಕಾಗಿದೆ.

ವಿಜಯಾ ದಬ್ಬೆ.

ಅಸ್ಸಾಂ ಲೇಖಕಿ ನಿರುಪಮಾ ಬಾರ್ಗೊಹೈನ್‌ಗೆ ನಂಜನಗೂಡು ತಿರುಮಲಾಂಬ ಪ್ರಶಸ್ತಿ.

ಬೆಂಗಳೂರಿನ ಶಾಶ್ವತಿ ಮಹಿಳಾ ಅಧ್ಯಯನ ಕೇಂದ್ರ ಹಾಗು ಸಂಗ್ರಹಾಲಯ ಕಳೆದ ಮೂರು ವರ್ಷಗಳಿಂದ, ಪ್ರತಿ ವರ್ಷ ಅತ್ಯುತ್ತಮ ಭಾರತೀಯ ಮಹಿಳಾ ಲೇಖಕಿಯರಿಗೆ 'ನಂಜನಗೂಡು ತಿರುಮಲಾಂಬಾ ಪ್ರಶಸ್ತಿ' ಯನ್ನು ನೀಡುತ್ತಿದೆ. 1980ರ ಸಾಲಿಗೆ ಈ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡವರು ಅಸ್ಸಾಂ ಲೇಖಕಿ ಹಾಗು ಪತ್ರಕರ್ತೆ ನಿರುಪಮಾ ಬಾರ್ಗೊಹೈನ್.

1932ರಲ್ಲಿ ಜನಿಸಿದ ನಿರುಪಮಾ ಬಾರ್ಗೊಹೈನ್ ಅವರು ಕಲ್ಕತ್ತ ವಿಶ್ವವಿದ್ಯಾನಿಲಯದ ಇಂಗ್ಲಿಷ್ ಎಂ. ಎ. ಹಾಗೂ ಗೌಹಾತಿ ವಿಶ್ವವಿದ್ಯಾನಿಲಯದ ಅಸ್ಸಾಮಿ ಎಂ. ಎ. ಪದವೀಧರರು. ವೃತ್ತಿಯಲ್ಲಿ ಪತ್ರಕರ್ತೆಯಾದ ಇವರು ಅನೇಕ ಸಣ್ಣಕಥೆಗಳು ಹಾಗು ಕಾದಂಬರಿಗಳನ್ನು ಬರೆದಿದ್ದಾರೆ.

"ನಮ್ಮ ಸಮಾಜದಲ್ಲಿರುವ ಅನೇಕ ಸಮಸ್ಯೆಗಳಲ್ಲಿ 'ಮಹಿಳಾ ಪ್ರಶ್ನೆ' ತೀವ್ರತರವಾದದ್ದು. ನಾಲ್ಕು ದಶಕಗಳ ಕಾಲದ ತಮ್ಮ ಲೇಖಕಿ ವೃತ್ತಿ ಜೀವನದಲ್ಲಿ 'ಮಹಿಳಾ ಪ್ರಶ್ನೆ' ಪದೇ ಪದೇ ಕಾಡಿದೆ. ಸುತ್ತಲ ಬದುಕಿನ ವಾಸ್ತವ ಚಿತ್ರಣವನ್ನು ದಾಖಲುಗೊಳಿಸುವ ಯತ್ನದ ಅಂಗವಾಗಿ ಮಹಿಳೆಯರ ನೋವು-ನಲಿವುಗಳು ಪ್ರಜ್ಞಾಪೂರ್ವಕವಾಗಿ ಅಥವಾ ಗೊತ್ತಿಲ್ಲದೆಯೇ ತಮ್ಮ ಕೃತಿಗಳಲ್ಲಿ ಪ್ರಾಧಾನ್ಯತೆ ಪಡೆದಿದೆ" ಎಂದು ನಿರುಪಮಾ ಬಾರ್ಗೊಹೈನ್ ಹೇಳುತ್ತಾರೆ.

"ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಪ್ರಗತಿ ಆಗುತ್ತಿದೆ ಎಂಬ ವಾದವಿದ್ದರೂ ಮಹಿಳೆಯರ ಶೋಷಣೆ ನಿರಂತರವಾಗಿ ಮುಂದುವರಿಯುತ್ತಿದೆ. ಈ ಆಯಾಮವನ್ನು ಪ್ರತಿಬಿಂಬಿಸುವ ತಮ್ಮ ಕೃತಿಗಳು ಇದರ ಪರಿಹಾರ ಮಾರ್ಗಗಳನ್ನು ಸೂಚಿಸಲು ಯತ್ನಿಸುತ್ತದೆ" ಎಂದು ಅವರು ಹೇಳುತ್ತಾರೆ.

"ತಮ್ಮದು, ಮಹಿಳೆಯರು ಸ್ವಲ್ಪ ಮಟ್ಟಿಗಿನ ವಿಮೋಚನೆ ಸಾಧಿಸಿದಂತಹ ರಾಜ್ಯ. ಅಸ್ಸಾಂನಲ್ಲಿ ವರದಕ್ಷಿಣೆ ಸಮಸ್ಯೆ ಇಲ್ಲ. ಇಲ್ಲಿ ರಾತ್ರಿಯ ವೇಳೆ ಮಹಿಳೆಯರು ನಿರ್ಭಯವಾಗಿ ಸಂಚರಿಸಲು ಅವಕಾಶವಿದೆ. ಆದರೂ ಈ ರಾಜ್ಯದಲ್ಲೂ ಮಹಿಳೆಯರ ಮೇಲಿನ ದೌರ್ಜನ್ಯ ವಿಭಿನ್ನ ರೂಪದಲ್ಲಿ ಅಸ್ತಿತ್ವದಲ್ಲಿದೆ" ಎಂದೂ ಅವರು ಪ್ರಶಸ್ತಿ ವಿತರಣ ಸಮಾರಂಭದಲ್ಲಿ ಮಂಡಿಸಿದ ಲಿಖಿತ ಭಾಷಣದಲ್ಲಿ ತಿಳಿಸಿದ್ದಾರೆ.

ಈಗ ತಿರುಮಲಾಂಬಾ ಪ್ರಶಸ್ತಿ ಪಡೆದಿರುವ 'ಅನ್ಯ ಜೀವನ' ಕಾದಂಬರಿಯಲ್ಲಿ ಮಹಿಳಾ ಶೋಷಣೆಯ ವಿವಧ ರೂಪಗಳನ್ನು ಚಿತ್ರಿಸಲಾಗಿದೆ.

ಶಾಶ್ವತಿ ಮಹಿಳಾ ಅಧ್ಯಯನ ಕೇಂದ್ರದಲ್ಲಿ ನಡೆದ ಈ ಸಮಾರಂಭವೊಂದರಲ್ಲಿ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಅಧ್ಯಕ್ಷ ಎಂ. ಕೆ. ಪಾಂಡುರಂಗಶೆಟ್ಟಿ ಅವರು ಪ್ರಶಸ್ತಿಯ 10ಸಾವಿರ ರೂ. ನಗದು ಹಾಗು ಶಾಶ್ವತಿ ಲಾಂಛನ ಕಾಮಧೇನು ವಿಗ್ರಹವನ್ನು ಲೇಖಕಿಗೆ ನೀಡಿ ಗೌರವಿಸಿದರು.

ಈ ಹಿಂದೆ ನಂಜನಗೂಡು ತಿರುಮಲಾಂಬಾ ಪ್ರಶಸ್ತಿ ಪಡೆದಿರುವ ವಿವಿಧ ಭಾಷೆಗಳ ಲೇಖಕಿಯರು: ಛಾಯಾ ದಾತಾರ್ (ಮರಾಠಿ), ಅನುಪಮಾ ನಿರಂಜನ (ಕನ್ನಡ), ಹಾಗು ಕಮಲ ದಾಸ್ (ಮಲೆಯಾಳಂ).

ನಿರುಪಮಾ ಬಾರ್ಗೊಹೈನ್ ಅವರ ಕೃತಿಗಳು: ಸಣ್ಣ ಕಥಾ ಸಂಕಲನಗಳು — ಅನೇಕ್ ಆಕಾಶ್(೧೯೬೧), ಜಲ್ ಚಾಬಿ(೧೯೬೨), ಶೂನ್ಯತಾರ್ ರವ್ಯ (೧೯೬೯).

ನೀಳ್ಗತೆಗಳು: ಇಫಾರ್ ಸಿಪಾರ್ (೧೯೭೧), ಟೆನಿ ಕನ್ಯಾ(೧೯೭೮), ಜನಾನಿರ್ ಸುಧಾನಾಥ್ ಏಜನ್ ದೇಖಾ ಮನುಹ್(೧೯೮೧).

ಕಾದಂಬರಿಗಳು: ಸೇಯ್ ನಾದಿ ನಿರಬಂಧಿ(೧೯೬೩), ಏಜಾನ್ ಬುದ್ಧ ಮನು (೧೯೬೬), ದೀನಾರ್ ಪಿಚಟ್ ದಿನ್ (೧೯೬೮), ಅಂತಸ್ಪತ(೧೯೬೯), ಫ್ರೈಡೆ ಏತಾ ನಿರರ್ಜ ದ್ವೀಪ್(೧೯೭೦), ಚಾಯಾ ಆರು ಚಾಬಿ(೧೯೭೧), ಸಾಮಾನ್ಯ ಅಸಾಮಾನ್ಯ (೧೯೭೧), ಕಕ್ಪುಸರ್ ಘುಲ್(೧೯೭೬), ನಾಮಿ ಅಹೇ ಏ ಸಂಧಿಯಾ(೧೯೭೭), ಇಪಾರ್ ಘರ್ ಸಿಪಾರಾರ್ ಘರ್(೧೯೭೯), ಭವಿಷ್ಯತಾರ್ ರಂಗ ಸುರಯ (೧೯೮೦), ದಿನ್ ಪ್ರತಿದಿನ್ (೧೯೮೨), ಅನ್ಯಜೀವನ್(೧೯೮೭).

ಸಿ. ಜಿ. ಮಂಜುಳ

ಒಂದು ಹೃದಯ ವಿದ್ರಾವಕ ಘಟನೆ

ಗರ್ಭಿಣಿ ಹೆಂಡತಿಯನ್ನ ಕೈಹಿಡಿದಗಂಡನೇ ಕೊಲೆ ಮಾಡಿ, ದರೋಡೆ ಕಥೆಕಟ್ಟಿ ಪಾರಾಗಲು ಪ್ರಯತ್ನಿಸಿ, ೨೩ ನಿರಪರಾಧಿಗಳ ಆಟೋರಿಕ್ಷಾಗಳನ್ನು ಸುಡಿಸಲು ಕಾರಣಕರ್ತನಾದ ದಾರುಣ ಹಾಗೂ ಮನಕಲಕುವ ದುರಂತ ಘಟನೆ ಚನ್ನರಾಯ ಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳದ ಸಮೀಪ ಆ. ೨೩ರಂದು ನಡೆದಿದೆ.

ರಾಗಿಬೊಮ್ಮೇನ ಹಳ್ಳಿ ಮಂಜುನಾಥ್‌ನೊಂದಿಗೆ (೨೫) ಹೊಸೂರಿನ ಸುಶೀಲ (೨೦) ಕಳೆದ ವರ್ಷ ವಷ್ಟೇ ವಿವಾಹವಾಗಿ ಎಲ್ಲ ಹೆಣ್ಣುಮಕ್ಕಳಂತೆ ಸುಂದರ ಬದುಕಿನ ಹೊಂಗನಸುಗಳನ್ನು ಕಂಡಿದ್ದ ಒಬ್ಬ ನತದೃಷ್ಟ ಹೆಣ್ಣುಮಗಳು. ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಅಟೆಂಡರ್ ಆಗಿರುವ ಮಂಜುನಾಥ್ ಬೆಂಗಳೂರಿನ ಫ್ರೇಜರ್ ಟೌನ್ ಶಾಖೆಗೆ ಎರಡು ವರ್ಷದ ಹಿಂದೆ ಬಂದಿದ್ದನು. ಮದುವೆ ಸಂದರ್ಭದಲ್ಲಿ ೧೫ಸಾವಿರರೂ. ನಗದು ಪಡೆದಿದ್ದನು. ಸುಶೀಲಾಗೆ ೧೧ತೊಲ ಚಿನ್ನದ ಆಭರಣವನ್ನು ತವರಿನವರು ಕೊಟ್ಟಿದ್ದರು. ಆತ ೪ತಿಂಗಳ ಹಿಂದೆ ೯ತೊಲ ಚಿನ್ನ ಹಾಗೂ ತನ್ನ ಒಂದು ಎಚ್. ಎಂ. ಟಿ. ವಾಚು ಮತ್ತು ಉಂಗುರವನ್ನು ಒಟ್ಟು ೧೬೦೦೦ರೂ.ಗಳಿಗೆ ಬೆಂಗಳೂರಿನಲ್ಲಿ ಮಾರಿ, ಈ ಹಣದಲ್ಲಿ ಆತ ತಮ್ಮೂರಿನಲ್ಲಿ ೭೫೦೦ರೂ.ಗಳನ್ನು ಕೊಳವೆಬಾವಿ ಕೊರೆಸಲು ಹಾಗೂ ಬಿ. ಡಿ. ಎ. ನಲ್ಲಿ ೨ ನಿವೇಶನಗಳಿಗಾಗಿ ತಲಾ ೩೦೦೦ರೂ.ಗಳನ್ನು ಖರ್ಚು ಮಾಡಿದ್ದನು. ಉಳಿದ ಹಣದಲ್ಲಿ ಸ್ವಲ್ಪ ಸಾಲ ತೀರಿಸಿ, ಉಳಿದದ್ದನ್ನು ಕೈಸಾಲ ತೀರಿಸಿದನು. ಆದರೆ ಹೆಂಡತಿ ಬಳಿ ಮಾತ್ರ ಒಡವೆಗಳನ್ನು ಅಡಪಿಟ್ಟಿರುವುದಾಗಿ ಸುಳ್ಳು ಹೇಳಿದನು.

ಸುಶೀಲ ತನ್ನ ಒಡವೆಗಳನ್ನು ಬೇಗ ಬಿಡಿಸಿ ತರಬೇಕೆಂದು ಗಂಡನನ್ನು ಪದೇಪದೇ ಪೀಡಿಸುತ್ತಿದ್ದಳು. ಇದರ ಪರಿಣಾಮ ಅವಳ ಕೊಲೆಯ ಸಂಚು. ೭ತಿಂಗಳ ಗರ್ಭಿಣಿ ಸುಶೀಲಾಗೆ ಬಾಣಂತನದ ಆರೈಕೆಗೆಂದು ತವರಿನಿಂದ ಕರೆಬಂತು. ಬೆಂಗಳೂರಿನಿಂದ ಹೊರಟ ದಂಪತಿಗಳು ರಾತ್ರಿ ೮ಗಂಟೆಗೆ ಚನ್ನರಾಯ ಪಟ್ಟಣ ತಲುಪಿ ಮಾಂಸಾಹಾರಿ ಹೋಟೆಲೊಂದರಲ್ಲಿ ಊಟ ಮಾಡಿ, ಆಟೋ ಒಂದರಲ್ಲಿ ರಾಗಿಬೊಮ್ಮೇನ ಹಳ್ಳಿಯ ಕಡೆಗೆ ಹೊರಟಾಗ ಮೃತ್ಯುವಿನ ಕರಾಳ ಹಸ್ತ ಸುಶೀಲಳ ಬದುಕನ್ನು ಹಿಂಡುವುದೆಂದು ಯಾರು ತಿಳಿದಿದ್ದರು ? ಊರು ೨ಕಿ.ಮೀ. ದೂರ ಇರುವಾಗ ಹೇಮಾವತಿ ಎಡದಂಡೆ ನಾಲೆಯ ಸೇತುವೆ ಬಳಿ ಆಟೋ ನಿಲ್ಲಿಸಿದ ಮಂಜುನಾಥ್ ಆಟೋ ಚಾಲಕನಿಗೆ ೨೫ರೂ ಕೊಟ್ಟನು. ಆಟೋ ಹೋದ ನಂತರ, ಸೇತುವೆ ಮೇಲೆ ಹೋಗಲು ಸುಶೀಲಾಗೆ ಹೇಳಿದ ಮಂಜುನಾಥ್ ಹಿಂದಿನಿಂದ ಆಕೆಯನ್ನು ನಾಲೆಗೆ ತಳ್ಳಿದನು. ತನ್ನನ್ನು ಉಳಿಸಲು ಆಕೆ ಅಂಗಲಾಚಿದಳು. ನಿರ್ದಯಿಗಂಡ ಗರ್ಭಿಣಿ ನೀರುಕುಡಿದು ನೀರಿನಲ್ಲಿ ಮುಳುಗುವುದನ್ನು ನೋಡುತ್ತಿದ್ದ. ಅಲ್ಲಿಗೆ ಸುಶೀಲಳ ಬದುಕಿನ ಒಂದು ಸುಂದರ ಅಧ್ಯಾಯ ಮುರುಟಿಹೋಯಿತು,

ನಂತರ ಮಂಜುನಾಥ್ ಮುಂಜಾನೆ ೫.೩೦ರ ತನಕ ಕಾಲಕಳೆದು ಕೈಕಾಲಿಗೆ ಸೀರೆಯಲ್ಲಿ ಕಟ್ಟಿಕೊಂಡು ನಾಲೆಯ ಮೆಟ್ಟಿಲ ಮೇಲೆ ತೇಲಿ ಬಂದವನಂತೆ ನಟಿಸಿ ಮಲಗಿದನು. ಇದನ್ನು ಕಂಡು, ಹತ್ತಿರ ಬಂದ ಹಳ್ಳಿಗರಿಗೆ, ಆಟೋಗಳಲ್ಲಿ ತಮ್ಮನ್ನು ಹಿಂಬಾಲಿಸಿದ ಜನರು ಒಡವೆಗಳನ್ನು ಅಪಹರಿಸಿ, ತನ್ನನ್ನೂ ತನ್ನ ಹೆಂಡತಿಯನ್ನು ನಾಲೆಗೆ ತಳ್ಳಿದರೆಂದು ಸುಳ್ಳು ವದಂತಿ ಹಬ್ಬಿಸಿದನು. ಇದರಿಂದ ಕುಪಿತರಾದ ಗ್ರಾಮದ ಜನರು ಚನ್ನರಾಯ ಪಟ್ಟಣದ ಎದುರಿಗಿದ್ದ ೨೩ ಆಟೋಗಳಿಗೆ ಬೆಂಕಿ ಹಚ್ಚಿದರು. ಸುಶೀಲಳು ನೀರುಕುಡಿದು ಹಾಗೂ ಉಸಿರುಕಟ್ಟಿ ಸತ್ತಳೆಂದು ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರ ಅಭಿಪ್ರಾಯವಾಗಿದೆ. ತಮಗಾದ ನಷ್ಟಕ್ಕೆ ಪೂರ್ತಿ ಪರಿಹಾರ ಹಾಗೂ ಸೂಕ್ತ ರಕ್ಷಣೆ ಒದಗಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಆಟೋ ಮಾಲಿಕರು ಹಾಗೂ ಚಾಲಕರು ಕೋರಿದ್ದಾರೆ.

ಎಚ್. ಆರ್. ಚಂದ್ರಶೇಖರ.

ಅರ್ನವಾಜ್ ಇಲ್ಲದ ಒಂದು ವರ್ಷ

ಅರ್ನವಾಜ್ ತೀರಿಕೊಂಡು ಒಂದು ವರ್ಷವೇ ಕಳೆದುಹೋಗಿದೆ. ಆದರೆ ಆಕೆಯ ನೆನಪು ಮಾತ್ರ ಬಿಡದೆ ಕಾಡುತ್ತಲೇ ಇದೆ. "ಚೋಳಮಂಡಲದ ಕಲಾಕಾರರ ಹಳ್ಳಿ" ಯಲ್ಲೇ ನೆಲೆಸಿದ್ದರೂ ಮದರಾಸಿನ ಕಲಾಕ್ಷೇತ್ರದ ಪ್ರಗತಿಪರ ಚಟುವಟಿಕೆಗಳಲ್ಲೆಲ್ಲ ಪ್ರತ್ಯಕ್ಷವಾಗಿ ಪಾಲ್ಗೊಳ್ಳುತ್ತಾ, ಕರ್ನಾಟಕದ ಚಟುವಟಿಕೆಗಳಲ್ಲಿ ತಮ್ಮನ್ನು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ತೊಡಗಿಸಿಕೊಳ್ಳುತ್ತಿದ್ದ ಅರ್ನವಾಜ್ ಇಂದು ಒಂದು ನೆನಪು ಮಾತ್ರ.

ಅರ್ನವಾಜ್ ನೆನಪಾದಾಗಲೆಲ್ಲ ಕಣ್ಣಮುಂದೆ ಹಾದು ಬರುವುದು ಆಕೆ ಇಡುತ್ತಿದ್ದ ಹಣೆಯ ಮೇಲಿನ ಅರ್ಧಚಂದ್ರಾಕಾರದ ಅಗಲದ ಕುಂಕುಮ, ಮುಗುಳ್ನಗೆ ಸೂಸುವ ಸುಂದರವಾದ ಮುಖ. ಅದರಲ್ಲಿ ತುಸು ದೊಡ್ಡವೇ ಎನ್ನಬಹುದಾದ ಆಕರ್ಷಕ ತೀಕ್ಷ್ಣ ಕಂಗಳು.

ಅರ್ನವಾಜ್ ಹುಟ್ಟಿದ್ದು ಬೆಳೆದದ್ದು ಎಲ್ಲ ಮದರಾಸಿನಲ್ಲಿ. ಕಲಿತದ್ದು ಅಲ್ಲಿನ ಕಲಾಶಾಲೆಯಲ್ಲಿ. ದೇವಿಪ್ರಸಾದ್ ಚೌಧರಿ ಮತ್ತು ಕೆ. ಎಸ್. ಪಣಿಕ್ಕರ್ ಅಂತಹ ಮಹಾನ್ ಕಲಾವಿದರು ನಡೆಸಿಕೊಂಡು ಬಂದ ಸಂಸ್ಥೆ ಅದು. ದಕ್ಷಿಣ ಭಾರತದ ಕಲಾಜಗತ್ತಿಗೆ ಹೊಸ ದಿಕ್ಕನ್ನು ಪರಿಚಯಿಸಿದ ಈ ಸಂಸ್ಥೆಯಲ್ಲಿ ಅರ್ನವಾಜ್ ಡಿಪ್ಲೊಮಾ ಪಡೆದುಕೊಂಡರು. ನಂತರ ತಮ್ಮ ಮಾಧ್ಯಮದ ಹೊಸಹೊಸ ಸಾಧ್ಯತೆಗಳನ್ನು ಅವರು ಕಂಡುಕೊಂಡದ್ದು ಇಲ್ಲಿಯೇ. ತಮ್ಮ ಸ್ವಂತಿಕೆಯನ್ನು ಗುರುತಿಸಿಕೊಂಡ ಅರ್ನವಾಜ್ ನಿಧಾನವಾಗಿ ಬೆಳೆದರು.

ಚಿಕ್ಕಂದಿನಿಂದ ಕಲೆ ಅರ್ನವಾಜ್ ಬದುಕಿನ ಅವಿಭಾಜ್ಯ ಅಂಗ. ಅದು ವ್ಯಕ್ತವಾಗುತ್ತಿದ್ದುದು ರೇಖೆಗಳಿಂದ ಇವು ಬಾಹ್ಯರೂಪದಲ್ಲಿ ವ್ಯಕ್ತವಾಗುತ್ತಿದ್ದುದಕ್ಕಿಂತ ಹೆಚ್ಚಾಗಿ ಮಾನಸಿಕ ಜಗತ್ತಿನ ಪ್ರತಿನಿಧಿಗಳಾಗಿದ್ದವು.

ಈ ನಡುವೆ ಅಪರ ಸಂಟು ಕನ್ನಡದೊಂದಿಗೆ ಬೆಳೆದದ್ದು, ಕನ್ನಡ ಕಲಾಲೋಕ ಶ್ರೀಮಂತವಾಗಲು ಕಾರಣವಾಯಿತು. ಕಲಾವಿದ ಎಸ್. ಜಿ. ವಾಸುದೇವ್ ಅವರನ್ನು ಮದುವೆಯಾದ ನಂತರ ಕರ್ನಾಟಕದ ಕಲಾಕ್ಷೇತ್ರವನ್ನು ಅಧಿಕಾರದಿಂದಲೇ ಪ್ರವೇಶಿಸಿದರು. ಇಲ್ಲಿನ ಕಲಾವಿದರಿಗೆ ಸ್ಫೂರ್ತಿಯ ಕೇಂದ್ರವಾದರು. ಕಲಾಕಾರರಾಗಿ ತಮ್ಮ ಸುತ್ತಲಿನ ಘಟನೆಗಳಿಗೆ ಆಕೆ ಸ್ಪಂದಿಸುತ್ತಿದ್ದ ರೀತಿ ಅನನ್ಯ.

ಒರಿಯ ವರ್ಣಕುಂಚಗಳನ್ನಷ್ಟೇ ಅರ್ನವಾಜ್ ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಳ್ಳಲಿಲ್ಲ ಲೋಹದ ಮೇಲೂ ಕೈಯಾಡಿಸಿರುವ ಅವರು ಲೋಹದ ಫಲಕ, ಅಲಂಕಾರಿಕ ಪಾತ್ರೆ ಮುಂತಾದವುಗಳನ್ನು ರಚಿಸಿದರು. ಇವು ಮಾಮೂಲಿ ರಚನೆಗಿಂತ ತೀರ ಭಿನ್ನ. ಇವುಗಳಲ್ಲಿ ಒಂದು ರೀತಿಯ ಹೊಸತನವಿದೆ. ಹಾಗೆಂದು ಸಾಂಪ್ರದಾಯಿಕ ಲೋಹ ಕಲೆಯಲ್ಲಿನ ತಮ್ಮ ಪರಿಣತಿಯನ್ನೂ ಅರ್ನವಾಜ್ ಬಿಟ್ಟುಕೊಟ್ಟಿಲ್ಲ. ಅದಕ್ಕೆ ಗ್ರಿಂಡ್‌ಲೇ ಬ್ಯಾಂಕಿಗೆ ಆಕೆ ರಚಿಸಿಕೊಟ್ಟಿರುವ ಮೂರ್ತಿ ಶಿಲ್ಪವೇ ಸಾಕ್ಷಿ.

ಈಕೆ ಎಷ್ಟು ಕ್ರಿಯಾಶಾಲಿಯಾದ ವ್ಯಕ್ತಿಯೆಂದರೆ, ಈಕೆಗೆ ಸ್ವಂತ ನೋವುನಲಿವುಗಳಿವೆಯೋ ಎಂಬ ಭಾವ ಉಳಿದವರ ಮನಸ್ಸಿನಲ್ಲಿ ಹಾದುಹೋಗದೆ ಇರುತ್ತಿರಲಿಲ್ಲ.

ಜವರಾಯನಿಗೆ ಒಣಗಿದ, ವಯಸ್ಸಾದ, ಬಿದ್ದುಹೋಗುವ ಮರಗಳು ಬೇಡ, ಬೆಳೆದು ಫಲ ನೀಡುವ ಜೀವಂತ ಮರಗಳೇ ಬೇಕು. ಇನ್ನೆಷ್ಟು ಕ್ರೂರಿ ಆತ ಎಂದು ಅನ್ನಿಸಿದ್ದು ಅರ್ನವಾಜ್ ಸತ್ತಾಗ. ಸಾವಿನ ನೆರಳು ತನ್ನುದ್ದಕ್ಕೂ ಹಾಸಿದೆ ಎಂಬ ಅರಿವಿದ್ದರೂ ಸ್ವಲ್ಪವೂ ಅಳುಕದೆ ಎಂದಿನಂತೆಯೇ ನಗುಮುಖದಿಂದ ಬದುಕಿದಾಕೆ. ಕ್ಯಾನ್ಸರ್ ಕೀಟ ಈ ಸುಂದರ ಹೂವನ್ನು ಕೊರೆಯುತ್ತಿದ್ದುದು ಗೊತ್ತಿದ್ದುದು ಕೆಲವರಿಗೆ ಮಾತ್ರ. ಆ ನೋವನ್ನು ಮರೆತು ಕ್ರಿಯಾಶೀಲತೆಯನ್ನು ಬೆಳೆಸಿಕೊಳ್ಳುತ್ತಾ ಸದಾ ಲವಲವಿಕೆ

ಯಿಂದ ಇರುತ್ತಿದ್ದ ಅರ್ನವಾಜ್ ಇಂದಲ್ಲ ನಾಳೆ ಸಾಯಬಹುದು ಎಂದು ಯಾರೂ ನಂಬಲು ಸಾಧ್ಯವಿರಲಿಲ್ಲ. ಒಟ್ಟಿನಲ್ಲಿ ಅರ್ನವಾಜ್ ನಮ್ಮಿಂದ ನಮ್ಮ ಮಾನವೀಯ ಜಗತ್ತಿನ ಮೌಲ್ಯಗಳಿಂದ, ನಮ್ಮ ಕಲಾ ಜಗತ್ತಿನಿಂದ ದೂರವಾಗಿದ್ದಾರೆ. ಈ ಲೇಖನ ಬರೆಯಲು ಮತ್ತೊಂದು ಕಾರಣವೆಂದರೆ, ಅರ್ನವಾಜ್ ಮರಣಹೊಂದಿ ೧ವರ್ಷ ಹತ್ತಿರ ಹತ್ತಿರವಾಗುತ್ತಿರುವಂತೆ ಅವರ ನೆನಪಿಗಾಗಿ ಪುಟ್ಟ ಪುಸ್ತಕವೊಂದು ಬಿಡುಗಡೆಯಾಗಿದೆ. ಇದೊಂದು ಅಂದವಾದ ಪುಸ್ತಕ ಅದರಲ್ಲಿ ಆಕೆ ಬೆಳೆದು ಬಂದ ದಾರಿ, ಬದುಕಿನ ಮಜಲುಗಳನ್ನು ಗೀತಾಡಾಕ್ಟರ್ ಸುಂದರವಾಗಿ ಚಿತ್ರಿಸಿದ್ದಾರೆ. ಅದರಲ್ಲಿ ಆಕೆಯು ರಚಿಸಿರುವ ೨೧ಕೃತಿಗಳ ವರ್ಣ ಹಾಗೂ ಕಪ್ಪು ಬಿಳುಪು ಚಿತ್ರಗಳಿವೆ. ಈ ಪುಸ್ತಕವನ್ನು ಅರ್ನ್‌ವಾಜ್ ಪತಿಗೆ, ಮಗ ಭರಣಿಗೆ ಅರ್ಪಿಸಿದ್ದಾರೆ. ಇದನ್ನು ಬರೆಯುತ್ತಿರುವಾಗಲೂ ಅರ್ನವಾಜ್ ನಮ್ಮಿಂದ ದೂರವಾಗಿದ್ದಾರೆಂದು ನಂಬಲೇ ಸಾಧ್ಯವಾಗುತ್ತಿಲ್ಲ. ಕಲಾಜಗತ್ತಿನಿಂದ ಮರೆಯಾಗಿರುವ ಕಲಾವಿದೆಗೆ ನಮ್ಮ ನಮನಗಳು.

ಕನಸುಗಳು ಕಳೆದಿವೆ.

ಕಳೆದುಹೋಗಿವೆಯಲ್ಲಾ, ಕನಸುಗಳು
ಕರಗಿಹೋದವೆ ಎಲ್ಲಾ, ನನಸಾಗದೆಯೇ
ಕಾಮನಬಿಲ್ಲಿನಂತ ಬಣ್ಣಬಣ್ಣದ ಕನಸುಗಳು
ನೀರಿನೊಳಗಿನ ಮೀನ ಹೆಜ್ಜೆಯಂದದಲಿಸರಿದು
ಹೋಗಿಹವಲ್ಲಾ

ರಂಗುರಂಗಿನ ಬಾಳಸೀರೆಗೆ
ಜರಿಯಂಚು ಸೆರಗು ಚಿತ್ತಾರವಿಲ್ಲ
ಚಿತ್ತಾಗಿ ಹೋಗಿದೆಯಲ್ಲಾ
ಮನದ ಮಯೂರ ಗರಿಗೆದರಿ ನಿಂತಾಗ
ಕುಣಿಯಲಾಗದ ಸ್ಥಗಿತ
ಹೇಳಲಾಗದ ತುಡಿತ

ಯಾಕೊ ಏನೋ
ಕಳೆದ ದಾರಿಯ ಬೆಂಬತ್ತಿ ಹೋಗಿ
ಎಲ್ಲಿ ಹುಡುಕಲಿ ನಾನು?
ಕರಗಿ ಹೋದ ಎಡೆಯಲ್ಲೆಲ್ಲ
ಏನ ತಡಕಲಿ ನಾನು?

ನೇಯಬಲ್ಲೆನೇ ರಂಗುರಂಗಿನಾ ಸೀರೆಯಾ ಮತ್ತೆ?
ಕಾಣಬಲ್ಲೆನೇ ಕಾಮನಬಿಲ್ಲಿನಾ ಬಣ್ಣವಾ ಮತ್ತೆ?

ದುರ್ಗಾಸುತೆ.

ಆರೋಗ್ಯ

ರಕ್ತಹೀನತೆ ಮತ್ತು ರಕ್ತದ ಒತ್ತಡ

ಈ ಎರಡು ಸಮಸ್ಯೆಗಳು ಮಹಿಳೆಯರಲ್ಲಿ ಅತಿ ಸಾಮಾನ್ಯ. ಇದರ ಪರಿಣಾಮ ದೇಹದ ಎಲ್ಲ ಭಾಗಗಳ ಮೇಲು ಉಂಟಾಗುತ್ತದೆ. ಸರಿಯಾದ ಸಮಯದಲ್ಲಿ ಚಿಕಿತ್ಸೆಗೊಳಪಡದಿದ್ದಲ್ಲಿ ಗಂಭೀರವಾದ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಈ ರೋಗದ ಲಕ್ಷಣಗಳನ್ನು ನಾವು ಗುರುತಿಸಿಕೊಳ್ಳದಿರುವುದರಿಂದ, ಕಡೆಗಣಿಸಿರುವುದರಿಂದ ಪರಿಸ್ಥಿತಿ ತೀರಾ ಗಂಭೀರ ಹಂತಕ್ಕೆ ತಲುಪಬಹುದು. ಈ ರೋಗವನ್ನು ವೈದ್ಯಕೀಯ ಚಿಕಿತ್ಸೆಯಿಂದಷ್ಟೇ ವಾಸಿಮಾಡಲು ಸಾಧ್ಯ ಎನ್ನುವ ನಂಬಿಕೆ ತಪ್ಪು. ಅನೇಕ ಉಪಯುಕ್ತ ಆರೋಗ್ಯಕರ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದರಿಂದ ಈ ಖಾಯಿಲೆಯನ್ನು ತಡೆಯಬಹುದು.

ಮಹಿಳೆಯರಿಗೆ ಪದೇಪದೇ ಬರುವ ಹಾಗೂ ಒಂದೇ ರೀತಿಯ ಗುಣಲಕ್ಷಣದ ಈ ಖಾಯಿಲೆಯಿಂದ ಬೇಸರಗೊಂಡ ಪುರುಷ ವೈದ್ಯರು ಇದು ಮಾನಸಿಕ ಅಸಮತೋಲನದ ಲಕ್ಷಣವೆಂದು ನಿರ್ಧರಿಸಿಬಿಡುತ್ತಾರೆ. ರಕ್ತಹೀನತೆ, ರಕ್ತದ ಒತ್ತಡ ಇದ್ದರೂ ಸಹ ಕೆಲವು ಪೊಳ್ಳು ಪರೀಕ್ಷೆಗೊಳಪಡಿಸಿ ಯಾವುದೇ ದೈಹಿಕ ತೊಂದರೆಗಳಿಲ್ಲವೆಂದು ಪರಿಗಣಿಸಿರುವ ನಿದರ್ಶನಗಳಿವೆ. ಆದ್ದರಿಂದ ಮರೆಯದೆ ರಕ್ತದ ಒತ್ತಡ, ರಕ್ತದಲ್ಲಿನ ಕಬ್ಬಿಣಾಂಶವನ್ನು ಪರೀಕ್ಷಿಸಿಕೊಳ್ಳುವುದು ಒಳ್ಳೆಯದು. ಇದು ಪ್ರತಿಬಂಧಕ ಆರೋಗ್ಯಕರ ಅಭ್ಯಾಸಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ.

ರಕ್ತಹೀನತೆ: ಇದು ಮಹಿಳೆಯರಲ್ಲಿ ಕಂಡುಬರುವ ಸಾಮಾನ್ಯ ಸಮಸ್ಯೆ. ಋತುಚಕ್ರದ ರಕ್ತಸ್ರಾವದಿಂದ ರಕ್ತಹೀನತೆಯುಂಟಾಗುತ್ತದೆ. ಕಬ್ಬಿಣಾಂಶದ ಕೊರತೆಯಿಂದಾಗಿ ಕೆಂಪು ರಕ್ತಕಣಗಳು ಕಮ್ಮಿಯಾಗುತ್ತದೆ. ಈ ರೋಗದ ಮುಖ್ಯ ಲಕ್ಷಣಗಳೆಂದರೆ ವಿಪರೀತ ಸುಸ್ತು, ತಲೆತಿರುಗುವಿಕೆ, ಉಸಿರಾಡಲು ಕಷ್ಟವಾಗುವುದು, ಹಾಗೂ ಕೆಲವೊಮ್ಮೆ ಮೂಳೆಗಳ ನೋವು. ಈ ಖಾಯಿಲೆಗೆ ಉತ್ತಮ ಪ್ರತಿಬಂಧಕವೆಂದರೆ ಕಬ್ಬಿಣಾಂಶ ಹೆಚ್ಚಿರುವ ಆಹಾರ ಸೇವನೆ, ಲಿವರ್, ಮೊಟ್ಟೆ, ಹಣ್ಣು ಹಸಿ ತರಕಾರಿಗಳು, ಸೊಪ್ಪು (ನುಗ್ಗೆ ಸೊಪ್ಪಿನಲ್ಲಿ ಅತಿ ಹೆಚ್ಚಿನ ಕಬ್ಬಿಣಾಂಶವಿದೆ), ರಾಗಿ ಕಬ್ಬಿಣಾಂಶವುಳ್ಳ ಆಹಾರ ವಸ್ತುಗಳು.

ರಕ್ತಹೀನತೆಯನ್ನು ಸರಿಯಾಗಿ ಪತ್ತೆಹಚ್ಚಲು, ಅದರ ಕಾರಣಗಳನ್ನು ತಿಳಿಯಲು ಸಿ. ಬಿ. ಸಿ. (ಕಂಪ್ಲೀಟ್ ಬ್ಲಡ್ ಕೌಂಟ್) ಟೆಸ್ಟ್ ಮಾಡಿಸಿಕೊಳ್ಳುವುದು ಒಳ್ಳೆಯದು. ಈ ಪರೀಕ್ಷೆಗೆ ತೋಳಿನ ರಕ್ತನಾಳದಿಂದ ರಕ್ತವನ್ನು ತೆಗೆಯುತ್ತಾರೆ. ಹಿಮೋಗ್ಲೋಬಿನ್ ಪರೀಕ್ಷೆ ತುಂಬಾ ಸರಳವಾದುದು. ಹಣದ ವೆಚ್ಚವು ತೀರಾ ಕಡಿಮೆ. ಈ ಪರೀಕ್ಷೆಗೆ ಕೇವಲ ೫ ರೂ. ತೆಗೆದುಕೊಳ್ಳುತ್ತಾರೆ. ಬೆರಳಿನಲ್ಲಿ ಒಂದೇ ತೊಟ್ಟು ರಕ್ತವನ್ನು ಚುಚ್ಚಿ ತೆಗೆಯುತ್ತಾರೆ. ಪರೀಕ್ಷೆ ನಂತರ ಇನ್ನೂ ಹೆಚ್ಚಿನ ಪರೀಕ್ಷೆ ಬೇಕೆ ಎಂದು ತಿಳಿದುಕೊಳ್ಳಬಹುದು,

ಹೆಚ್ಚಿನ ರಕ್ತ ಒತ್ತಡ: ಇದು ತಕ್ಷಣ ಸಾವಿಗೆ ಕಾರಣವಾಗದಿದ್ದರೂ, ಸರಿಯಾದ ಸಮಯದಲ್ಲಿ ಚಿಕಿತ್ಸೆಯಾಗದಿದ್ದರೆ ನರ ಹಾಗು ಹೃದಯಕ್ಕೆ ಸಂಬಂಧಪಟ್ಟ ಖಾಯಿಲೆಗೆ ಕಾರಣವಾಗಬಹುದು. ಹೃದಯಾಘಾತಕ್ಕೆ, ಕಿಡ್ನಿ ತೊಂದರೆಗೆ ಕಾರಣವಾಗುತ್ತದೆ. ಇದು ಅನೇಕ ಪುರುಷರ, ಮಹಿಳೆಯರ ಸಾವಿಗೆ ಕಾರಣವಾಗಿದೆ.

ಸಣ್ಣ ವಯಸ್ಸಿನ ಹೆಂಗಸರು, ಮಕ್ಕಳಲ್ಲೂ ಕೂಡ ಈ ರೋಗ ಲಕ್ಷಣಗಳು ಕಂಡುಬರುತ್ತಿದೆ. ಗರ್ಭನಿರೋಧಕ ಮಾತ್ರೆಗಳನ್ನು ಸೇವಿಸುವ ಮಹಿಳೆಯರಲ್ಲೂ ರಕ್ತದೊತ್ತಡ ಹೆಚ್ಚಾಗಿ ಕಂಡುಬಂದಿದೆ. ಮಾತ್ರೆಗಳನ್ನು ಶುರುಮಾಡುವ ಮೊದಲು ಹಾಗು ತೆಗೆದುಕೊಂಡ ೨-೩ ತಿಂಗಳ ನಂತರ ರಕ್ತದೊತ್ತಡವನ್ನು ಪರೀಕ್ಷಿಸಿಕೊಳ್ಳಬೇಕು, ಈಗಾಗಲೆ ತೊಂದರೆಯಿರುವವರು ಗರ್ಭ ನಿರೋಧಕ ಮಾತ್ರೆಗಳನ್ನು ತೆಗೆದುಕೊಳ್ಳದಿರುವುದು ಒಳಿತು.

ಈ ರೋಗದ ಲಕ್ಷಣಗಳೆಂದರೆ— ತಲೆನೋವು, ತಲೆಸುತ್ತು, ಬವಳಿ ಬಂದಂತಾಗುವುದು, ಕಿವಿಯಲ್ಲಿ ಶಬ್ದವಾಗುವುದು, ಸಿಡುಕು ಇತ್ಯಾದಿ. ರೋಗ ಪತ್ತೆಗೆ ಆಗಾಗ ರಕ್ತದ ಒತ್ತಡವನ್ನು ಪರೀಕ್ಷಿಸಿಕೊಳ್ಳುವುದು ಒಳ್ಳೆಯದು. ಅಗತ್ಯವಿದ್ದರೆ ವಿಶೇಷ ರಕ್ತ ಪರೀಕ್ಷೆ

ಮಾಡಿಸಿಕೊಳ್ಳಬೇಕು.

ಗರ್ಭ ನಿರೋಧಕ ಮಾತ್ರೆಯಲ್ಲದೆ ಇನ್ನಿತರ ಕಾರಣಗಳೆಂದರೆ-ಆಹಾರಕ್ರಮ, ಹೆಚ್ಚಿನ ತೂಕ, ಒತ್ತಡ (ಜೀವನಶೈಲಿಗೆ ಸಂಬಂಧಿಸಿದ ಹಾಗು ಭಾವನಾತ್ಮಕ) ವಂಶಪಾರಂಪರ್ಯಕ್ಕೆ ಸಂಬಂಧಿಸಿದ್ದು, ಹಾಗೂ ನೀರು ಸರಬರಾಜು.

ವಂಶಪಾರಂಪರ್ಯ ಹಾಗು ಜೀವನ ಶೈಲಿಯ ಬದಲಾವಣೆ ತೀರಾ ತಪ್ಪು. ಆಹಾರಕ್ರಮ (ಇದು ಜೀವನ ಶೈಲಿಗೆ ಸಂಬಂಧಿಸಿದ್ದೆ) ದಿಂದ ರಕ್ತದ ಒತ್ತಡವನ್ನು ತಡೆಯುವುದು, ನಿರೋಧಿಸುವುದು ಸಾಧ್ಯ. ಉಪ್ಪು ರಕ್ತದೊತ್ತಡವನ್ನು ಹೆಚ್ಚಿಸುತ್ತದೆ. ಉಪ್ಪು ತಿನ್ನುವುದನ್ನು ಕಡಿಮೆಗೊಳಿಸುವುದರೊಂದಿಗೆ ಪ್ರೋಟೀನ್ ಹಾಗು ಶರ್ಕರ ಪಿಷ್ಟಗಳ ಸಮತೋಲನದಿಂದ ರಕ್ತದೊತ್ತಡವನ್ನು ತಡೆಯಬಹುದು. "ಕ್ಯಾಲ್ಷಿಯಂ" ಎನ್ನುವ ಖನಿಜಕ್ಕೂ, ರಕ್ತದೊತ್ತಡಕ್ಕೂ ಹತ್ತಿರ ಸಂಬಂಧವಿದೆ ಯೆಂದು ಅಧ್ಯಯನದಿಂದ ತಿಳಿಯಬಂದಿದೆ. ಗಡಸು ನೀರು ಉಪಯೋಗಿಸುವವರಿಗಿಂತ ಮೆದು ನೀರು ಉಪಯೋಗಿಸುವವರು ಹೆಚ್ಚಿನ ರಕ್ತದೊತ್ತಡದಿಂದ ನರಳುತ್ತಾರೆಂದು ತಿಳಿದುಬಂದಿದೆ. ಮೆದು ನೀರಿನಲ್ಲಿರುವ ಆಮ್ಲವು ಕ್ಯಾಲ್ಷಿಯಂ ವಸ್ತುವಿನ ಸಾರವನ್ನು ತೆಗೆಯುವುದರಿಂದ, ರಕ್ತದ ಒತ್ತಡವನ್ನು ಹೆಚ್ಚಿಸುವುದರಿಂದ, ರಕ್ತದ ಒತ್ತಡವನ್ನು ಹೆಚ್ಚಿಸುತ್ತದೆ. ಕ್ಯಾಲ್ಷಿಯಂನ ಅಂಶ ಹಿಟ್ಟಿನಲ್ಲೂ ಇರುತ್ತದೆ.

ಪೌಷ್ಟಿಕಾಂಶದ ಕೊರತೆ, ಬಡತನವು ರಕ್ತದೊತ್ತಡಕ್ಕೆ ಕಾರಣ. ಬಡತನದಿಂದಾಗಿ ಕಡಿಮೆ ಬೆಲೆಗೆ ಸಿಗುವ ಕೊಬ್ಬು, ಶರ್ಕರ ಪಿಷ್ಟಗಳನ್ನು ಸೇವಿಸುವುದರಿಂದ ಅಪೌಷ್ಟಿಕತೆಯುಂಟಾಗುತ್ತದೆ. ಅಪೌಷ್ಟಿಕ ಆಹಾರದ ರುಚಿ, ಬಲವಿಲ್ಲದಲ್ಲಿ ಪೌಷ್ಟಿಕತೆಯ ಕೊರತೆಯುಂಟಾಗುತ್ತದೆ. ಈ ವಿಷಯಗಳನ್ನು ಗಮನಿಸಿದಾಗ ರಕ್ತದೊತ್ತಡಕ್ಕೆ ಆರ್ಥಿಕ-ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯು ಕಾರಣವೆಂಬುದನ್ನು ಗಮನಿಸಬಹುದು.

ಸಾಮಾನ್ಯವಾಗಿ ರಕ್ತದ ಒತ್ತಡಕ್ಕೆ ರೆಸರ್ಪೈನ್ ಎನ್ನುವ ಔಷಧಿ ಬಳಕೆಯಲ್ಲಿದೆ. ಈ ಔಷಧಿಯಿಂದ ಸ್ತನಗಳ ಕ್ಯಾನ್ಸರ್ ಬರುವ ಸಾಧ್ಯತೆಯಿದೆ. ಔಷಧದಿಂದ ತಡೆಯಬಲ್ಲ ರಕ್ತದ ಒತ್ತಡವನ್ನು ಆಹಾರ ಕ್ರಮದಿಂದಲೆ ತಡೆಯಬಹುದು.

ಸರಸ್ವತಿ ದು.

ಕೃಪೆ: ಅವರ್ ಬಾಡೀಸ್ ಅಂಡ್ ಅವರ್‌ಸೆಲ್ಫ್ಸ್.

ಇಟ್ಟಿಗೆ ಗೂಡುಗಳಲ್ಲಿ ಹೆಣ್ಣಿನ ಬಂಧನ

ಒಳ್ಳೆಯ ಕೆಲಸ ಹಾಗೂ ಕೈ ತುಂಬ ಹಣ ಸಿಗಬಹುದೆಂಬ ಆಸೆಯಿಂದ ಬಿಹಾರಿನ ಹಳ್ಳಿಗಳಿಂದ ಹದಿಹರೆಯದ ಆದಿವಾಸಿ ತರುಣಿಯರು ಗುಲಾಮಗಿರಿಯ ಶೃಂಖಲೆಗಳೊಳಗೆ ಬಂಧಿತರಾಗುತ್ತಿದ್ದಾರೆ. ಅವರೆಲ್ಲ ಅವಿದ್ಯಾವಂತರು. ದಲ್ಲಾಳಿಗಳ ಮೋಸದ, ಬಣ್ಣದ ಮಾತುಗಳಿಗೆ ಮರುಳಾಗಿ ಬಡತನದ ಬೇಗೆಯಿಂದ ತಪ್ಪಿಸಿಕೊಳ್ಳಲು ಇಟ್ಟಿಗೆ ಗೂಡುಗಳಲ್ಲಿ ಕೆಲಸಕ್ಕೆ ಸೇರುತ್ತಿದ್ದಾರೆ, ಕೆಲಸ ಎನ್ನುವುದಕ್ಕಿಂತಲೂ ದಾಸ್ಯದ ಕಿಚ್ಚಿನ ಸುಳಿಯೊಳಗೆ ಬೀಳುತ್ತಿದ್ದಾರೆನ್ನಬಹುದು.

ಪ್ರತಿ ಮಾನ್‌ಸೂನ್ ಎಂದರೆ ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳ ಕಡೆಯಲ್ಲಿ ಮಧ್ಯವರ್ತಿಗಳು ಹಳ್ಳಿಗಳಲ್ಲಿ ತಮ್ಮ ಕಾರಸ್ಥಾನ ಆರಂಭಿಸುತ್ತಾರೆ. ಎಳೆ ತರುಣಿಯರಿಗೆ ಇದರ ಬಗ್ಗೆ ತಿಳಿದಿದ್ದರೂ ಬಡತನದ ಬವಣೆ, ಹಸಿವಿನ ಬಾಧೆ ತಾಳಲಾರದೆ ಈ ಬಲೆಗೆ ಬೀಳುತ್ತಾರೆ.

ಪುನಿಯ, ಚಾಂಗೋ, ಸಿಮ್ರಿ ಈ ಮೂರು ಜನವೂ ದಲ್ಲಾಳಿಗಳ ಮಾತಿಗೆ ಮರುಳಾಗಿ, ಕೈ ತುಂಬ ಸಂಬಳ, ಗೌರವದ ಕೆಲಸ ಎಂದು ಆಕರ್ಷಿತರಾಗಿ ಸಮಷ್ಟಿಪುರದ ಇಟ್ಟಿಗೆ ಗೂಡೊಂದರಲ್ಲಿ ಕೆಲಸಕ್ಕೆ ಸೇರಿದರು. ಅವರ ಮಾಲಿಕ ದುರಾಸೆಯ ಲಂಪಟ ವ್ಯಕ್ತಿ, ಅವನ ಕಾಮಕೇಳಿಯ ಕೋರಿಕೆಯನ್ನು ತಿರಸ್ಕರಿಸಿದ ಈ ಮೂರೂ ಜನವೂ ಒಂದು ಕ್ಷಣವೂ ಬೇರೆಯಾಗದೇ ಸದಾ ಕಾಲ ಆತ್ಮರಕ್ಷಣೆಗೋಸ್ಕರ ಜೊತೆ ಜೊತೆಯಾಗಿಯೇ ಇರುತ್ತಿದ್ದರು. ಬೇಯಿಸಿದ ಇಟ್ಟಿಗೆಗಳನ್ನು ಗೂಡುಗಳಿಗೆ ಸಾಗಿಸುವ ಉದ್ಯೋಗ ಇವರದು. ವಾರಕ್ಕೆ 30 – 35 ರೂ ಕಡಿಮೆ ವೆಚ್ಚದಲ್ಲಿ ಜೀವನ ಸಾಗಿಸಿ ಮೂರು ತಿಂಗಳಲ್ಲಿ ಇವರು ಉಳಿಸಿದ್ದು ಕೇವಲ 100 ರೂ ಮಾತ್ರ.

ಹೋಲಿ ಹಬ್ಬದ ಸಂಜೆ ಕಾವಲುಗಾರರು ಸ್ವಲ್ಪ ಎಚ್ಚರ ತಪ್ಪಿ ಈ ಮೂರೂ ಜನ ಹುಡುಗಿಯರು ನುಸುಳಿಕೊಂಡು ಓಡಿ ಬರುವ ಸಾಹಸ ಮಾಡಿದರು. ಈ ಕತೆ ಗೊತ್ತಿದ್ದರೂ ಏಳು ಹುಡುಗಿಯರು ಇಲ್ಲಿ, ಮತ್ತೆ ಕಾಣೆಯಾಗಿದ್ದಾರೆ. ಅಪರೂಪಕ್ಕೆ ನಾಗರಿಕ ಹಕ್ಕು ಬಾಧ್ಯತಾ ಸಮಿತಿಯವರು ಈ ಕೆಲವು ಪ್ರಕರಣಗಳಲ್ಲಿ ಪ್ರವೇಶಿಸಿ ಹೆಣ್ಣು ಮಕ್ಕಳಿಗೆ ರಕ್ಷಣೆಯೊದಗಿಸಿದರು. ಮೇ 81 ರಲ್ಲಿ ರಾಂಚಿಯ ಕಾನೂನು ಸಮಿತಿ 50 ಕ್ಕೂ ಹೆಚ್ಚು ಜನ ಪುರುಷ ಹಾಗೂ ಸ್ತ್ರೀಯರನ್ನು ದಾಸ್ಯದಿಂದ ವಿಮುಕ್ತಿಗೊಳಿಸಿದೆ.

ಮೌನ ಮಾತಾದಾಗ

ಸ್ತ್ರೀಯರಲ್ಲಿ ಮೂಡುತ್ತಿರುವ ಜಾಗೃತಿ ಹಾಗೂ ಬದಲಾಗುತ್ತಿರುವ ಸಾಮಾಜಿಕ ಪರಿಸರದಿಂದಾಗಿ ಸ್ತ್ರೀಯರ ಸಮಸ್ಯೆಗಳನ್ನು ನೋಡುತ್ತಿರುವ ದೃಷ್ಟಿಕೋನಗಳು ಬದಲಾಗುತ್ತಿವೆಯಲ್ಲವೆ? ಇಂತಹ ಆಲೋಚನೆ, ವಿಚಾರಗಳು ಅಸ್ಪಷ್ಟವಾಗಿದ್ದು ವೈರುಧ್ಯಗಳಿಂದ ಕೂಡಿರಬಹುದು. ಮಹಿಳಾ ಶೋಷಣೆ, ಕೌಟುಂಬಿಕ ಜವಾಬ್ದಾರಿ, ವಿವಾಹ ಪದ್ಧತಿ, ವರದಕ್ಷಿಣೆ, ಅಸಮಾನವೇತನ ಮುಂತಾದ ವಿಷಯಗಳ ಸುತ್ತ ನಿಮ್ಮ ಸ್ವಂತ ವಿಚಾರಗಳನ್ನು ಹಾಗು ಅನುಭವಗಳನ್ನು ಪುಟ್ಟ ಲೇಖನದ ರೂಪದಲ್ಲಿ ಬರೆದು ಕಳಿಸಿದ ಲೇಖನಗಳಿಗೆಂದು "ಮೌನ ಮಾತಾದಾಗ" ಅಂಕಣವಿದೆ. ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆಗಳನ್ನು ಪ್ರಕಟಿಸಲಾಗುವುದು.

ಸಂ. ಮಂ.

ಸಹಕಾರ ನೀಡಬಲ್ಲಿರಾ.....?

ಸರ್ಕಾರ ಮಹಿಳೆಯರ ವಿವಿಧ ರೀತಿಯ ಅಭಿವೃದ್ಧಿಗೋಸ್ಕರ ವಿಶ್ವದಾದ್ಯಂತ ವ್ಯಾಪಕ ಯೋಜನೆಗಳನ್ನು ಹಾಕಿಕೊಂಡು ಶ್ರಮಿಸುತ್ತಿದೆ. ಇನ್ನೂ ಮಹಿಳೆಯರು ಅನೇಕ ಕ್ಷೇತ್ರಗಳಲ್ಲಿ ಹಿಂದುಳಿದಿದ್ದಾರೆ. ಶೋಷಣೆಗೆ ಒಳಗಾಗಿದ್ದಾರೆ. ಉತ್ಥಾನಗೊಳ್ಳಲು ಹಂಬಲಿಸುತ್ತಾರೆ. ಜನ್ಮವಿತ್ತ ಮಾತೆಯಾಗಿ, ಒಡಹುಟ್ಟಿದ ಸೋದರಿ, ಕೈಹಿಡಿದ ಮಡದಿಯಾಗಿ, ಬಾಳಿನ ಸುಖ–ದುಃಖಗಳಲ್ಲಿ ಸಮಭಾಗಿ, ಸತಿಯಾಗಿ, ಜೀವನದಲ್ಲಿ ಸೋತು ಹತಾಶವಾದಾಗ ಧೈರ್ಯದ ಊರುಗೋಲು ನೀಡುವ ಬಂಧುವಾಗಿ, ತಪ್ಪಿದ್ದಲ್ಲಿ ತಿದ್ದುವ ಮಾರ್ಗದರ್ಶಿಯಾಗಿ, ಮನೆಗೆ ಮಂಗಳ ಮುಂಬೆಳಕಾಗುವ ಸೊಸೆಯಾಗಿ, ವೈವಿಧ್ಯಮಯ ಪಾತ್ರವನ್ನು ನಿರ್ವಹಿಸುವ ಸಮಾಜ, ರಾಷ್ಟ್ರಗಳ ನಿರ್ಮಾಣದಲ್ಲಿ ಉಪಯುಕ್ತ ಸೇವೆ ಸಲ್ಲಿಸುತ್ತಿರುವ ಮಹಿಳೆಯರ ಉದ್ಧಾರವಾಗಬೇಕು.

ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಹೆಚ್ಚು ಹೆಚ್ಚು ವೃತ್ತಿರಂಗದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಅವಳು ಮನೆಯ ಒಳಗೂ ಹೊರಗೂ ತನ್ನ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಿಕೊಂಡು ಹೋಗುವ ಹುಮ್ಮಸ್ಸು ಹೊಂದಿದ್ದಾಳೆ. ಅವಳು ತನ್ನ ಕಾರ್ಯವನ್ನು ಸಮರ್ಪಕ ರೀತಿಯಲ್ಲಿ ನಡೆಸಿಕೊಂಡು ಹೋಗುವಲ್ಲಿ ಗಂಡಿನ ಸಹಕಾರ ಅತ್ಯಗತ್ಯ.

ಹಿಂದಿನ ದಿನಗಳಲ್ಲಿ ಮನೆಗೆಲಸಗಳನ್ನು ಹೆಣ್ಣೇ ಮಾಡಬೇಕೆಂಬ ನಿಯಮವಿತ್ತು. ಆದರೆ ಈಗ ಕಾಲಚಕ್ರ ಉರುಳಿದೆ. ಹೆಚ್ಚು ಹೆಚ್ಚು ಮಹಿಳೆಯರು. ಮನೆಯಿಂದ ಹೊರಗೆ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದಾರೆ. ಈ ಆಧುನಿಕ ಯುಗದಲ್ಲಿ ಮನೆಗೆಲಗಳನ್ನು ಹೆಣ್ಣೇ ಮಾಡಬೇಕೆಂಬ ನಿಯಮವೇನಿಲ್ಲ. ಕಛೇರಿಗಳಲ್ಲಿ ಗಂಡೇ ದುಡಿಯಬೇಕೆಂಬ ನಿಯಮ ಹೇಗಿಲ್ಲವೋ ಹಾಗೆ.

ಹೆಣ್ಣು ಮದುವೆಯಾಗಿ ಮಕ್ಕಳನ್ನು ಹೊಂದಿದ್ದ ಪಕ್ಷದಲ್ಲಿ ಅವಳು ಮನೆಯ ಒಳಗಡೆ ಕೆಲಸಮಾಡುವಾಗ ಗಂಡು ಕಾಲಮೇಲೆ ಕಾಲು ಹಾಕಿಕೊಂಡು ಪೇಪರ್ ಓದುವುದು ಖಂಡಿತವಾಗಿಯೂ ಖಂಡನೀಯ. ಅದೇ ಸಮಯದಲ್ಲಿ ಮಕ್ಕಳಿಗೆ ಸ್ನಾನಮಾಡಿಸಿ. ಬಟ್ಟೆ ತೊಡಿಸುವುದು, ಊಟದ ಡಬ್ಬಿ ತುಂಬಿಸಿಕೊಡುವುದು ತತ್‌ಕ್ಷಣವೇ ಯಾವ್ಯಾವ ಸಾಮಾನು ಎಲ್ಲಿ ಇರುತ್ತದೆಯೋ ಅಲ್ಲೇ ಇಡುವ ವ್ಯವಸ್ಥೆ ಮಾಡುವುದು ಇನ್ನು ಮುಂತಾದ ಕೆಲಸಗಳನ್ನು ಮಾಡಬಹುದು. ಮೇಲೆ ಹೇಳಿದ ಕೆಲಸಗಳನ್ನು ಮಾಡುವುದರಿಂದ ಹೆಣ್ಣಿಗೆ ಎಷ್ಟೋ ಕೆಲಸ ಕಡಿಮೆಯಾಗಿ ಅವಳಿಗೂ ಉದ್ಯೋಗಕ್ಕೆ ಹೊರಡಲು ಸ್ವಲ್ಪ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಕೆಲವು ಗಂಡಸರು ಮನೆಯಲ್ಲಿ ಏನಾದರೂ ಕೆಲಸ ಮಾಡಿಕೊಟ್ಟರೆ ತಮ್ಮ ವ್ಯಕ್ತಿತ್ವಕ್ಕೆ ಕುಂದು ಎಂದು ಭಾವಿಸಿರುವವರಿದ್ದಾರೆ. ಆ ರೀತಿ ಭಾವಿಸಿಕೊಳ್ಳುವುದೇ ಅವರ ವ್ಯಕ್ತಿತ್ವಕ್ಕೆ ಕುಂದುಂಟಾಗುವ ವಿಷಯವೆಂದು ಹೇಳಬಹುದು.

ಮನೆಯ ಒಳಗಿನ ಕೆಲಸಕ್ಕೆ ಸಹಕಾರ ನೀಡಿದರೆ

ಅವಳು ತನ್ನ ಕಾರ್ಯಕ್ಷಮತೆಯನ್ನು ಒಳಗೂ ಹೊರಗೂ ಸಮರ್ಪಕವಾಗಿ ನಿಭಾಯಿಸಿಕೊಂಡು ಹೋಗಬಹುದು. ಮನೆಯಲ್ಲಿ ಉತ್ತಮ ಗೃಹಿಣಿಯಾಗಿ, ನಾಳಿನ ಪ್ರಜೆಗಳನ್ನು ರೂಪಿಸುವ ಗುರುವಾಗಿ, ಮನೆಯಿಂದ ಹೊರಗೆ ಉತ್ತಮ ಕೆಲಸಗಾರ್ತಿಯಾಗಿ ತನ್ಮೂಲಕ ರಾಷ್ಟ್ರಕ್ಕೆ ಹಿತ ಕೊಡುವ ಅವಳಿಗೆ ಮಾನಸಿಕ ಶಾಂತಿ ಅತ್ಯಗತ್ಯ. ಮಾನಸಿಕ ಶಾಂತಿ ಸಿಗಬೇಕಾದರೆ, ಮನೆಯೊಳಗೆ ಒತ್ತಡ ಕಡಿಮೆಯಾಗಿ ಮೈಮನಸ್ಸು ತಿಳಿಯಾಗಿ ಹಗುರಾಗಬೇಕು. ಈ ರೀತಿ ಆಗುವಂತೆ ಮಾಡುವುದು ಗಂಡಸರಿಂದ ಖಂಡಿತಾ ಸಾಧ್ಯವಿದೆ.

ಮುಗಿಯದ ಮನೆ ಕೆಲಸಗಳಲ್ಲಿ ನುಗ್ಗಿ ನುರಿಯಾಗಿ ಹೊರಗೆ ಉದ್ಯೋಗದಲ್ಲಿಯೂ ಶೋಷಣೆಗೊಳಗಾಗುತ್ತಿದ್ದಾಳೆ. ಕಾನೂನುಗಳು ಮಹಿಳೆಯರ ಬದುಕನ್ನು ಸುಧಾರಿಸುವಲ್ಲಿ ಕುರುಡಾಗಿದೆ. ಕಾನೂನಿನ ಕಣ್ಣು ತೆರೆಸುವ ಬದಲು ಗಂಡಸರು ತಮ್ಮ ಕಣ್ ತೆರೆಯಬೇಕಾಗಿದೆ. ಈ ನಿಟ್ಟನಲ್ಲಿ ಗಂಡಸರು ಸಕ್ರಿಯ ಪಾತ್ರ ವಹಿಸಿ, ಮಹಿಳೆಗೆ ಮಾನಸಿಕ ನೆಮ್ಮದಿ ದೊರಕಿಸಿ ಕೊಟ್ಟು ಅವಳು ತನ್ನ ಕಾರ್ಯವ್ಯಾಪ್ತಿಯನ್ನು ದಕ್ಷತೆಯಿಂದ ನಿರ್ವಹಿಸಿಕೊಂಡು ಹೋಗುವಲ್ಲಿ ಅನುಕೂಲ ಮಾಡಿಕೊಡುವರೆ............? ಅಥವಾ ಒಂದು ಸಮಸ್ಯೆಗಾದರೂ ತೆರೆಬೀಳುವುದೆ.........?

ಶೋಭಾ ಜೆ.

ಹೆಣ್ಣಿನ ಬಾಳಿನಲ್ಲಿ ಕೆಲವು ಘಟನೆಗಳು:

ಒಂದು ಹುಡುಗಿ ಎಸ್. ಎಸ್. ಎಲ್. ಸಿ. ಓದಿ ಫೇಲಾಗುತ್ತಾಳೆ. ನಾನು ಫೇಲಾದೆನಲ್ಲ ಎಂದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಹಾಗೆ ಮಾಡುವುದು ಬಹಳ ದಡ್ಡತನ. ನಾನು ಈ ಸಾರಿ ಫೇಲಾದೆ ಮತ್ತೆ ಒಂದು ಸಾರಿ ಪರೀಕ್ಷೆ ಕಟ್ಟಿ ಪಾಸ್‌ಮಾಡಿಕೊಳ್ಳಬೇಕು ಎಂಬ ಛಲವನ್ನು ಇಟ್ಟುಕೊಂಡು ಪಾಸಾಗಬೇಕು. ಹೆಣ್ಣುಮಕ್ಕಳಿಗೆ ಓದು ಮುಖ್ಯ ಎನ್ನುವುದು ಬಹಳ ಮುಖ್ಯ. ಹೆಣ್ಣಿನ ಜೀವನದಲ್ಲಿ ಒಂದಲ್ಲ ಒಂದು ಬಾರಿ ಕಷ್ಟ, ಎನ್ನುವುದು ಬಂದೇ ಬರುತ್ತೆ. ಕಷ್ಟದ ಸಮಯದಲ್ಲಿ ದುಡಿಯಬೇಕು. ದುಡಿಯಬೇಕೆಂದರೆ ಓದಿರಬೇಕು. ಒಳ್ಳೇಕೆಲಸ ಮಾಡಬೇಕೆಂದಿದ್ದರೆ ಓದಿರಬೇಕು. ಈಗ ಹೆಂಗಸರಲ್ಲಿ ಬಹಳಷ್ಟು ಜನ ಓದಿಲ್ಲ. ಅವರೆಲ್ಲ ಮನೆಯಲ್ಲೇ ಕೂತು ಕೆಲಸ ಮಾಡುತ್ತಾರೆ. ಊದುಬತ್ತಿ ಉಜ್ಜುವುದು, ಹಪ್ಪಳ ಮಾಡುವುದು, ಹೂಕಟ್ಟುವುದು ಪೇಪರನ್ನು ಕವರ್ ಮಾಡುವುದು— ಹೀಗೆ ಒಂದಲ್ಲ ಒಂದು ಕೆಲಸ ಮಾಡುತ್ತಾರೆ. ಅವರಿಗೆಲ್ಲ ಒಂದಲ್ಲ ಒಂದು ಆಸೆ ಇರುತ್ತದೆ. ಅದೇನೆಂದರೆ ನಾವಂತೂ ಓದಿಲ್ಲ, ನಮ್ಮ ಮಕ್ಕಳಾದರು ಚೆನ್ನಾಗಿ ಓದಲಿ, ದೊಡ್ಡ ಮಹಿಳೆಯರು ಎನ್ನಿಸಿಕೊಳ್ಳಲಿ ಎಂಬ ಆಸೆ ಅವರಿಗಿರುತ್ತದೆ.

ಒಂದು ಮನೆಯಲ್ಲಿ ಗಂಡ, ಹೆಂಡತಿ, ಇಬ್ಬರು ಹೆಣ್ಣುಮಕ್ಕಳಿದ್ದರು. ಅವರಿಬ್ಬರಿಗೂ ಒಂದೇ ರೀತಿ ಓದಿಸಿದರು. ಚಿಕ್ಕವಳು ಬಹಳ ಚೆನ್ನಾಗಿ ಓದಿ ಪಾಸಾದಳು. ದೊಡ್ಡವಳಿಗೆ ಮದುವೆಯಾಯಿತು. ಗಂಡನ ಮನೆಗೆ ಹೋದಳು. ಅಲ್ಲಿ ಗಂಡ ಹೆಂಡತಿ ಅಕಸ್ಮಾತಾಗಿ ಜಗಳ ಮಾಡಿಕೊಂಡು ಡೈವೊರ್ಸ್ ಕೊಟ್ಟನು. ಆಗ ಅವಳು ತವರುಮನೆಗೆ ಬಂದಳು. ತಂದೆಗೆ ವಯಸ್ಸಾಗಿತ್ತು. ಅವರಿಗೆ ದುಡಿಯುವ ಶಕ್ತಿಯಿರಲಿಲ್ಲ. ಆದ್ದರಿಂದ ಅಲ್ಲಿಂದ ಸಹ ಬಂದುಬಿಟ್ಟಳು. ಅವಳು ಏನು ಓದಿರಲಿಲ್ಲವಲ್ಲ, ಅದಕ್ಕೆ ಕೂಲಿ ಮಾಡಬೇಕಾಯಿತು. ಅವಳಿಗೆ ಒಂದು ಮಗು ಸಹ ಇತ್ತು. ಅವಳು ತನ್ನ ಹೊಟ್ಟೆಪಾಡಿಗಾಗಿ ಬಹಳ ಕಷ್ಟಪಡುತ್ತಿದ್ದಳು. ಚಿಕ್ಕವಳಿಗೂ ಮದುವೆಯಾಗಿತ್ತು ಅವಳು ತನ್ನ ಗಂಡನ ಜೊತೆ ಕೆಲಸ ಮಾಡಿಕೊಂಡು ಸುಖವಾಗಿದ್ದಾಳೆ. ದೊಡ್ಡವಳು ತಂಗಿಯನ್ನು ನೋಡಿ ನಾನು ಓದಿದ್ದರೆ ಒಳ್ಳೆ ಕೆಲಸ ಮಾಡಿ ಚೆನ್ನಾಗಿರಬಹುದಿತ್ತು ಎಂದುಕೊಳ್ಳುತ್ತಿದ್ದಾಳೆ.

ಹೀಗೆ ಇನ್ನೊಂದು ಮನೆಯಲ್ಲಿ 7 ಜನ ಹೆಣ್ಣುಮಕ್ಕಳು ದುಡಿಯುವವರು ಒಬ್ಬರು. ಹೀಗಿರುವಾಗ ಮನೆಗೆ ಯಾರೂ ನೋಡಲು ಬಂದರು. ದೊಡ್ಡವಳನ್ನು ನೋಡಿ ಮೆಚ್ಚಿಕೊಂಡು ಹೋದರು. ಮತ್ತೆ ಬಂದು 2000ರೂ. ವರದಕ್ಷಿಣೆ ಕೇಳಿದರು. ಆಗ ತಂದೆ ಹೇಳಿದರು, " ನಮ್ಮ ಕೈಲಿ ಇಷ್ಟೊಂದು ಹಣ ಕೊಡಲಾಗುವುದಿಲ್ಲ, ಒಬ್ಬಳೆ ಅಲ್ಲ ನಮಗಿರೋದು 7ಜನ ಒಬ್ಬೊಬ್ಬರಿಗೂ 2000 ಎಂದರೆ ನಾನು ಎಲ್ಲಿಂದ ತಂದುಕೊಡಲಿ " ಎಂದು ತಮ್ಮ ದುಃಖವನ್ನು ಹೇಳಿಕೊಂಡರು. ಆಗ ಅವರು ಹೆಣ್ಣು ಇಷ್ಟವಿಲ್ಲ ಎಂದು ಹೇಳಿ ಹೊರಟುಹೋದರು. ಒಂದುವೇಳೆ ಮದುವೆ ನಡೂಡಿಕೊಂಡು ಹೋದರೂ ಅವಳಿಗೆ ಬಹಳ ಕಿರುಕುಳ ಕೊಡುತ್ತಾರೆ. ಮತ್ತೆ ಅವಳಿಗೆ ಬೆಂಕಿ ಹಚ್ಚಿ ಸುಡುತ್ತಾರೆ. ಅವಳು ಓದಿದವಳಾದರೆ ಅತ್ತೆ ಮಾವಂದಿರಿಗೆ ಎದುರಾಗಿ ನಿಂತು ಮಾತನಾಡಿ ಮನೆ ಬಿಟ್ಟು ಹೊರಗೆ ಬಂದು ದುಡಿದು ಸಂಪಾದನೆ ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಾಳೆ. ಅದೇ ಅವಳು ಓದಿಲ್ಲದಿದ್ದರೆ ಅನ್ಯಾಯವಾಗಿ ಸಾವನೊಪ್ಪಿಕೊಳ್ಳುತ್ತಾಳೆ. ಹಾಗಾಗಲು ನೀವು ಅವಕಾಶ ಮಾಡಿಕೊಡಬೇಡಿ. ನಾನು ಸಾಮಾನ್ಯ ಹೆಣ್ಣು ನನ್ನ ಕೈಲಿ ಏನೂ ಮಾಡಲಾಗುವುದಿಲ್ಲ ಎಂದು ನೀವು ಧೈರ್ಯಕಳೆದುಕೊಳ್ಳಬೇಡಿ. ಪಿ. ಟಿ. ಉಷಾ ಮತ್ತು ನಾಡಿಯಾ ಇವರು ಹೆಣ್ಣುಗಳಲ್ಲವೆ? ಇಡೀ ಪ್ರಪಂಚದಲ್ಲೇ ಇವರು ಪ್ರಸಿದ್ಧರು.

ಹೆಣ್ಣು ಎನ್ನುವವಳು ನಮ್ಮ ಕೈಗೊಂಬೆಯಲ್ಲ ನಾವು ಆಡಿಸಿದ ಹಾಗೆ ಆಡೋಕೆ. ಅವಳಿಗೂ ಮನಸ್ಸಿದೆ, ಅವಳೂ ಮನುಷ್ಯಳೆ, ಪ್ರಾಣಿಯೇನಲ್ಲ ಎಂಬುದನ್ನು ಪುರುಷರು ತಿಳಿದುಕೊಳ್ಳಬೇಕು. ನಿಮ್ಮ ಮನೆಯಲ್ಲಿರುವ ಹೆಣ್ಣನ್ನು ಕೀಳಾಗಿ ನೋಡಬೇಡಿ. ಅವಳಿಗೆ ಮನಸ್ಸು. ಹೃದಯ ಇದೆಯೆನ್ನುವುದು ನೆನಪಿರಲಿ. ಹೆಣ್ಣುಮಕ್ಕಳೆಂದರೆ ಬಹಳ ಕಷ್ಟ ಎನ್ನುತ್ತಾರೆ, ಏಕೆಂ

24ನೇ ಪುಟ ನೋಡಿ.

ಶರಚ್ಚಂದ್ರ ಚಟ್ಟೋಪಾಧ್ಯಾಯರ ಕೆಲವು ಅನಿಸಿಕೆಗಳು

ಪುರುಷನಿಗೆ ಸ್ತ್ರೀಯು ಯಾವಗ ಬೇಕಾಗುವಳು, ಯಾವ ಸ್ಥಿತಿಯಲ್ಲಿ ಎಂಥ ಸಂಬಂಧದಲ್ಲಿ ಹೆಚ್ಚು ಬೇಕಾಗುವಳು – ಎಂಬ ಮಾತನ್ನು ಗಂಭೀರವಾಗಿ ಯೋಚಿಸಿದರೆ, ಸ್ತ್ರೀಯ ಮಹತ್ವವನ್ನು ತಿಳಿಯಲು ಒಂದು ದಾರಿಯನ್ನು ಹುಡುಕಿದಂತಾಗುವದು.

ಕೆಲವು ಜನರು ಹೀಗೂ ಹೇಳಬಹುದು; ಸ್ತ್ರೀಯರ ಕಾರಣದಿಂದಲೇ ಸುವರ್ಣಪೂರಿಯಾದ ಲಂಕೆ ಬೆಂಕಿಗೀಡಾಯಿತು, ಟ್ರಾಯದ ಸಾಮ್ರಾಜ್ಯವೇ ಹಾಳಾಯಿತು. ಈವರೆಗೆ ಇತಿಹಾಸದಲ್ಲಿ ಬರೆಯದೇ ಉಳಿದಿದ್ದ ಇಂಥ ಇನ್ನೂ ಎಷ್ಟೋ ಸಣ್ಣ — ದೊಡ್ಡ ರಾಜ್ಯಗಳು ಇದುವರೆಗೆ ಹಾಳಾಗಿವೆ. ಅಂದ ಮೇಲೆ ಸ್ತ್ರೀಯು ಸಾಧಾರಣ ಬೆಲೆ ಕಟ್ಟುವದಾದರೂ ಹೇಗೆ? ಪುರುಷರು ತಮ್ಮ ಇಡೀ ಸಾಮ್ರಾಜ್ಯವನ್ನೇ ಹಾಳುಮಾಡಬಹುದಾದ, ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಮೃತ್ಯುವಿಗೀಡಾಗಬಹುದಾದಂಥ ಪ್ರಯೋಜನವಾದರೂ ಏನಿತ್ತು ಈ ಹೆಣ್ಣಿನಿಂದ? ಇದೆಲ್ಲದರ ಬೆಲೆ ಕಟ್ಟುವದು ತೀರ ಅಸಂಭವ. ಹೊರನೋಟದಿಂದ ನೋಡಿದರೆ, ಹೀಗೆ ಹೆಣ್ಣಿನ ಬೆಂಬತ್ತಿದ ಪುರುಷನು ತನ್ನ ರಾಜ್ಯ, ಸಂಪತ್ತಿಗೆ ಎಳ್ಳಷ್ಟೂ ಮಹತ್ವವೀಯಲಿಲ್ಲವೆಂಬುದು ನಿಜ. ಆದರೆ ಇಷ್ಟೆಲ್ಲ ಸೆಣಸಿದ ಮನುಷ್ಯ ಎಷ್ಟರಮಟ್ಟಿಗೆ ಸ್ತ್ರೀಗೆ ಮಹತ್ವಕೊಟ್ಟು ಹೀಗೆ ಮಾಡಿದ ಅಥವಾ ತನ್ನ ಸಂಯಮವಿಲ್ಲದ, ಉಚ್ಛೃಂಖಲ ನೀಚ ಪ್ರವೃತ್ತಿಗೆ ಳಿಗೆ ಎಷ್ಟು ಮಹತ್ವಕೊಟ್ಟು ಹೀಗೆ ವರ್ತಿಸಿದ ಎಂಬ ಪ್ರಶ್ನೆ ಉದ್ಭವಿಸಿದಾಗ ಉತ್ತರ ಕೊಡುವುದು ಸ್ವಲ್ಪ ಕಷ್ಟಕರವಾದೀತು.

ಸ್ತ್ರೀಗೆ ಮಹತ್ವ ಎಷ್ಟು? ಅವಳು ಎಷ್ಟರಮಟ್ಟಿಗೆ ಸೇವಾಪರಾಯಣಳು, ಸ್ನೇಹಶೀಲಳು, ಸತೀತ್ವದ ಭಾವನೆಯುಳ್ಳವಳು, ದುಃಖ - ದುಗುಡಗಳು ಬಂದಾಗ ಮೌನದಿಂದ ಸಹಿಸಬಲ್ಲವಳು? ಅವಳಿಂದ ಪುರುಷನಿಗೆ ದೊರಕುವ ಸುಖ ಮತ್ತು ಲಾಲಸೆಯನ್ನು, ಕಾಮಭಾವನೆಯನ್ನು ಅವಳು ಹೇಗೆ ಸಂಯಮಿಸಬಲ್ಲಳು, ತೃಪ್ತಗೊಳಿಸಬಲ್ಲಳು — ಎಂಬೀ ಪ್ರಶ್ನೆಗಳಿಗೆ ಜಗತ್ತಿನ ಇತಿಹಾಸವನ್ನು ತೆರೆದು, ಉತ್ತರಗಳನ್ನು ಹುಡುಕಿ, ಸ್ತ್ರೀಯ ಮಹತ್ವವನ್ನು ತಿಳಿಯಬೇಕಾದುದು ನಿರ್ವಿವಾದ.

ಮಹಾನಿರ್ವಾಣ ತಂತ್ರದ "ಕನ್ಯಾಪ್ರೇಮಂ ಪಾಲನೀಯಾ ಶಿಕ್ಷಣೀಯಯಾತಿಯತ್ನತಃ" ಎಂಬ ವಾಕ್ಯವೊಂದನ್ನುಳಿದು, ಉಳಿದ ಯಾವ ಶಾಸ್ತ್ರದಲ್ಲಿಯೂ ಸ್ತ್ರೀಗೆ ಶಿಕ್ಷಣ ಕೊಡಬೇಕೆಂಬ ಆದೇಶವಿಲ್ಲ. ಸ್ವರ್ಗೀಯ ಅಕ್ಷಯದತ್ತರು ತಮ್ಮ "ಭಾರತದ ಉಪಾಸಕ ಸಂಪ್ರದಾಯ" ಎಂಬ ಪುಸ್ತಕದ ಉಪಕ್ರಮಣಿಕೆಯ ಭಾಗದಲ್ಲಿ ಇದರ ವಿರುದ್ಧ ವಿತ್ರಸ್ತ ಭಾವನೆಗಳನ್ನು ವ್ಯಕ್ತಪಡಿಸುತ್ತ "ಪ್ರಾಚೀನ ಕಾಲದಲ್ಲಿ ಸ್ತ್ರೀಯರು ವೇದಗಳನ್ನೂ ನಿರ್ಮಿಸಿದರೆಂಬುದೇನೋ ನಿಜ, ಆದರೆ ಶಾಸ್ತ್ರದಲ್ಲಿ ಸಿಕ್ಕುವ 'ತ್ರಯಿಾಕ ಶ್ರುತಿಗೋಚರಾ' ಎಂಬ ಶ್ಲೋಕವನ್ನು ನೋಡಿದರೆ ಈ ತರ್ಕಗಳೆಲ್ಲ ನಿರರ್ಥಕವೆನಿಸುತ್ತದೆ" — ಎಂದು ಬರೆದಿದ್ದಾರೆ. ಯುರೋಪದ ಪ್ರಾಚೀನ ಧರ್ಮಬೋಧಕರೂ ಬಹಳು, "ಸ್ತ್ರೀಯರು ತತ್ವಶಾಸ್ತ್ರವನ್ನು ಎಂದೂ ಅಭ್ಯಸಿಸಬಾರದು; ವೈವಾಹಿಕ ನಿಯಮಗಳನ್ನು ಪಾಲಿಸುವುದೇ ಅವರಿಗೆ ಹೆಚ್ಚಿನ ತತ್ವ" ಎಂದಿದ್ದಾರೆ. ತಾನು ಬುದ್ಧಿವಂತಳಾಗಬೇಕೆಂದು ಬಯಸಿದರೆ ಅದು ಸ್ತ್ರೀಯ ಮಹಾ ದುರ್ಗುಣ, ಎಂದು ಮಾರ್ಟಿನ್ ಲ್ಯೂಥರ್ ತಮ್ಮ ಜೀವಮಾನವೆಲ್ಲ ಹೇಳುತ್ತಿದ್ದರು. ಜ್ಞಾನವು ಪುರುಷನ ಗೌರವವನ್ನು ಹೆಚ್ಚಿಸಿದರೆ, ಅಜ್ಞಾನವು ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುವುದೆಂಬರ್ಥದ ಗಾದೆಯ ಮಾತೊಂದು ಚೀನದಲ್ಲಿ ಪ್ರಚಲಿತವಿದೆ. ಇಂಥ ಪರಿಸ್ಥಿತಿಯಲ್ಲಿ, ಇದಕ್ಕೂ ಹೆಚ್ಚಿನ ಮರ್ಯಾದೆಯನ್ನು ಪುರುಷನಿಂದ ಸ್ತ್ರೀ ಹೇಗೆ ಅಪೇಕ್ಷಿಸಿಯಾಳು? ಊರ್ವಶಿಯು ವೇದವನ್ನು ಯಾವಾಗ ರಚಿಸಿದಳು, ಅಥವಾ ಪತಿಯು ಪ್ರವಾಸದಲ್ಲಿದ್ದಾಗ ದಶಪೌರ್ಣಮಾಸ ವ್ರತದಲ್ಲಿ ಸ್ತ್ರೀಗೆ ಹೋಮ ಮಾಡುವ ಅಧಿಕಾರವನ್ನೇಕೆ ಕೊಟ್ಟರು, ಇಲ್ಲವೆ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯ ಮತ್ತು ಗಾರ್ಗಿಯರ ಸಂವಾದವನ್ನು ಯಾವ ಉದ್ದೇಶದಿಂದ ರಚಿಸಿದರು ಎಂದು ಮುಂತಾದ ಮಾತುಗಳೆಲ್ಲ ಬರಿ ಅರಣ್ಯರೋದನೆಯಾಗಿ ಪರಿಣಮಿಸಿ ಬಿಡಬಹುದು ಅಷ್ಟೆ.

ಇಂದಿಗೆ ಆರು ಸಾವಿರ ವರ್ಷಗಳ ಮೊದಲಿನ ಇಜಿಪ್ತ ಮೊದಲಾದ ಕಡೆಯ ಪ್ರಾಚೀನ ಸಂಸ್ಕೃತಿಗಳ ಸಮಯದ ಸ್ತ್ರೀಯರ ಅಧಿಕಾರಗಳ ಬಗ್ಗೆ ಮ್ಯಾಸ್ಪೋರೋ, 'ಪತ್ನಿಯೆದುರು ಪತಿಯು ಒಬ್ಬ ಮರ್ಯಾದಸ್ಥ ಅತಿಥಿಯಂತೆ ಇರುತ್ತಿದ್ದ', 'ಸ್ತ್ರೀಗೂ ಅಣ್ಣ-ತಮ್ಮಂದಿರಂತೆ ಪೈತೃಕ ಸಂಪತ್ತಿಯಲ್ಲಿ ಸಮಪಾಲು ಸಿಗುತ್ತಿತ್ತು', 'ಅವಳು ಮನೆಯ ಸಂಪೂರ್ಣ ಒಡತಿಯಾಗಿದ್ದಳು', 'ಕಾನೂನಿನ ದೃಷ್ಟಿಯಲ್ಲಿಯೂ ಅವಳಿಗೆ ಪುರುಷರಂತೆ ಸಮಾನ ಅಧಿಕಾರಗಳಿದ್ದವು', 'ಅವಳಿಗೂ ಪುರುಷರಂತೆಯೇ ಅಧಿಕಾರಗಳು ಪ್ರಾಪ್ತವಾಗಿದ್ದವು, ಪುರುಷರಂತೆಯೇ ಅವಳೊಡನೆಯೂ ವ್ಯವಹರಿಸಲಾಗುತ್ತಿತ್ತು' ಎಂದು ಮುಂತಾಗಿ ಬರೆದಿದ್ದಾರೆ. ರೋಮ್‌ಗೆ ಸಿಕ್ಕದ್ದೂ ಈ ಸಂಸ್ಕೃತಿಯ ಪ್ರಕಾಶವೇ. ಆದುದರಿಂದಲೇ ಆ ಕಾಲದ ರೋಮನ್ ಮಹಿಳೆಯರು ತುಂಬ ಸುಧಾರಿಸಿದವರಾಗಿದ್ದರು. ಈ ಮ್ಲೇಚ್ಛ — ನಿಯಮವೇ ನಂತರ ಸುಧಾರಿಸಿದ ಶಾಸನಬದ್ಧ ಕಾನೂನುಗಳಲ್ಲಿ ಹೇಗೆ ಸಮಾವೇಶಗೊಂಡಿತೆಂಬ ಬಗ್ಗೆ 'ಪ್ರಾಚೀನ ಕಾನೂನು' ಎಂಬ ಪುಸ್ತಕದಲ್ಲಿ ಚೆನ್ನಾಗಿ ವಿವೇಚಿಸಲಾಗಿದೆ.

(ಮುಂದುವರೆದಿದೆ.)

ಬೆಸ್ತರವನ ಮಗಳು

ಸಾಂಗಸಿನಿರ್ಯ ಪ್ರಾಂತ್ಯದ ಲಿಂಗಾರ್ಯೆ ಕೊಲ್ಲಿ ನೋಡಲು ತುಂಬ ಸುಂದರ. ಆದರೆ ಅದರ ಮಿನುಗುವ ಸೌಂದರ್ಯದ ಕೆಳಗೆ ಅಪಾಯ ಅಡಗಿದೆ. ಆ ಕೊಲ್ಲಿಯಲ್ಲಿ ಒಂದು ಮಡುವಿದೆ. ಅದು ಈಜಲು ಹೋದವರನ್ನು ಥಟ್ಟನೆ ಎಳೆದುಕೊಂಡು ಪಾತಾಳಕ್ಕೆ ಒಯ್ಯುತ್ತದೆ. ಪ್ರತಿವರ್ಷವೂ ಯಾರಾದರೊಬ್ಬರು. ಅದರಲ್ಲಿಯೂ ಹೆಚ್ಚಾಗಿ ಹುಡುಗಿಯರು. ಈ ಸುಳಿಗೆ ಆಹುತಿಯಾಗುತ್ತಾರೆ. ಹಿಂದೆ ಒಬ್ಬ ಬೆಸ್ತರವನ ಮಗಳು ಕೊಲ್ಲಿಯ ದೇವತೆಯೊಂದಿಗೆ ಇರಲು ಒಪ್ಪಲಿಲ್ಲವಂತೆ, ಆಗಿನಿಂದ ಆ ದೇವರು ವರ್ಷಕ್ಕೊಂದು ಜೀವ ಬೇಡುತ್ತಾನೆ ಎಂದು ಹೇಳುತ್ತಾರೆ. ಅದರ ಕಥೆ ಹೀಗಿದೆ:

ಬಹಳ ಹಿಂದೆ, ಸ್ಪೇನ್ ದೇಶದ ಜನ ಬಂದು ಫಿಲಿಪೈನ್ಸಿನ ಜನರನ್ನು ಆಳಲು ಶುರುಮಾಡುವುದಕ್ಕೂ ಮೊದಲು, ಒಬ್ಬ ಬೆಸ್ತರವನು ತನ್ನ ಹೆಂಡತಿ ಹಾಗೂ ಒಬ್ಬಳೇ ಮಗಳೊಂದಿಗೆ ವಾಸವಾಗಿದ್ದ. ಮಗು ನಗುನಗುತ್ತ ಸದಾ ಸಂತೋಷವಾಗಿರುತ್ತಿದ್ದುದರಿಂದ ತಂದೆತಾಯಿಯರು ಅದಕ್ಕೆ ಮಾಲಿಕೆತ್ ಎಂದು ಹೆಸರಿಟ್ಟರು. ಹುಡುಗಿ ಪುಟ್ಟದಾಗಿದ್ದರೂ ಚುರುಕಾಗಿ ಗಟ್ಟಿಮುಟ್ಟಾಗಿದ್ದಳು. ಮುಂಜಾನೆ ತಂದೆತಾಯಿ ಏಳುವ ಹೊತ್ತಿಗಾಗಲೇ ಅವಳು ಅನ್ನ, ಹುರಿದ ಮೀನು, ಅಕ್ಕಿ ಅರೆದು ಮಾಡಿದ ಬಿಸಿಬಿಸಿ ಪಾನೀಯಗಳ ಬೆಳಗಿನ ಊಟವನ್ನು ಸಿದ್ಧಮಾಡಿರುತ್ತಿದ್ದಳು.

ಮಗಳು ಬಟ್ಟೆ ಒಗೆಯುವುದನ್ನೂ ಅಡಿಗೆ ಮಾಡುವುದನ್ನೂ ನೋಡುವಾಗ ಆ ಮುದಿ ತಂದೆ ತಾಯಿಯರು "ಇವಳಿಲ್ಲದೆ ಹೋದರೆ ಅಮ್ಮ ಗತಿಯೇನು? ಎಂದು ತಮ್ಮ ನಡುವೆ ಕೇಳಿಕೊಳ್ಳುತ್ತಿದ್ದರು. ಸಮುದ್ರದ ದಂಡೆಗುಂಟ ಗಾಳಿಯಂತೆ ಓಡುವಾಗ ಅವಳಿಗಾಗುತ್ತಿದ್ದ ಆನಂದವನ್ನು ನೋಡಲು ಸಂತೋಷವೆನಿಸುತ್ತಿತ್ತು. ತನ್ನ ಗಟ್ಟಿಯಾದ ಮರದ ದೋಣಿಯಲ್ಲಿ ಕುಳಿತು ಸಮುದ್ರಯಾನ ಮಾಡುವುದೆಂದರೆ ಅವಳಿಗೆ ತುಂಬ ಮೆಚ್ಚುಗೆ. ಮುಚ್ಚಿ ಹರಿಯುವ ಸಮುದ್ರದ ಕೊಲ್ಲಿಗಳನ್ನೂ ನಿರ್ಜನವಾದ ಗುಹೆಗಳನ್ನೂ ಪತ್ತೆಮಾಡುವುದೆಂದರೆ ಅವಳಿಗೆ ತುಂಬ ಆಸೆ.

ಒಂದು ದಿನ ಸಂಜೆ ಅವಳು ವಿಚಿತ್ರವಾದ ಸಮುದ್ರದ ಸಸಿಯನ್ನು ಹಿಡಿದು ಮನೆಗೆ ಬಂದಳು. "ಇದು ಎಲ್ಲಿತ್ತೆ ?" ಎಂದು ತಾಯಿ ಕೇಳಿದಳು.

"ಸ್ನಾನ ಮಾಡಲು ಒಂದು ಅದ್ಭುತವಾದ ಸಣ್ಣ ಕೊಲ್ಲಿ ಹುಡುಕಿದೀನಿ. ನಾನೇ ಮೊದಲು ಅಲ್ಲಿ ಕಾಲಿಟ್ಟಿರೋದು ಅಂತ ಕಾಣುತ್ತೆ. ಬೆಟ್ಟದ ಕೆಳಗಿದೆ ಅದು. ಇದು ಅಲ್ಲೀದು." ಮಾಲಿಕೆತ್ ದೂರದ ಕಡಿದಾದ ಕಲ್ಲುಬೆಟ್ಟದ ಕಡೆ ಕೈತೋರಿಸುತ್ತ ಹೇಳಿದಳು.

"ಅದು ಕೆಟ್ಟ ಜಾಗ ಮಗು." ತಂದೆ ಗಾಬರಿಯಿಂದ ಹೇಳಿದ. "ಈ ಕೊಲ್ಲಿಯ ದೇವತೆ ಮಾಕ್ಸಿಲ್ ನಿದ್ರೆ ಮಾಡಲು ಅಲ್ಲಿಗೆ ಹೋಗ್ತಾನೆ ಅಂತಾರೆ. ಯಾರಾದರೂ ಮನುಷ್ಯರು ಆತನ ಶಾಂತಿಯನ್ನು ಕದಡಿದರೆ ಅವನು ಅವರನ್ನು ಶಿಕ್ಷಿಸುತ್ತಾನಂತೆ. ಅಲ್ಲಿಗೆ ಮತ್ತೆ ಹೋಗೋಲ್ಲ ಅಂತ ಮಾತು ಕೊಡು."

ಮಾಲಿಕೆತ್ ನಕ್ಕಳು, "ಅಪ್ಪ, ಅಲ್ಲಿ ಯಾವ ದೇವತೆಯೂ ಇಲ್ಲ. ಇರೋವು ಅಂದರೆ ಅಪರೂಪದ ಮೀನುಗಳು, ಹಕ್ಕಿಗಳು. ನೀನು ಬೇಡ ಅನ್ನೋದಾದರೆ ನಾನು ಹೋಗೋಲ್ಲ. ಅಂತ ಮಾತುಕೊಡ್ತೀನಿ."

ಕೊಲ್ಲಿಯ ದೇವತೆ ಮಾಕ್ಸಿಲ್ ತನ್ನ ಸಣ್ಣ ಕೊಲ್ಲಿಯಲ್ಲಿ ಮಾಲಿಕೆತ್ ಸ್ನಾನ ಮಾಡುವುದನ್ನು ನೋಡಿದ್ದ. ಆಗ ತಾನೇ ಅವನ ಒಬ್ಬಳೇ ಮಗಳು ತೀರಿಕೊಂಡಿದ್ದಳು. ಮಾಲಿಕೆತ್ ಅವಳ ಸ್ಥಾನದಲ್ಲಿ ಮಗಳಾಗಿರಲಿ ಎಂದು ಅವನ ಆಸೆ. ಅವನು ತನ್ನ ಆಳು ರಾಕ್ಷಸಮೀನನ್ನು ಕರೆದು ಹೇಳಿದ, "ಅವಳನ್ನ ನೋಡಿದರೆ ನನ್ನ ಮುದ್ದುಮಗಳ ಜ್ಞಾಪಕ ಬರುತ್ತೆ. ಅವಳು ಮುಂದಿನ ಸಲ ಬಂದಾಗ ಅವಳ ದೋಣೀನ ನನ್ನ ಕೊಲ್ಲಿಯ ಗುಹೆಗೆ ನಡೆಸಿಕೊಂಡು ತಾ."

ಮುಂದಿನ ಸಲ ಮಾಲಿಕೆತ್ ತನ್ನ ಮರದ ದೋಣಿಯಲ್ಲಿ ಕುಳಿತು ಹೊರಟಾಗ ಅದುದಾರಿ ತಪ್ಪಿ ಗುಪ್ತಗವಿಯ ಕಡೆ ಹೊರಟಿತು. ಮಾಲಿಕೆತ್‌ಗೆ ತಂದೆಗೆ ಕೊಟ್ಟ ಮಾತನ್ನು ಮುರಿಯಲು ಇಷ್ಟವಿರಲಿಲ್ಲ. ದೋಣಿಯ ದಿಕ್ಕನ್ನು ಬದಲಾಯಿಸಲು ತುಂಬ ಪ್ರಯತ್ನಪಟ್ಟಳು. ಆದರೆ ಅದು ವ್ಯರ್ಥವಾಯಿತು.

ಅವಳ ದೋಣಿ ಬಹುಬೇಗ ಕೊಲ್ಲಿಯೊಳಕ್ಕೆ ಸರಿದು, ನೀರಿನೊಳಗೆ ಆಳವಾದ ಸುರಂಗಮಾರ್ಗದ

ಕಡೆಗೆ ಎಳೆಯತೊಡಗಿತು. ಮೊದಮೊದಲು ಅವಳಿಗೆ ಕೊಂಚ ಭಯವಾಯಿತು. ಆದರೆ ಸುತ್ತಮುತ್ತಣ ಅದ್ಭುತ ದೃಶ್ಯಗಳು ಅವಳ ಭಯವನ್ನು ಮರಸಿದವು. ದಂಡೆಯ ಎರಡೂ ಬದಿ ಬಣ್ಣಬಣ್ಣದ ಸುವಾಸನೆ ಬೀರುವ ಹೂವುಗಳಿದ್ದವು. ಫಳಫಳ ಮಿನುಗುವ ಹಣ್ಣಿನ ಭಾರಕ್ಕೆ ತೊನೆಯುತ್ತ ನಿಂತಿದ್ದ ಎತ್ತರವಾದ ಮರಗಳಿದ್ದುವು. ಕೆಳಗೆ ತಿಳಿನೀರಿನಲ್ಲಿ ಬಗೆಬಗೆಯ ಆಕಾರ, ಗಾತ್ರ, ಬಣ್ಣಗಳ ಮೀನುಗಳಿದ್ದುವು. ಅವೆಲ್ಲವೂ ಮಾತಾಡುತ್ತಿದ್ದವು. ನಗುತ್ತಿದ್ದವು, ಆಶ್ಚರ್ಯವೆಂದರೆ ಮಾಲಿಕೆತ್‌ಳಿಗೆ ಅವೆಲ್ಲವೂ ಅರ್ಥವಾಗುತ್ತಿತ್ತು.

"ಬಾ, ಮಾಲಿಕೆತ್, ಬಾ." ಅವು ಕೂಗಿ ಕರೆದುವು. "ನಮ್ಮ ದಣಿಯ ದೇಶಕ್ಕೆ ನಿನಗೆ ಸ್ವಾಗತ.ಸದಾಕಾಲ ನಮ್ಮೊಡನೆ ಇದ್ದು ಸುಖವಾಗಿರುವೆಯಂತೆ ಬಾ."

ಮಾಲಿಕೆತ್ ಅವುಗಳತ್ತ ಕೈ ಚಾಚಿದಳು. ಆದರೆ ತಕ್ಷಣ ಚಾಟಿಯ ಏಟಿನಂತಹ ದೊಡ್ಡ ಶಬ್ದವಾಗಿ ಮೀನುಗಳೆಲ್ಲ ಮಾಯವಾದವು. ಮಾಲಿಕೆತ್ ಭಯದಿಂದ ಹುಟ್ಟುಗೋಲನ್ನು ಹಿಡಿದುಕೊಂಡಳು. ಆದರೆ ಅವಳು ಅದನ್ನು ನಡೆಸುವ ಮೊದಲೇ ಅವಳ ದೋಣಿ ದಡಕ್ಕೆ ಬಡಿದು ಅವಳನ್ನು ಮೃದುವಾದ ಪಾಚಿಯ ನೆಲದ ಮೇಲೆ ಎತ್ತಿ ಹಾಕಿತು.

ಮಾಲಿಕೆತ್ ಕತ್ತೆತ್ತಿ ನೋಡಿದಾಗ ಅರ್ಧ ಮಾನವ ಅರ್ಧ ಮೀನಿನ ಶರೀರವುಳ್ಳ ಒಬ್ಬ ಎತ್ತರವಾದ ಕಂಚಿನ ವ್ಯಕ್ತಿ ಕಾಣಿಸಿಕೊಂಡ. ಅವನು ಫಳಫಳನೆ ಹೊಳೆಯುವ ಕಿರೀಟ ತೊಟ್ಟು, ಕೈಯಲ್ಲಿ ಭವ್ಯವಾದ ಬೆಳ್ಳಿಯ ಹಾವುಮೀನಿನ ಆಕಾರದ ದಂಡ ಹಿಡಿದಿದ್ದ. "ಹೆದರಬೇಡ, ಮಾಲಿಕೆತ್." ಆ ವಿಚಿತ್ರಜೀವಿ ಗಟ್ಟಿಯಾಗಿ ಮೊಳಗಿದ. "ನಾನು ಮಾಸ್ಕಿಲ್, ಈ ಕೊಲ್ಲಿಯ ದೇವತೆ. ನೀನು ನನ್ನ ಮುದ್ದಿನ ಮಗಳ ಸ್ಥಾನ ತೆಗೆದುಕೊಳ್ಳಲೆಂದು ನಿನ್ನನ್ನು ಇಲ್ಲಿಗೆ ಕರೆತಂದಿದ್ದೇನೆ. ನೀನು ಬಯಸುವುದೆಲ್ಲವೂ ಇಲ್ಲಿದೆ."

"ಆದರೆ ನನ್ನ ತಂದೆ ತಾಯಿಗಳು ನಾನಿಲ್ಲವೆಂದು ಕೊರಗುತ್ತಾರೆ. ದಯಪಿಟ್ಟು ನನ್ನನ್ನು ಬಿಟ್ಟುಬಿಡು." ಮಾಲಿಕೆತ್ ಗೋಳಾಡತೊಡಗಿದಳು.

"ಅದಂತೂ ಸಾಧ್ಯವೇ ಇಲ್ಲ," ಮಾಸ್ಕಿಲ್ ಅಬ್ಬರಿಸಿದ. ಅವನ ಕೋಪಕ್ಕೆ ಸಮುದ್ರದ ತಳ ನಡುಗಿತು. ಆದರೆ ಕೂಡಲೇ ಹುಡುಗಿಯ ಭೀತಿಯನ್ನು ಕಂಡು ಅವನು ದನಿ ಬದಲಾಯಿಸಿ, ಹೆಚ್ಚು ಮೃದುವಾಗಿ ಮಾತಾಡಿದ. "ನೀನು ಇಲ್ಲಿ ಕೊಂಚ ದಿನ ಇದ್ದ ಮೇಲೆ ನಿನಗೆ ಆ ನಿನ್ನ ಕೊಳಕು ಮನೆ ಮರೆತುಹೋಗುತ್ತದೆ." ಅವನು ನವರತ್ನಖಚಿತವಾದ ಸುಂದರವಾದ ಭವನದ ಕಡೆ ಕೈ ಬೀಸಿ ತೋರಿಸುತ್ತ ಹೇಳಿದ. "ಅಲ್ಲಿ ನೋಡು, ಆ ಬೆಳ್ಳಿಯ ಅರಮನೆ. ಅದು ನಿನ್ನ ಮನೆ. ಅಲ್ಲಿ ಬೇಕಾದ ಹಾಗೆ ಆಳುಕಾಳು ಜತೆಗಾತಿಯರಿರುತ್ತಾರೆ: ತೊಡಲು ಒಡವೆ ವಸ್ತ್ರ, ಉಣ್ಣಲು ಊಟತಿಂಡಿ ಎಲ್ಲ ಇರುತ್ತವೆ. ನನ್ನ ಜತೆ ಬಾ, ಮಗು."

ಮಾಲಿಕೆತ್ ಅವನು ಹೇಳಿದಂತೆ ಕೇಳಲು ನಿರಾಕರಿಸಿದಳು. ಮಾಸ್ಕಿಲ್ ಚಪ್ಪಾಳೆ ತಟ್ಟಿದ. ಇಬ್ಬರು ಆಳುಗಳು ಬಂದು, ಅವಳನ್ನು ಬಲಾತ್ಕಾರದಿಂದ ಎತ್ತಿಕೊಂಡು ಅರಮನೆಗ ಒಯ್ದರು. ಮೂಲೆಮೂಲೆಗಳಿಂದ ಜಲಕನ್ಯೆಯರು ಬಂದರು. ಅವರು ಅವಳಿಗೆ ಸ್ನಾನ ಮಾಡಿಸಿ, ಬೆಳ್ಳಿಯ ಮೇಲಂಗಿ ತೊಡಿಸಿದರು. ಒಬ್ಬಳು ಅವಳ ತಲೆಯ ಮೇಲೆ ಹೂವಿನ ಆಕಾರದ ಕಿರೀಟವಿಟ್ಟಳು. ಉಳಿದವರು ಸಮುದ್ರದ ಆಳದ ಗುಹೆಗಳಿಂದ ಮುದ್ದಾದ ಒಡವೆಗಳನ್ನು ತಂದರು. ಆದರೆ ಮಾಲಿಕೆತ್‌ಳಿಗೆ ಈ ಯಾವ ಸುಂದರ ವಸ್ತುವಿನಲ್ಲೂ ಆಸಕ್ತಿಯಿರಲಿಲ್ಲ. ಅವಳು ಅಳುತ್ತ ಇಷ್ಟು ಮಾತ್ರ ಹೇಳಿದಳು. "ನಿಮ್ಮ ದಣಿಗೆ ನನ್ನನ್ನು ವಾಪಸು ಕಳಿಸಲು ಹೇಳಿ. ನಮ್ಮ ತಂದೆತಾಯಿ ಮುದುಕರು. ಅವರಿಗೆ ನನ್ನ ಸಹಾಯದ ಅಗತ್ಯವಿದೆ."

ಯಾರೂ ಹಿಂದೆಂದೂ ಲಿಂಗರ್ಯೆ ಕೊಲ್ಲಿಯ ದೇವತೆಯ ಮಾತನ್ನು ತೆಗೆದುಹಾಕಿರಲಿಲ್ಲ. ಅವನು ಮಾಲಿಕೆತ್‌ಳನ್ನು ತನ್ನೊಡನೆ ಉಳಿಸಿಕೊಳ್ಳಲು ದೃಢ ಮನಸ್ಸು ಮಾಡಿದ. ಅವಳ ಮನೋರಂಜನೆಗೆ ಆಸ್ಥಾನದ ಅತ್ಯುತ್ತಮ ಆಟಗಾರರನ್ನು ಕರೆಸಿದ. ಅವಳನ್ನೂ ಹುಡುಗಿ. ನಕಲಿ, ಯಕ್ಷಿಣಿ, ಕಸರತ್ತುಗಳನ್ನು ಮಾಡುವ ಮೀನುಗಳು ಬಂದು ತಮ್ಮ ತಮ್ಮ ಆಟ ತೋರಿಸಿದಾಗ ಅವಳು ಕ್ಷಣಕಾಲ ಮನೆಯ ಹಂಬಲವನ್ನು ಮರೆತಳು. ತಮ್ಮ ದಣಿಯಂತೆಯೇ ಅರ್ಧ ಮಾನವ, ಅರ್ಧ ಮೀನಿನ ಶರೀರವುಳ್ಳ ಪುಟ್ಟಪುಟ್ಟ ಸುಂದರ ಹುಡುಗಿಯರೂ ಹುಡುಗರೂ ಅವಳಿಗೆ ತಮ್ಮ ಕಡಲಾಟಗಳನ್ನು ಹೇಳಿಕೊಟ್ಟರು. ಅವಳು ನಕ್ಕದ್ದನ್ನು ಕೇಳಿ ಮಾಸ್ಕಿಲ್‌ಗೆ ಸಂತೋಷವಾಯಿತು.

"ಪುಟ್ಟ ಹುಡುಗಿಗೆ ಅವಳ ಹೊಸ ಮನೆ ಇಷ್ಟವಾಯಿತು" ಎಂದುಕೊಂಡ ಮಾಸ್ಕಲ್. ಆದರೆ ಅವನ ಅಭಿಪ್ರಾಯ ತಪ್ಪಾಗಿತ್ತು. ಬಹುಬೇಗ ಅವಳಿಗೆ ಮನೆಯ ಹಂಬಲ ಮರುಕಳಿಸಿತು. ಒಂದು ದಿನ ಅವಳಿಗೆ ಒಂದು ಧೂಳು ಹಿಡಿದ ಬಡುವಿನ ಮೇಲೆ ಪುಟ್ಟ ಮಂತ್ರದ ಕನ್ನಡಿಯೊಂದು ಸಿಕ್ಕಿತು. ಅದರಲ್ಲಿ ಅವಳಿಗೆ ಕಾಹಿಲೆಯಿಂದ ನರಳುತ್ತಿದ್ದ ತನ್ನ ತಾಯಿ ಹಾಗೂ ಮುದಿ ತಂದೆಯರು ಆತಂಕದಿಂದ ತನಗಾಗಿ ಹುಡುಕಾಡುತ್ತಿದ್ದುದು ಕಾಣಿಸಿತು.

ಅವಳಂತೆಯೇ ಪೂರ್ಣ ಮನುಷ್ಯರೂಪವಿದ್ದ ಅವಳ ದಾದಿ ಅಕುಲಾವ್ ಮಾಲಿಕೆತ್ ಗೋಳಾಡುತ್ತಿರುವುದನ್ನು ಕಂಡು ಕೇಳಿದಳು, "ನೀನು ನಿಜವಾಗಿಯೂ ಮನೆಗೆ ಹೋಗಬೇಕೆ, ಮಗು ?"

"ಹೌದು, ಹೋಗಬೇಕು. ಹೋಗಲೇಬೇಕು."

"ನಿನಗೆ ಹೇಗನ್ನಿಸುತ್ತಿದೆಯೆಂದು ನಾನು ಬಲ್ಲೆ. ಯಾಕೆಂದರೆ ಈ ಜನ ನಿನ್ನಂತೆ ನನ್ನನ್ನೂ ಬಲಾತ್ಕಾರದಿಂದ ಇಲ್ಲಿಗೆ ಎಳೆದು ಕರೆತಂದರು. ಆಗ ನಾನು ಹುಡುಗಿ, ಈಗ ಮುದುಕಿಯಾಗಿದೀನಿ. ಆಮೇಲೆ ನಾನು ಮತ್ತೆ ನಮ್ಮ ಮನೆಯವರನ್ನು ನೋಡಲೇ ಇಲ್ಲ."

ಮಾಲಿಕೆತ್ ಸೋಗರೆದಳು, "ನನಗೆ ವಾಪಸು ಮನೆಗೆ ಹೋಗಲು ಸಹಾಯಮಾಡು. ನೀನೂ ನನ್ನ ಜತೆ ಯಾಕೆ ಬಂದುಬಿಡಬಾರದು ?"

ದಾದಿ ಹೇಳಿದಳು, "ಇಲ್ಲ. ನನಗೀಗ ವಯಸ್ಸಾಯಿತು. ಆದರೆ ನನಗೆ ಒಂದು ಆಸೆಯಿದೆ. ನಿನ್ನ ಮಂತ್ರದ ಕನ್ನಡಿಯನ್ನು ಬಿಟ್ಟುಹೋದರೆ, ಮನುಷ್ಯಪ್ರಪಂಚದಲ್ಲಿ ಏನು ನಡೆದಿದೆ, ಹಾಗೂ ನಿನಗೆ ಏನಾಗುತ್ತಿದೆಯೆಂಬುದನ್ನು ನಾನು ಸದಾ ನೋಡುತ್ತಿರಬಹುದು. ಇಲ್ಲಿ ಕೇಳು. ಇವತ್ತು ರಾತ್ರಿ ಬಂದು ನಿನ್ನನ್ನು ಕರೀತೀನಿ. ಅರಮನೆಯಿಂದ ತಪ್ಪಿಸಿಕೊಂಡು ಹೋಗಲು ಸಹಾಯಮಾಡ್ತೀನಿ. ಆದರೆ ಒಮ್ಮೆ ವಿಶಾಲ ಸಮುದ್ರ ತಲುಪಿದ ಮೇಲೆ ನಿನ್ನನ್ನು ನೀನು ನೋಡಿಕೊಳ್ಳಬೇಕು.

ಆ ರಾತ್ರಿ ಅಕುಲಾವ್ ಆಳು ರಾಕ್ಷಸಮೀನಿನ ಪಾನೀಯದಲ್ಲಿ ನಿದ್ರೆಯ ಪುಡಿಯನ್ನು ಬೆರೆಸಿದಳು. ಆಮೇಲೆ ಗುಪ್ತಮಾರ್ಗಗಳ ಮೂಲಕ ಮಾಲಿಕೆತ್‌ಳನ್ನು ಅರಮನೆಯಾಚೆ ಅವಳ ದೋಣಿಯಿದ್ದಲ್ಲಿಗೆ ಕರೆತಂದಳು. ಅಲ್ಲಿ ಅಕುಲಾವ್‌ನ ನಂಬಿಕೆಗೆ ಪಾತ್ರನಾದವನೊಬ್ಬ ಅವರನ್ನು ಎದುರುಗೊಂಡ. ಅವನು ನೀರೊಳಗಿನ ಸುರಂಗದ ಮೂಲಕ ದೋಣಿಯನ್ನು ನಡೆಸಿಕೊಂಡು ಹೋಗಿ ಮಾಲಿಕೆತ್ ಸಮುದ್ರ ತಲುಪಲು ಸಹಾಯ ಮಾಡಿದ. ಅವನು ಬೀಳ್ಕೊಟ್ಟ ಮೇಲೆ ಮಾಲಿಕೆತ್ ಮನೆಯ ದಾರಿ ಹಿಡಿದಳು.

ಮಾಲಿಕೆತ್ ತಪ್ಪಿಸಿಕೊಂಡು ಹೋದುದು ಪತ್ತೆಯಾದಾಗ ಮಾಸ್ಕಿಲ್ ದೇವತ ರಾಕ್ಷಸಮೀನಿಗೆ ಅವಳನ್ನು ವಾಪಸು ಕರೆತರುವಂತೆ ಅಪ್ಪಣೆ ಮಾಡಿದ. ರಾಕ್ಷಸಮೀನು ಎಷ್ಟೇ ಪ್ರಯತ್ನಿಸಲಿ, ನಿದ್ರೆಯ ಪುಡಿಯ ಪ್ರಭಾವದಿಂದಾಗಿ ಅವನಿಗೆ ವೇಗವಾಗಿ ಈಜಲಾಗಲಿಲ್ಲ. ಅವನು ಬೆನ್ನಟ್ಟಿ ಬರುತ್ತಿರುವುದನ್ನು ಕಂಡು ಮಾಲಿಕೆತ್ ತನ್ನ ಬಲವೆಲ್ಲವನ್ನೂ ಬಿಟ್ಟು ದೋಣಿ ನಡೆಸಿದಳು. ಅವಳು ಆ ಹೊತ್ತಿಗಾಗಲೇ ದಡದ ಹತ್ತಿರ ಬಂದಿದ್ದು, ತಂದೆಯ ಕಣ್ಣಿಗೆ ಬಿದ್ದಿದ್ದಳು. ಅವನೂ ಅವನ ಸ್ನೇಹಿತರೂ ಅವಳ ರಕ್ಷಣೆಗೆ ಓಡಿಬಂದರು. ಇನ್ನೇನು ರಾಕ್ಷಸಮೀನು ಕೈಚಾಚಿ ಮಾಲಿಕೆತ್‌ಳನ್ನು ಹಿಡಿದು ಸಮುದ್ರಕ್ಕೆ ಎಳೆದುಕೊಳ್ಳುವುದರಲ್ಲಿದ್ದಾಗ ಅವಳ ತಂದೆ ಅವಳನ್ನು ತನ್ನ ದೋಣಿಯೊಳಕ್ಕೆ ಕರೆದುಕೊಂಡ. ಉಳಿದ ಬೆಸ್ತರು ರಾಕ್ಷಸಮೀನನ್ನು ಹೊಡೆದಟ್ಟಿದರು. ಮಾಲಿಕೆತ್ ಬೇಗ ಸುರಕ್ಷಿತವಾಗಿ ಮನೆ ಸೇರಿ ತಾಯಿಯ ಜತೆಗೂಡಿದಳು.

ರಾಕ್ಷಸಮೀನು ಮಾಲಿಕೆತ್‌ಳನ್ನು ಕರೆತರಲಿಲ್ಲವೆಂದು ಮಾಕ್ಸಿಲ್ ದೇವತೆಗೆ ಅವನ ಮೇಲೆ ತುಂಬ ಕೋಪ ಬಂದು, ಅವನಿಗೆ ತೀವ್ರ ಶಿಕ್ಷೆ ವಿಧಿಸಿದ. "ನಿನಗೆ ಪ್ರಾಣಾಪಾಯವಾದರೂ ಸರಿಯೆ. ಇನ್ನುಮೇಲೆ ವರ್ಷಕ್ಕೊಮ್ಮೆ ನೀನು ದಂಡೆಗೆ ಹೋಗಿ ಒಬ್ಬ ಹುಡುಗಿಯನ್ನು ಎಳೆದುತರಬೇಕು ಒಂದಲ್ಲ ಒಂದು ದಿನ ನನ್ನ ಮಗಳ ಸ್ಥಾನಕ್ಕೆ ತಕ್ಕವಳೊಬ್ಬಳು ಸಿಗಬಹುದು" ಎಂದು ಅಪ್ಪಣೆಮಾಡಿದ. ಎಂತಲೇ ವರ್ಷಕ್ಕೊಮ್ಮೆ ಸಮುದ್ರದ ಸುಳಿ ಈಜಲು ಹೋದ ಹುಡುಗಿಯರಲ್ಲಿ ಒಬ್ಬಳನ್ನು ನೀರಿನಾಳಕ್ಕೆ ಸೆಳೆದುಕೊಳ್ಳುತ್ತದೆ: ರಾಕ್ಷಸಮೀನು ತನ್ನ ಬಲಿಷ್ಠವಾದ ತೋಳುಗಳನ್ನು ಬೀಸುವುದರಿಂದ ಆ ಸುಳಿ ಉಂಟಾಗುತ್ತದೆ ಎಂದು ಜನ ಅನ್ನುತ್ತಾರೆ.

(ಫಿಲಿಫೈನ್ಸ್‌ನ ಜಾನಪದ ಕಥೆ)

ಕೃಪೆ: ಏಷ್ಯಾದ ಜಾನಪದ ಕಥೆಗಳು.

ಇತಿಹಾಸ ನಿರ್ಮಿಸಿದ ಉಷಾರಾವ್ ಮತ್ತು ಜೂಡಿವಾಲಿಯ

ಮೊನ್ನೆ ಮೊನ್ನೆ ನಡೆದ ಸ್ನೂಕರ್ ಮತ್ತು ಬಿಲಿಯರ್ಡ್ಸ್ ರಾಷ್ಟ್ರೀಯ ಚಾಂಪಿಯನ್ ಷಿಪ್‌ನಲ್ಲಿ ಗೆಲುವಿನ ಕೀರಿಟಧರಿಸಿದ ಉಷಾರಾವ್ ಮತ್ತು ಜೂಡಿವಾಲಿಯ ಭಾರತದ ಸ್ನೂಕರ್ ಹಾಗೂ ಬಿಲಿಯರ್ಡ್ಸ್ ಇತಿಹಾಸದ ಮೈಲಿಗಲ್ಲಾಗಿದ್ದಾರೆ. ರಾಷ್ಟ್ರೀಯ ಚಾಂಪಿಯನ್ ಎನಿಸಿಕೊಂಡ ಮೊಟ್ಟಮೊದಲಿಗರಿವರು. ಹಲವು ಪ್ರ ಪ್ರಥಮಗಳ ಬಗ್ಗೆ ಮಾತನಾಡುವಾಗ ಉಷಾ ಮತ್ತು ಜೂಡಿಯನ್ನು ನೆನಪಿಸಿಕೊಳ್ಳದಿರುವುದು ಅಸಾಧ್ಯ.

ಕೆಲವು ದಿನಗಳ ಹಿಂದಷ್ಟೇ ಮಾರ್ಗರೆಟ್ ಆಳ್ವ ಬೆಂಗಳೂರಿನ ಉಷಾರಾವ್ ಮತ್ತು ಜೂಡಿವಾಲಿಯ ರನ್ನು ಕುರಿತು ಭರವಸೆಯ ಮಾತುಗಳನ್ನಾಡಿದ್ದರು. ಇವರು ಮುಂದೆ ಭಾರತದ ಬಿಲಿಯರ್ಡ್ಸ್ ಹಾಗೂ ಸ್ನೂಕರ್ ಇತಿಹಾಸದ ಮೈಲಿಗಲ್ಲಾಗುವರೆಂದು ಭವಿಷ್ಯ ನುಡಿದಿದ್ದರು. ಮಾರ್ಗರೆಟ್ ಆಳ್ವರ ಮಾತು ಸುಳ್ಳಾಗಲಿಲ್ಲ. ಈ ಇಬ್ಬರೂ ಈಚೆಗೆ ಕರ್ನಾಟಕಕ್ಕೆ ಸ್ನೂಕರ್ ಮತ್ತು ಬಿಲಿಯರ್ಡ್ಸ್‌ನ ರಾಷ್ಟ್ರೀಯ ಚಾಂಪಿಯನ್‌ಷಿಪ್ ಕಿರೀಟ ತೊಡಿಸುವುದ ರಲ್ಲಿ ಯಶಸ್ವಿಯಾಗಿದ್ದಾರೆ. ಅಷ್ಟೇ ಅಲ್ಲ, ರಾಷ್ಟ್ರೀಯ ಚಾಂಪಿಯನ್ ಎನ್ನಿಸಿಕೊಂಡ ಮೊದಲ ಭಾರತೀಯ ಮಹಿಳೆಯರು ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕದ "ಪ್ರಪ್ರಥಮ ಸಾಧನೆ" ಗಳ ವಿಷಯ ಮಾತನಾಡುವಾಗಲೆಲ್ಲ ನಾವು ಉಷಾರಾವ್ ಮತ್ತು ಜೂಡಿಯನ್ನು ನೆನಪಿಸಿಕೊಳ್ಳಲೇ ಬೇಕಾಗುತ್ತದೆ.

ಉಷಾ ಮತ್ತು ಜೂಡಿ ಈ ಆಟವನ್ನು ಪ್ರೀತಿಸಿ ಆಡಲು ಆರಂಭಿಸಿದ್ದು ತೀರಾ ಈಚೆಗೆ. ಆಂಧ್ರದ ಮಾಜಿ ಚಾಂಪಿಯನ್ ಜಯರಾಜ್‌ರಿಂದ ಅಲ್ಪಕಾಲ ಪಡೆದ ತರಬೇತಿ ಈ ಇಬ್ಬರು ಆಟಗಾರ್ತಿಯರ ಸಾಧ್ಯತೆಗಳ ಹೊಸ ದಿಕ್ಕುಗಳನ್ನು ಪರಿಚಯಿಸಿತು. ಗೆಲುವಿನ ಹಾದಿಯನ್ನೂ ಸುಗಮಗೊಳಿಸಿತು.

ಹಾಗೆ ನೋಡಿದರೆ ಉಷಾ ಮಹಾತ್ವಾಕಾಂಕ್ಷೆಯ ಪುಟ್ಟ ಹುಡುಗಿಯಂತೇನೂ ಆಡಲಿಲ್ಲ. ಹದಿ ಹರೆಯದ ಮಗಳಿರುವ ಉಷಾ ಆಡಿದ್ದು ಮನರಂಜನೆ ಗೆಂದು ಮಾತ್ರ. ಗೆಲುವಿನ ಕಿರೀಟ ಮುಡಿಲಿಗೆ ಬಿದ್ದಾಗಲೇ ಅವರಿಗೆ ತಮ್ಮ ಸಾಧನೆಯ ದಪ್ಪ ಗಾತ್ರ ಗಳ ಅರಿವು ಮೂಡಿದ್ದು. ಚಾಂಪಿಯನ್‌ಷಿಪ್‌ನಲ್ಲಿ ಉಷಾ ಆಡಿದ ರೀತಿ ನೋಡಿದರೆ ಅವರು ಸ್ನೂಕ ರ್‌ಗಿಂತ ಮೂರು ಚೆಂಡಿನ ಬಿಲಿಯರ್ಡ್ಸ್‌ನಲ್ಲೇ ಹೆಚ್ಚು ಪರಿಣಾಮವನ್ನುಂಟು ಮಾಡಬಲ್ಲರು ಎಂಬುದು ಖಚಿತ. ಆಶ್ಚರ್ಯವೆಂದರೆ ಬಿಲಿಯರ್ಡ್ಸ್‌ನಲ್ಲಿ ಉತ್ತಮವಾಗಿ ಆಡಿದ ಉಷಾ ಸ್ನೂಕರ್‌ನಲ್ಲೂ ಒಳ್ಳೆಯ ಪ್ರದರ್ಶನ ನೀಡಿ ಸೆಮಿಫೈನಲ್ ಹಂತ ತಲುಪಿದ್ದು ಆಟದ ಮೇಲಿನ ಅವರ ಪ್ರಭುತ್ವದ ಬಗ್ಗೆ ಸ್ಪಷ್ಟ ಕಲ್ಪನೆ ಮೂಡಿಸುತ್ತದೆ. ಉಷಾರ ಆಟದಲ್ಲಿನ ಕೊರತೆಗ ಳನ್ನು ಮೀರಿ ಕಂಡುಬರುವುದು ಅವರ ಮನೋ ದಾರ್ಢ್ಯ ಹಾಗು ಛಲ. ಮತ್ತೊಂದು ಮಾತು, ಉಷಾರ ಪ್ರೀತಿಯ ಮಗಳು ಸಂಗೀತಾ ಸಹ ಉತ್ತಮ ಆಟಗಾರ್ತಿ. ತನ್ನ ಜಗತ್ತಿನಲ್ಲಿ ಈಗಲೇ ಮಿಂಚುತ್ತಿ ರುವ ಭರವಸೆಯ ಹುಡುಗಿ, ಕರ್ನಾಟಕದ ಕನಸಿನ ಭವಿಷ್ಯದ ಆಟಗಾರ್ತಿ.

ಇಪ್ಪತ್ತರ ಹರೆಯದ ಮಾಸದ ಮುಗುಳ್ನಗೆಯ ಜೂಡಿ ಸ್ನೂಕರ್‌ನಲ್ಲಿ ಮಾಡಿರುವ ಸಾಧನೆ ನಮ್ಮ ಹಲವು ಹತ್ತು ಕನಸುಗಳಿಗೆ ದಾರಿಮಾಡಿಕೊ ಟ್ಟಿದೆ. ಫೈನಲ್‌ನಲ್ಲಿ ತಮ್ಮ ಎದುರಾಳಿ ಆಟಗಾರ್ತಿ

ಉಷಾ ಖಂಡೇಲವಾಲರೊಂದಿಗೆ ಸೆಣಸುವಾಗ ಆಕೆ ತೋರಿಸಿದ ಛಲ, ಮರೆಯಲಾಗದಂತಹುದು, ನೆಟ್ಟ ನೋಟ, ಕೊಂಕದೆ ಹೊಡೆತಗಳಿಂದ ಎಲ್ಲರನ್ನೂ ದಂಗುಪಡಿಸಿದ ಜೂಡಿ ಹಲವು ಉತ್ತಮ ಸ್ನೂಕರ್ ಆಟ ದಾರರನ್ನು ಸೃಷ್ಟಿಸಿದ ಕ್ಯಾಥೋಲಿಕ್ ಕ್ಲಬ್‌ನ ಕೊಡುಗೆ. ಬಿಲಿಯರ್ಡ್ಸ್ ತನ್ನ ಆಟವಲ್ಲ ಎಂದು ಸ್ನೂಕರ್‌ನ್ನಪ್ಪಿಕೊಂಡ ಜೂಡಿ ಉಷಾರ ಆಟದಲ್ಲಿ ರುವಂತೆ ತಪ್ಪಿನ ಕಳೆಯನ್ನು ಕಿತ್ತುತೊಲಗಿಸಿದರೆ, ಪರಿಪೂರ್ಣತೆಯತ್ತ ಸಾಗಬಹುದಾದ ಸಾಧ್ಯತೆಗಳಿವೆ.

ಕರ್ನಾಟಕದ ಈ ಇಬ್ಬರು ಮಹಿಳೆಯರ ಸಾಧನೆ ನೂರಾರು ಮಹಿಳೆಯರನ್ನೂ ಸ್ನೂಕರ್ ಮತ್ತು ಬಿಲಿಯರ್ಡ್ಸ್‌ನತ್ತ ಸೆಳೆಯುವ ಸಾಧ್ಯತೆ ಇದೆ.

ಕಿಶೋರಿ.

"ಸುಲ್ತಾನ ರಜಿಯಾ ಬೇಗಂ"

ದೆಹಲಿಯನ್ನಾಳಿದ ಗುಲಾಮವಂಶದ ಇಲ್ತುತ್‌ಮಿಶನ ಮಗಳಾದ ರಝಿಯಾಳ ಬಗ್ಗೆ ಯಾರಿಗೊ ತಿಳಿದಿಲ್ಲ? ರಝಿ ಯಾಬೇಗಂ ಉತ್ತಮ ದೊರೆಯಲ್ಲಿರಬೇಕಾದ ಎಲ್ಲ ಗುಣ ವಿಶೇಷಗಳನ್ನು ಹೊಂದಿದ್ದಳು. ಈಕೆ ರಾಜನೀತಿ ನಿಪುಣಳೂ, ದಕ್ಷ ಆಡಳಿತಗಾರಳೂ, ವೀರವನಿತೆಯೂ ಆಗಿದ್ದಳು. ದೆಹಲಿ ಸಿಂಹಾಸನವನ್ನೇರಿದ ಪ್ರಥಮ ಮತ್ತು ಏಕಮೇವ ಮಹಿಳೆ. ಸರ್ವವಿಧದಲ್ಲೂ ಪುರುಷ ದೊರೆಯಂತೆ ರಾಜ್ಯಭಾರ ಮಾಡಲು ಯತ್ನಿಸಿದ್ದಳು. "ಸುಲ್ತಾನ" ಎಂಬ ಬಿರುದನ್ನೂ ಧರಿಸಿದ್ದಳು ಪುರುಷ ವೇಷ ಧರಿಸಿ ತನ್ನ ದಂಡಿನ ಮುಂಚೂಣಿಯಲ್ಲಿ ಆನೆಯನ್ನೇರಿ ಹೋಗುತ್ತಿದಳು. ಯುದ್ಧಸಮಯದಲ್ಲಿ ತನ್ನ ಸೈನ್ಯದ ನಾಯಕತ್ವವನ್ನು ತಾನೇ ವಹಿಸುತ್ತಿದ್ದಳು. ಇಷ್ಟೆಲ್ಲ ಗುಣವಿಶೇಷಗಳಿದ್ದರೂ ಕೂಡ ರಝಿಯಾ ಸ್ತ್ರೀ ಎನ್ನುವ ಒಂದೇ ಕಾರಣದಿಂದಾಗಿ ಅವಳ ಜೀವನ ಮತ್ತು ಆಳ್ವಿಕೆ ದುರಂ ತರದಲ್ಲಿ ಕೊನೆಗೊಂಡಿತು.

"ತನ್ನ ಗಂಡು ಮಕ್ಕಳ ಅಯೋಗ್ಯತೆಯನ್ನು ಕಂಡ ಅರಸ ಇಲ್ತುತ್‌ಮಿಶನು ತನ್ನ ಉತ್ತರಾಧಿಕಾರಿ ತನ್ನ ಮಗಳೇ ಎಂದು ಸಾವಿಗೆ ಮೊದಲೆ ತಿಳಿಸಿದ್ದು ಗಮನೀಯ. ತಂದೆಯ ನಂಬಿಕೆಯಂತೆ ಶ್ರೇಷ್ಠಸುಲ್ತಾನಳಾಗಿದ್ದ ರಝಿಯಾಳ ಪ್ರತಿಷ್ಠೆ ಯನ್ನು ನೋಡಲಾರದೆ ಆಕೆಯ ಸುತ್ತಮುತ್ತಲಿನ ಪುರುಷಪ್ರ ಧಾನ ಸಮಾಜ ಅವಳನ್ನು ದುರಂತಕ್ಕೆ ತಳ್ಳಿತು. ಇದು ಗಂಡ ಸಿನ ಹೊಟ್ಟೆಕಿಚ್ಚುತನವನ್ನು ತೋರಿಸುತ್ತದೆ.

18ನೇ ಪುಟದಿಂದ

ದರೆ ಅವರಿಗೆ ಕೊಟ್ಟುಕಳುಹಿಸಬೇಕಲ್ಲ? ಹೆಣ್ಣುಮಕ್ಕಳಿಂ ದಲೂ ಸಹ ನಮಗೆ ಬಹಳ ಉಪಯೋಗವಿದೆ ಎಂದು ತಿಳಿ ದುಕೊಳ್ಳುವುದಿಲ್ಲ. ಹೆಣ್ಣಿಂದ ತಂದೆ ತಾಯಿಗೆ ಬರುವ ಸುಖ ಗಂಡಿಂದ ಬರಲು ಸಾಧ್ಯವೇ ಇಲ್ಲ. ನಿಮಗೆ ಸಮಾಜ ಬೆರ ಳೆತ್ತಿ ತೋರಿಸುವ ಹಾಗೆ ಯಾವ ಕೆಲಸವನ್ನೂ ಮಾಡಲು ಹೋಗ ಬೇಡಿ ನಿಮ್ಮ ಪ್ರಾಣ ಎಷ್ಟು ಮುಖ್ಯ ಅಷ್ಟೇ ಮಾನವೂ ಮುಖ್ಯ ಎಂದು ತಿಳಿದುಕೊಳ್ಳಿ, ಯಾವ ಕಾರಣಕ್ಕೂ ಪ್ರಾಣ ಕಳೆದುಕೊಳ್ಳಬೇಡಿ.

ಎಚ್. ನಜಹತ್ ಷಾಹೀನ್

ಕಾಡುಗುಡಿ.

ಒಂದು ಅನುಭವ

ಕೆಲವು ದಿನಗಳ ಹಿಂದೆ ಮೈಸೂರಿನಿಂದ ಊರಿಗೆ ಹೋಗಲು ಸರ್ಕಾರಿ ಬಸ್‌ನಲ್ಲಿ ಕುಳಿತಿದ್ದೆ, ಬಸ್ಸು ಹೊರಡುವ ವೇಳೆಗೆ ತುಂಬಿಕೊಳ್ಳತೊಡಗಿತು. ವಿದ್ಯಾವಂತರಂತೆ ಸೂಟು ಧಾರಿಯಾದ 45 ಅಥವ 50ರ ಹರೆಯದವರೊಬ್ಬರು, ತಮ್ಮ ಮಡದಿಯೊಡನೆ ಬಸ್ ಏರಿದರು, ಆಕೆಯೂ ಕೂಡ ಸುಸಂಸ್ಕೃತಳಂತೆ ಕಾಣಿಸುತ್ತಿದ್ದರು. ಆ ವ್ಯಕ್ತಿ ಚೆನ್ನಾಗಿ ಕುಡಿದು ಬಂದಿದ್ದ. ಕಂಡಕ್ಟರ್‌ಗೂ ಆತನಿಗೂ ಮುಂದೆ ಹೋಗುವ ವಿಷಯದಲ್ಲಿ ಗದ್ದಲ ಪ್ರಾರಂಭವಾಯ್ತು. ಇಲ್ಲಿ ಕಂಡಕ್ಟರನದು ತಪ್ಪಿರಲಿಲ್ಲ, ಆ ಕುಡುಕ ಗಂಡನೆ ಒಳ ಹೋಗದೆ ಬಾಗಿಲಲ್ಲಿ ನಿಂತು ಹೋಗುವವರಿಗೂ ದಾರಿ ಕೊಡದೆ ನಿಂತಿದ್ದ. ತಾಳ್ಮೆ ಕಳೆದುಕೊಂಡ ಕಂಡಕ್ಟರ್ ಸಿಡುಕಿನಿಂದ ಅವನಿಗೆ ಮುಂದೆ ಹೋಗಲು ಹೇಳಿದ, ಆ ಕುಡುಕನ ಹೆಂಡತಿ ಕಂಡಕ್ಟರ್ ಸಂಗಡ ಅವಾಚ್ಯ ಶಬ್ಧಗಳಿಂದ ಜಗಳ ಪ್ರಾರಂಭಿಸಿದಳು.

ಒಳಗಿದ್ದ ಜನರೆಲ್ಲಾ ಅವಳಿಗೆ ಆ ರೀತಿ ಮಾತಾಡಬಾರದು ಎಂದು ಹೇಳಿದರು ಆಕೆ ಮುಂದುವರೆಸಿದ್ದಳು, ಕಂಡಕ್ಟರ್ ಬಸ್ ಹೊರಡಿಸದೆ ಕೆಳಗಿಳಿದುಬಿಟ್ಟ. ಕೊನೆಗೆ ಕುಡುಕ ಗಂಡ ತನ್ನ ಹೆಂಡತಿಗೆ ಅಷ್ಟು ಜನರ ನಡುವೆ ಏಟು ಹೊಡೆಯತೊಡಗಿದ. ನನ್ನ ಕರುಳು 'ಚುರುಕ್' ಎಂದಾಗ ನಾನು ಅವನಿಗೆ ಬುದ್ಧಿ ಹೇಳಲು ಹೊರಟೆ ಆಕೆ "ನನ್ನ ಗಂಡ ನನಗೆ ಹೊಡೆದರೆ ನಿನಗೇನು" ಎಂದು ಮುಖಕ್ಕೆ ಹೊಡೆದಂತೆ ಹೇಳಿದಳು. ಅಂದರೆ ಸ್ತ್ರೀ ತನ್ನ ಶೋಷಣೆ ಆಗುತ್ತಿರುವುದನ್ನೆ ಅರಿಯ ಲಾರದ ಸ್ಥಿತಿಯಲ್ಲಿದ್ದಾಳೆ.

ಎಂ. ವಿ. ಕೃಷ್ಣ.

ಅಕ್ಕ – ಪಕ್ಕ

'ನನ್ನನ್ನು ನೋಡಲಿಕ್ಕೆ ಬಂದಾಗ' ಅದೊಂದು ಲಲಿತವಾದ ಬರವಣಿಗೆ. ಆದರೆ ಅದು ಶಕ್ತ ಲೇಖಕಿಯೊಬ್ಬರ ಬರುವಿಕೆಯನ್ನು ಸೂಚಿಸುತ್ತಿತ್ತು. ಕುತೂಹಲಕಾರಿಯಾದ ಆರಂಭ, ಸೊಗಸಾದ ಬರವಣಿಗೆ, ಅಂತರಂಗವನ್ನು ತೆರೆದುಕೊಳ್ಳುವ ಸ್ವಗತ ತಂತ್ರ ಇವುಗಳಿಂದ ಕೂಡಿದ ಆ ಬರಹ ಓದುಗರನ್ನು ಯಾರೀಕೆ? ಎಂದು ಹುಬ್ಬೇರಿಸುವಂತೆ ಮಾಡಿತು.

ಡಾ॥ ಹಾ. ಮಾ. ನಾಯಕ್
(ಶ್ಯಾಮಲಾದೇವಿ ಬೆಳಗಾಂವಕರ ಅವರನ್ನು ಕುರಿತು)

ಪುರುಷರಿಗೆ ಹೆಂಗಸರೆಂದರೆ ಭೋಗದ ವಿನಾ ಬೇರೇನೂ ಕಾಣುವುದಿಲ್ಲ. ಯಾರನ್ನಾದರೂ ನೋಯಿಸಬೇಕೆಂದರೆ, ಧೈರ್ಯಶಾಲಿಗಳನ್ನು ಹತ್ತಿಕ್ಕಬೇಕೆಂದರೆ ಇರುವ ಒಂದೇ ಅಸ್ತ್ರ, ಆ ಹೆಂಗಸಿನ ನೈತಿಕತೆ ಮಟ್ಟವನ್ನು ಕುರಿತು ಗಳಪುವುದು. ಸ್ನೇಹ ಜೀವನದ ಅರ್ಥ ತಿಳಿಯದ ಮೂರ್ಖರಿಗೆ ಜತೆಯಲ್ಲಿ ಹೆಜ್ಜೆ ಇಟ್ಟ ಪ್ರತಿ ಗಂಡು ಹೆಣ್ಣೂ ಪ್ರಿಯಕರ — ಪ್ರೇಯಸಿಯರಾಗೇ ಕಾಣಿಸುತ್ತಾರೆ. ಅಥವಾ ಹೆಣ್ಣು ಸದಾ ಭೋಗಿಸಲೆಂದೇ ಜೀವಂತ ಇದೆ ಎಂಬ ಭಾವನೆ. ಎಟುಕದಾಗ ದ್ರಾಕ್ಷಿ ಹುಳಿ ಎಂಬ ಟೀಕೆ.

ವಿಜಯಾ
(ಪತ್ರಕರ್ತೆ)

ಈಗ ಕಾವ್ಯರಚನೆಯಲ್ಲಿ ತೊಡಗಿರುವ ಮಹಿಳೆಯರ ಸಂಖ್ಯೆ ಗಣನೀಯವಾಗಿದೆ ಮತ್ತು ಹೊಸ ಹೊಸ ಹೆಣ್ಣು 'ದನಿ' ಕಾವ್ಯದಲ್ಲಿ ಒಡಮೂಡುತ್ತಿದೆ. ಕಾಲಕ್ಷೇಪದ ಕತೆ ಹೇಳುವ ಹೆಂಗಸರ ಸಂಖ್ಯೆಯೇ ಹೆಚ್ಚಿರುವಾಗ ಆ ವೃತ್ತವನ್ನೂ ಭೇದಿಸಿ ತಮ್ಮ ತಮ್ಮ ಅನುಭವಕ್ಕೆ ಆಕಾರ, ಧ್ವನಿಕೊಡಲು ಮನಸ್ಸಿನ ಸೂಕ್ಷ್ಮಗಳನ್ನು ಹಿಡಿಯಲು ಕಾವ್ಯದತ್ತ ಹೆಣ್ಣು ಕಣ್ಣು ಹೊರಳಿಸಿದ್ದು ಮತ್ತು ಈಗ ಪುರುಷನಿಗಿಂತಲೂ ರಭಸವಾಗಿ ಕಾವ್ಯಕ್ಷೇತ್ರದಲ್ಲಿ ಗಮನ ಸೆಳೆಯುತ್ತಿರುವುದು ಒಂದು ಸ್ವಾಗತಾರ್ಹ ಸಂಗತಿ.

'ಪ್ರಿಯ ಓದುಗ' ವಿಭಾಗ
ಮಯೂರ.

"ಹೆಣ್ಣು ಹೆಣ್ಣು ಎಂಬುನನ್ನೇ ಮತ್ತೆ ಮತ್ತೆ ನೆನಪಿಸುವ ಸಮಾಜವನ್ನು ಕಂಡು ರೋಷಗೊಳ್ಳುತ್ತಾರೆ. ಹೆಣ್ಣನ್ನು ಅಸಮಾನತೆಯ ನೆಲೆಯಲ್ಲಿಯೇ ಕಾಣುವ ಅವಳನ್ನು ಅವಮಾನಿಸಿ ಶೋಷಿಸುವ ಈ ಸಮಾಜದ ನಡವಳಿಕೆಗಳಿಗೆ ಕ್ರಮೇಣ ತೆರೆದುಕೊಳ್ಳುವ ಕವಿ ಪ್ರಗತಿಪರರಾಗಿದ್ದೂ ಮಹಿಳಾ ವಿಮೋಚನಾ ಚಳುವಳಿಯ ಪರಿಭಾಷೆಯಲ್ಲಿ ಮಾತನಾಡದಿರುವುದು ಕುತೂಹಲಕಾರಿಯಾಗಿದೆ.

ಟಿ. ಪಿ ಅಶೋಕ
ವಿಮರ್ಶಕ (ಸರ್ವಮಂಗಳಾ ಅವರ
ಕವನ ಸಂಕಲನ 'ಅಮ್ಮನ ಗುಡ್ಡ' ಕುರಿತು)

ಚದುರಂಗರ ಕಾದಂಬರಿಗಳಲ್ಲಿನ ಸ್ತ್ರೀಪಾತ್ರಗಳನ್ನು ಲೇಖಕಿಯರೂ ಕೂಡ ಸೃಷ್ಟಿಸಲು ಸಾಧ್ಯವಿಲ್ಲ. ಅಷ್ಟರಮಟ್ಟಿಗೆ ಹೆಣ್ಣಿನ ಮನಸ್ಸಿನ ಅಂತರಾಳ ತಿಳಿದು ಮಾನವೀಯತೆಯ ನೆಲೆಯಿಂದ ರೂಪಿಸಿದ್ದಾರೆ. ಇವರು ಕನ್ನಡದ ಶರತ್‌ಚಂದ್ರರು.

ಅನುಪಮಾ ನಿರಂಜನ (ಲೇಖಕಿ)

ಮಹಿಳೆಯರ ವಿರುದ್ಧ ದೌರ್ಜನ್ಯ ನಮ್ಮ ಮನಸ್ಸಾಕ್ಷಿಯನ್ನು ಕೊರೆಯುತ್ತಿದೆ. ಇಂತಹ ಅಪರಾಧಿಗಳಿಗೆ ಉಗ್ರ ಶಿಕ್ಷೆ ಆಗುವಂತೆ ವ್ಯವಸ್ಥೆ ಮಾಡಬೇಕು.

ರಾಷ್ಟ್ರಪತಿ ಆರ್. ವೆಂಕಟರಾಮನ್
ಸ್ವಾತಂತ್ರ್ಯ ದಿನ ಪ್ರಸಾರ ಭಾಷಣದಲ್ಲಿ

ಪುನರ್ ಸಂಘಟಿತ ಪಂಚಾಯತ್ ರಾಜ್ ವ್ಯವಸ್ಥೆಯಿಂದ ಗ್ರಾಮಸೇವಕಿಯರು ಮತ್ತು ಅಂಗನವಾಡಿ ಕಾರ್ಯಕರ್ತರ ತಳಮಟ್ಟದ ಕಾರ್ಯಕ್ರಮಗಳಿಗೆ ಹೆಚ್ಚಿನ ಬಲ ಒದಗಲಿದೆ.

ಮಾರ್ಗರೆಟ್ ಆಳ್ವ
(ಮಹಿಳಾ ಮತ್ತು ಶಿಶುಕಲ್ಯಾಣ ಖಾತೆ ರಾಜ್ಯಸಚಿವೆ)

ಮಹಿಳೆಯರು ಮತ್ತು ಮಕ್ಕಳಿಗಾಗಿ ತಳಮಟ್ಟದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾರ್ಯತಂಡಗಳನ್ನು ರಚಿಸಬೇಕೆಂದು ರಾಜ್ಯಗಳನ್ನು ಕೋರಲಾಗಿದೆ.

ಭಜನ್‌ಲಾಲ್
(ಕೇಂದ್ರ ಕೃಷಿ ಖಾತೆ ಸಚಿವ)

ವರದಕ್ಷಿಣೆ ಸಮಸ್ಯೆಯೇ ಇಲ್ಲದ ರಾತ್ರಿಯ ವೇಳೆ ನಿರ್ಭಯವಾಗಿ ಸಂಚರಿಸಲು ಮಹಿಳೆಯರಿಗೆ ಅವಕಾಶ ಇರುವಂತಹ ಅಸ್ಸಾಂನಂತಹ ರಾಜ್ಯದಲ್ಲೂ ಮಹಿಳೆಯರ ದೌರ್ಜನ್ಯ ವಿಭಿನ್ನ ರೂಪಗಳಲ್ಲಿ ಅಸ್ತಿತ್ವದಲ್ಲಿದೆ.

ನಿರುಪಮಾ ಬಾರ್ಗೊಹೈನ್
(ಖ್ಯಾತ ಅಸ್ಸಾಂ ಲೇಖಕಿ ಮತ್ತು ಪತ್ರಕರ್ತೆ)

ಓದುಗರ ವಿಭಾಗ

ನಿಮ್ಮೆಲ್ಲರ ಸಾಹಾಸಕ್ಕೆ ನಿಜವಾಗಿ ಅಭಿನಂದನೆ. ಪತ್ರಿಕೆ ನೋಡುವಾಗ ನೀವು ಅದರಲ್ಲಿ ಗಂಭೀರವಾಗಿ ತೊಡಗಿಸಿಕೊಂಡದ್ದು ಮತ್ತು ಉತ್ತಮವಾಗಿಸಲು, ನಿಜದನಿಯಾಗಿಸಲು ಹೋರಾಡುತ್ತಿರುವುದು ತಿಳಿಯುತ್ತದೆ. ನಿಮಗೆ ನನ್ನ ಹಾರ್ದಿಕ ಶುಭಾಶಯಗಳು

ವೈದೇಹಿ
ಉಡುಪಿ

ನಿಮ್ಮ ಧ್ಯೇಯೊದ್ದೇಶಗಳು ಘನವಾಗಿವೆ ಪ್ರಕಟನೆಗಾಗಿ ನೀವು ಪಡುತ್ತಿರುವ ಶ್ರಮವನ್ನು ಊಹಿಸಬಲ್ಲೆ.

ಡಾ॥. ಹಾ ಮಾ ನಾಯಕ
ಮೈಸೂರು

ತಾವು ಸ್ತ್ರೀಲೋಕಕ್ಕೆ ನೀಡುತ್ತಿರುವ ಕೊಡುಗೆ ಅಪಾರ ಈ ನಿಮ್ಮ ಕಾರ್ಯದಲ್ಲಿ ನಮ್ಮ ಬೆಂಬಲ, ಸಹಾಯ ಸರ್ವದಾ ಸಿದ್ಧ.

ಗುರುರಾಜರಾವ್
ಹಿರಿಯೂರು

ಸ್ತ್ರೀಯರ ಮೇಲೆ ಅನಾದಿ ಕಾಲದಿಂದಲೂ ಶೋಷಣೆ ನಡೆಯುತ್ತಿದೆ. ಅವನ್ನು ಎತ್ತಿ ತೋರಿಸಲು ನೀವು ಮಾಡುವ ಪ್ರಯತ್ನದ ಬಗ್ಗೆ ನನಗೆ ತುಂಬಾ ಸಂತೋಷ ಉಂಟಾಗಿದೆ.

ಪುಷ್ಪಲತ
ಕೆ. ಆರ್. ಪೇಟೆ.

ನಿಮ್ಮ ಪತ್ರಿಕೆಯ ಸಾಹಾಸದಲ್ಲಿ ಯಶಸ್ಸು ಲಭಿಸಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

ಎನ್. ನಾಗಮಣಿ
ಕಾಡುಗೋಡಿ

ನನಗೆ ಪತ್ರಿಕೆ ಹಿಡಿಸಿದೆ. ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುವ ಅನ್ಯಾಯ, ಅತ್ಯಾಚಾರ ಎತ್ತಿ ಹಿಡಿಯುವ ಪತ್ರಿಕೆ ದೊರೆಯಿತಲ್ಲಾ ಎಂದು ನಾನು ಹೆಮ್ಮೆ ಪಡುತ್ತೇನೆ.

ಹಂಸಗೀತೆ ಮುಧೋಳ
ಮುಧೋಳ

ಇತ್ತೀಚಿನ ದಿನಗಳಲ್ಲಿ ಪತ್ರಿಕೋದ್ಯಮ ಒಂದು ವ್ಯಾಪಾರದ ರೀತಿಯಾಗಿ ವಾಸ್ತವ ಸಂಗತಿಯನ್ನು ತಿರುಚಿ ಸರ್ಕಾರದ ಪರವಾಗಿಯೇ ಕಾರ್ಯನಿರ್ವಹಿಸುತ್ತ ಸಾರ್ವಜನಿಕರಿಗೆ ತಪ್ಪು ತಿಳುವಳಿಕೆ ನೀಡುತ್ತವೆ. ತಾವು ಇಟ್ಟಿರುವ ಹೆಜ್ಜೆಗಳು ನಿಜವಾಗಿಯೂ ಪ್ರಶಂಸನೀಯವಾದವುಗಳು ಹಾಗೂ ಅನಿವಾರ್ಯವಾಗಿ ಇಡಬೇಕಾದ ಅವಶ್ಯಕ ಹೆಜ್ಜೆಗಳು, ಈ ದಿಕ್ಕಿನಲ್ಲಿ ಎಚ್ಚರಿಕೆ, ತಾಳ್ಮೆ, ಶ್ರಮ, ಸಾಮಾಜಿಕ ಕಾಳಜಿ ಇಟ್ಟು ನಿರ್ವಹಿಸಿದಾಗ ಯಶ ಖಂಡಿತ. ತಾವುಗಳು ಅಂತಹ ಪ್ರಯತ್ನದಲ್ಲಿ ಸಾಗುತ್ತಾ ಮಹಿಳೆಯರಿಗೆ ಅರಿವಾಗುವ ಹಾಗೆ ಮೊದಲು ಮಾಡಿ ಅನಂತರ ಮುಂದಿನ ಕಾರ್ಯಕ್ರಮ ಹಾಕಿಕೊಳ್ಳುತ್ತೀರೆಂದು ಆಶಿಸಬಹುದಲ್ಲವೇ?

ಎಂ. ವಿ. ಕೃಷ್ಣ
ಎಂ. ಜಿ. ದೊಡ್ಡಿ

ತಮ್ಮ ಪತ್ರಿಕೆ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ ಹಾಗೂ ಅದನ್ನು ಹತ್ತಿಕ್ಕಲು ಸಾಧ್ಯವಾಗುವ ಮೆಟ್ಟಿಗೆ ಕಾರ್ಯೋನ್ಮುಖವಾಗಿರುವುದು ಸಂತಸದ ಸಂಗತಿ ತಮ್ಮ ಪತ್ರಿಕೆಗೆ ಲೇಖಕರ ಬಳಗಕ್ಕೆ ಧನ್ಯವಾದಗಳು.

ಆರ್. ಎನ್. ಗುರುರಾಜರಾವ್
ಹಿರಿಯೂರು.

ಮನುಷ್ಯರಲ್ಲಿ ಮಾನವೀಯತೆಯನ್ನು ಮೂಡಿಸುವ ಮಾನಸ ಪತ್ರಿಕೆಗೆ ಯಶಸ್ಸು ದೊರೆಯಲಿ.

ಎನ್. ಶ್ರೀನಿವಾಸ, – ಕಾಡುಗೋಡಿ.

ಸುದ್ದಿ ಸಂಕಲನ

ಮಹಿಳಾ ಪಾಲಿಟೆಕ್ನಿಕ್

ಮಹಿಳೆಯರಿಗೆ ವಸತಿ ಸೌಲಭ್ಯವಿರುವ ಪಾಲಿಟೆಕ್ನಿಕ್‌ಗಳನ್ನು ರಾಜ್ಯಗಳಲ್ಲಿ ಸ್ಥಾಪಿಸಲು ಕೇಂದ್ರ ಸರಕಾರ ಒಪ್ಪಿದೆ. ಇದಕ್ಕೆ ನೂರಕ್ಕೆ ನೂರರಷ್ಟು ನೆರವನ್ನು ಕೇಂದ್ರ ಸರಕಾರವೇ ನೀಡುವುದು.

ಸರಕಾರದ ಈ ನಿರ್ಧಾರವನ್ನು 1989ರ ಆಗಸ್ಟ್ ತಿಂಗಳಲ್ಲಿ ನಡೆದ ಸಂಸತ್ ಅಧಿವೇಶನದಲ್ಲಿ ಪ್ರಕಟಿಸಲಾಗಿದೆ.

ವರದಕ್ಷಿಣೆ

ವರದಕ್ಷಿಣೆಗಾಗಿ 1988ರಲ್ಲಿ 922ಕ್ಕೂ ಹೆಚ್ಚು ಮಹಿಳೆಯರನ್ನು ರಾಷ್ಟ್ರದಲ್ಲಿ ಸಜೀವ ದಹನ ಮಾಡಲಾಗಿದೆ.

ಈ ವಿಷಯವನ್ನೂ 1989ರ ಆಗಸ್ಟ್ ತಿಂಗಳಲ್ಲಿ ನಡೆದ ಸಂಸತ್ ಅಧಿವೇಶನದಲ್ಲಿ ಪ್ರಕಟಿಸಲಾಗಿದೆ ವರದಕ್ಷಿಣೆ ನಿರೋಧ (1961) ಕಾಯಿದೆಯನ್ನು 1984 ಮತ್ತು 1986ರಲ್ಲಿ ತಿದ್ದುಪಡಿ ಮಾಡಿ ಕಾನೂನು ಇನ್ನಷ್ಟು ಬಲಗೊಳ್ಳುವಂತೆ ಮಾಡಲಾಗಿದೆ. ವರದಕ್ಷಿಣೆಯಿಲ್ಲದೆ ವಿವಾಹಿತ ಮಹಿಳೆಯರ ಮೇಲಿನ ಇನ್ನಿತರ ಹಿಂಸಾಚಾರ ಪ್ರಕರಣಗಳ ಬಗ್ಗೆ ಹೆಚ್ಚು ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳಲು ಭಾರತದ ದಂಡ ಸಂಹಿತೆ ಮುಂತಾದ ಕಾನೂನುಗಳಿಗೂ ತಿದ್ದುಪಡಿ ಮಾಡಲಾಗಿದೆ ಎಂದು ಸಂಸತ್ತಿನಲ್ಲಿ ತಿಳಿಸಲಾಗಿದೆ.

ಮಹಿಳಾ ಸೆಲ್

ತೊಂದರೆಯಲ್ಲಿರುವ ಮಹಿಳೆಯರಿಗೆ ನೆರವಾಗುವುದಕ್ಕಾಗಿ ಬೆಂಗಳೂರು ನಗರದಲ್ಲಿ ಮಹಿಳಾ ಸೆಲ್ ಒಂದನ್ನು ಬೆಂಗಳೂರು ನಗರ ಪೊಲೀಸರು ಸ್ಥಾಪಿಸಿದ್ದಾರೆ.

ಈ ಮಹಿಳಾ ಸೆಲ್‌ನ ಉಸ್ತುವಾರಿಯನ್ನು ಇಬ್ಬರು ಮಹಿಳಾ ಸಬ್ ಇನ್ಸ್‌ಪೆಕ್ಟರುಗಳು ಹಾಗೂ ೬ ಮಹಿಳಾ ಕಾನ್ಸ್‌ಟೇಬಲುಗಳು ನೋಡಿಕೊಳ್ಳುವರು. ಈ ಸೆಲ್‌ಗೆ ದೂರು ನೀಡುವ ಮಹಿಳೆಯರ ಪ್ರಕರಣಗಳಲ್ಲಿ ಸಲಹೆ - ಸಹಕಾರ ಅಗತ್ಯವಾಗಿದ್ದಲ್ಲಿ, ಮಾನ್ಯತೆ ಪಡೆದ ಸ್ವಯಂ ಸೇವಾಸಂಸ್ಥೆಗಳ ನೆರವು ಪಡೆಯಬಹುದು. ಶಿಕ್ಷಾರ್ಹ ಅಪರಾಧಗಳನ್ನು ಒಳಗೊಂಡತಹ ದೂರುಗಳನ್ನು ಪೊಲೀಸ್ ಠಾಣೆಗಳಿಗೆ ವರ್ಗಾಯಿಸಲಾಗುವುದು.

ಮಹಿಳೆಯರ ವೇಶ್ಯಾ ವೃತ್ತಿ ವ್ಯವಹಾರ ನಿಯಂತ್ರಣದಲ್ಲಿ ಪೊಲೀಸರಿಗೆ ನೆರವಾಗುವುದಕ್ಕಾಗಿ ಪ್ರತಿಯೊಂದು ಪೊಲೀಸ್ ಉಪವಿಭಾಗದಲ್ಲಿ 5 ಸದಸ್ಯರ ಮಹಿಳಾ ಸಮಿತಿಯನ್ನು ಸ್ಥಾಪಿಸಲಾಗಿದೆ. ಮಹಿಳಾ ಸಂಘಟನೆಗಳಿಂದ ಆಯ್ಕೆಯಾದ ಸದಸ್ಯರು ಈ ಸಮಿತಿಯಲ್ಲಿರುವರು. ಮೂರು ತಿಂಗಳಿಗೆ ಒಮ್ಮೆಯಾದರೂ ಕನಿಷ್ಠ ಈ ಸಮಿತಿಗಳು ಸಭೆ ನಡೆಸಿ ಮಹಿಳಾ ಕ್ಷೇಮಾಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿಗಿರುವ ಪ್ರಗತಿಯ ಸಮೀಕ್ಷೆ ನಡೆಸುವವು ಎಂದು ಬೆಂಗಳೂರು ಪೊಲೀಸ್ ಕಮಿಷನರ್ ಆರ್. ರಾಮಲಿಂಗಂ ತಿಳಿಸಿದ್ದಾರೆ.

ಗಗನಸಖಿಯರು — ವಿವಾಹ

ಗಗನಸಖಿಯರ ವಿವಾಹದ ಮೇಲಿನ ನಿಷೇಧವನ್ನು 4 ವರ್ಷಗಳಿಂದ 3 ವರ್ಷಗಳಿಗೆ ಇಳಿಸಲು ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ನಿರ್ಧರಿಸಿದೆ. ಅಲ್ಲದೆ, 35 ವರ್ಷ ದಾಟಿದ ಗಗನಸಖಿಯರನ್ನು ವರ್ಷಕ್ಕೊಮ್ಮೆ ಬದಲಿಗೆ ಎರಡು ವರ್ಷಗಳಿಗೆ ಒಮ್ಮೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುವುದು.

ವೇಶ್ಯಾವೃತ್ತಿಗೆ ವಿರೋಧವಿಲ್ಲ

ಮಧ್ಯ ಪ್ರದೇಶದ ಮಾಂಸೌಡ್‌ರ್ ಜಿಲ್ಲೆಯ ಬಾಂಚ್ರಾ ಜನಾಂಗದ 13, 14ರ ಎಳೆಬಾಲಕಿಯರು ಆರ್ಥಿಕ ಸಂಕಷ್ಟ, ಹಿಂದುಳಿದಿರುವಿಕೆ ಹಾಗೂ ಅನಕ್ಷರತೆಯಿಂದಾಗಿ ವೇಶ್ಯೆಯರಾಗುವಂತಹ ದುಃಸ್ಥಿತಿ ಉಂಟಾಗಿದೆ. ಅಚ್ಚರಿಯ ಸಂಗತಿಯೆಂದರೆ ವೇಶ್ಯೆಯರಾಗುವ ಈ ಬಾಲಕಿಯರಿಗೆ ಯಾವುದೇ ಸಾಮಾಜಿಕ ಕಳಂಕ ಇಲ್ಲ. ಇದನ್ನು ಕುಟುಂಬದ ಆದಾಯವೆಂದು ಪರಿಗಣಿಸುವ ತಂದೆ-ತಾಯಿಯರು, ಪೋಷಕರು ತಮ್ಮ ಮಕ್ಕಳು ವೇಶ್ಯೆಯರಾಗುವುದಕ್ಕೆ ಅನುಮತಿ ನೀಡುತ್ತಾರೆ. ಸ್ಥಳೀಯ ಭಾಷೆಯಲ್ಲಿ ವೇಶ್ಯೆಯಾಗಿರುವ ಹುಡುಗಿಗೆ "ಖಿಲಾವ್ಡಿ" ಎಂದು ಕರೆಯಲಾಗುತ್ತದೆ. ಆಕೆಯ ವಿಟ ಪುರುಷನಿಗೆ "ಕಾಬೂಜಾ" ಎಂದು ಕರೆಯಲಾಗುತ್ತದೆ:

1981ರ ಜನಗಣತಿಯ ಪ್ರಕಾರ, ಮಾಂಡಸೌರ್ ಜಿಲ್ಲೆಯ 8 ತಾಲ್ಲೂಕುಗಳಲ್ಲಿ 4,332 ಮಂದಿ ಬಾಂಚ್ರಾ ಜನಾಂಗಕ್ಕೆ ಸೇರಿದವರಿಗೆ ಇದರಲ್ಲಿ ಮಹಿಳೆಯರ ಸಂಖ್ಯೆ 2,285 ಇನ್ನೊಂದ ವಿಚಿತ್ರ ವಿಷಯವೆಂದರೆ ವೇಶ್ಯಾವೃತ್ತಿ ನಡೆಸುವ ಹದಿಹರೆಯದ ಬಾಲಕಿಯರು ಈ ಉದ್ದೇಶಕ್ಕಾಗೇ ಪ್ರತ್ಯೇಕವಾಗಿ ನಿರ್ಮಿಸಿರುವ ಮನೆಗಳಲ್ಲಿ ವೇಶ್ಯಾವೃತ್ತಿ ನಡೆಸುತ್ತಾರೆ. ಅಲ್ಲದೆ ಇದೇ ಸಂದರ್ಭದಲ್ಲಿ ತಂತಮ್ಮ ಕುಟುಂಬಗಳ ಜತೆ ವಾಸಿಸುವುದನ್ನು ಮುಂದುವರೆಸುತ್ತಾರೆ.

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು ಎಚ್. ಎಸ್. ರಾಜೇಶ್ವರಿ, ಮಾನವಿ ಮುದ್ರಣಾಲಯ, ಪಂಚಾಯಿತಿ ರಸ್ತೆ ಕಾಡುಗೋಡಿ ಅಂಚೆ ಬೆಂಗಳೂರು ೫೬೦೦೬೭

ನಂ. ಮ್ಯಾಗ್ (5) ಪಿಆರ್‌ಬಿ ಡಿಕ್ಲೇರ್ಡ್ : 284/8889

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ : "ಮಾನಸ"
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು – 560067

ಸೂಚನೆ:
ಬಿಡಿಪ್ರತಿ: 2 ರೂ.
ವಾರ್ಷಿಕ ಚಂದಾ : 20 ರೂ.
ಆಜೀವ ಚಂದಾ : 250 ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್. ಎಂ. ಓ. ಮೂಲಕ ಸ್ವೀಕರಿಸಲಾಗುವುದು.